
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಏಪ್ರಿಲ್ 17, 2013 ಪುಟ 20 ರೂ. 14/-


ಉಮಾಶ್ರೀ ಇಟ್ಟ ದಿಟ್ಟ ಹೆಜ್ಜೆ





ಯಡ್ಡಿ ಸಾಕಿದ ಇಬ್ಬರೂ ಸರ್ಪವಾದರು






ರಾಸಲೀಲೆ ಸಿಡಿ ನಿರ್ಮಾಪಕ ಯಾರು?

ಕಾಂಗ್ರೆಸ್ ಕ್ರಿಮಿನಲ್ಸ್




ಚುನಾವಣೆ ಸಮೀಕ್ಷೆ



ಕಲಘಟಗಿ: ಲಾಡ್‌ನ ಪಾರುಪತ್ಯ




ಮೈಸೂರು: ರಾಮದಾಸ್ ಮಕಾಡೆ




ಕೊಪ್ಪಳ: ಪಕ್ಷಾಂತರಿ ಕರಡಿ ಮೇಲುಗೈ



ಮಂಡ್ಯ: ಮದಗಜಗಳ ಕಾಳಗ



ಬಾಗಲಕೋಟೆ: ಚೆಡ್ಡಿಗಳಿಗೆ ನಿರಾಶೆ



ಬ್ಯಾಡಗಿ: ಸೋಲಿನ ಭಯಕ್ಕೆ ಹಿಂದೆ ಸರಿದ ಸುರೇಶ್‌ಗೌಡ



ಕುಂದಗೋಳ: ವಲಸೆ ಹಕ್ಕಿ ಚಿಕ್ಕನಗೌಡರಿಗೆ ಸೋಲು



ಉತ್ತರ ಕನ್ನಡ: ಕಾಗೇರಿ ಗೆಲ್ಲಿಸಲು ದೇಶಪಾಂಡೆ-ಮ್ಯಾಗಿ ಮಸಲತ್ತು




ಶ್ರವಣಬೆಳಗೊಳ: ಪುಟ್ಟೇಗೌಡರ ಕಾಂಗ್ರೆಸ್ ಪ್ರವೇಶ,ಗೋಪಾಲಸ್ವಾಮಿ ಬೆಂಬಲಿಗರ ಆಕ್ರೋಶ



ಚಾ.ನಗರ: ಕಾಂಗ್ರೆಸ್ ವಿರುದ್ಧ ಕೆಜೆಪಿ ಕುರುಡು ಕಾಂಚಾಣ

ತಳಸಂಸ್ಕೃತಿಯೆಡೆಗಿನ ಪಯಣ ಮುಗಿಸಿದ ಚಿನುವಾ ಅಚಿಬೆ

ಆಧುನಿಕ ಆಫ್ರಿಕನ್ ಸಾಹಿತ್ಯದ ಪಿತಾಮಹ ಚಿನುವಾ ಅಚಿಬೆ 82 ವರ್ಷದ ತುಂಬು ಜೀವನ ಮುಗಿಸಿ ಮೊನ್ನೆ ಲೇಖನಿ ಕೆಳಗಿಟ್ಟು ಹೊರಟುಹೋದರು. ಚಿನುವಾ ಅಚಿಬೆಯಷ್ಟು ದಟ್ಟವಾಗಿ ಸಾಂಸ್ಕೃತಿಕ ಪಲ್ಲಟಗಳನ್ನು ತಮ್ಮ ಸಾಹಿತ್ಯಗಳಲ್ಲಿ ಚಿತ್ರಿಸಿದ ಲೇಖಕರು ವಿರಳ. ವಸಾಹತು ಮತ್ತು ವಸಾಹತೋತ್ತರ ಕಾಲದ ನೈಜೀರಿಯನ್ ಸಂಸ್ಕೃತಿಯ ಪಲ್ಲಟಗಳನ್ನು ತನ್ನ ಸಾಹಿತ್ಯದಲ್ಲಿ ದಟ್ಟವಾಗಿ ಕಟ್ಟಿಕೊಟ್ಟ ಅಚಿಬೆ ತನ್ನ ಬದುಕಿನುದ್ದಕ್ಕೂ ವಸಾಹತುಶಾಹಿ ಸಂಸ್ಕೃತಿಯೊಂದಿಗೆ ಮುಖಾಮುಖಿಯಾಗುತ್ತಲೇ ಇದ್ದರು. ಸತ್ಯವನ್ನು ತಣ್ಣಗೆ ಹೇಳುತ್ತಾ ಕೇಳುಗರನ್ನು ಬೆಚ್ಚಿಬೀಳಿಸುತ್ತಿದ್ದ ಅಚಿಬೆ ಜಾಗತಿಕ ಸಾಹಿತ್ಯ ಕ್ಷೇತ್ರ ಮರೆಯಲೇಬಾರದಂತಹ ಗಟ್ಟಿ ಛಾಪನ್ನು ತನ್ನ ಬರಹ ಮತ್ತು ಮಾತುಗಳ ಮೂಲಕ ಒತ್ತಿದವರು. ವಸಾಹತುಶಾಹಿ ಶಕ್ತಿಗಳ ಕಡು ವಿರೋಧಿಯಾಗಿದ್ದ ಅಚಿಬೆ ದೇಸಿ ಮಾದರಿ ಚಿಂತನೆಗೆ ಜಗತ್ತಿನಲ್ಲೇ ಅತ್ಯಂತ ಶ್ರೇಷ್ಠ ನಿದರ್ಶನ. ಆಫ್ರಿಕಾದ ಬಡ ರಾಷ್ಟ್ರಗಳಲ್ಲೊಂದಾದ ನೈಜೀರಿಯಾದ ಇಗ್ಬೋ ಅಥವಾ ಇಬೋ ಬುಡಕಟ್ಟಿನವರಾದ ಅವರು ನೆಲಸಂಸ್ಕೃತಿ ಅಥವಾ ತಳಸಂಸ್ಕೃತಿಯ ವೈಶಿಷ್ಟ್ಯಗಳಿಗೆ ಮತ್ತು ಅವುಗಳ ಸಾಂಸ್ಕೃತಿಕ ಶ್ರೀಮಂತಿಕೆಗೆ ತನ್ನ ಸಾಹಿತ್ಯಿಕ ಬದುಕಿನುದ್ದಕ್ಕೂ ಒಂದು ವಿಶೇಷವಾದ ಸ್ಪೇಸ್ ಕೊಟ್ಟವರು.



1981ರಲ್ಲಿ ಅಚಿಬೆ ಮೈಸೂರಿಗೆ ಭೇಟಿ ನೀಡಿದ್ದರು. ಆ ಸಂದರ್ಭ ನಮ್ಮ ಯು.ಆರ್. ಅನಂತಮೂರ್ತಿಯವರೊಂದಿಗೆ ನಡೆಸಿದ ಸಂವಾದವೊಂದರಲ್ಲಿ ಭಾರತೀಯರ ಎರವಲು ಮನೋಸ್ಥಿತಿ ಮತ್ತು ಚಿಂತನೆಯನ್ನು ಕೇವಲ ಎರಡೇ ವಾಕ್ಯಗಳಲ್ಲಿ ಚಚ್ಚಿದ್ದರು. "ಅತ್ಯಂತ ಸಮೃದ್ಧ ಪ್ರಾಚೀನ ಸಂಸ್ಕೃತಿಯುಳ್ಳ ನಿಮ್ಮ ದೇಶದಲ್ಲಿ ಬ್ರಿಟನ್ ಮತ್ತು ಅಮೆರಿಕಾದ ಸಾಹಿತ್ಯದ ಬಗ್ಗೆ ಇರುವ ಹುಚ್ಚು ಒಳ್ಳೆಯದಲ್ಲ ಎಂದೆನಿಸುತ್ತದೆ. ನಿಮ್ಮ ಅನೇಕ ವಿದ್ವಾಂಸರಿಗೆ ಬ್ರಿಟನ್ ಮತ್ತು ಅಮೆರಿಕಾದಲ್ಲಿ ಏನಾಗುತ್ತಿದೆ ಎಂಬುವುದರ ಬಗ್ಗೆಯೇ ಕಾಳಜಿ." ಅಚಿಬೆಯವರ ಈ ಮಾತುಗಳು ಇಂಗ್ಲಿಷ್‌ನಲ್ಲೇ ಸಾಹಿತ್ಯ ಕೃಷಿ ಮಾಡಿದ ಇವರ ದ್ವಂದ್ವ ನಿಲುವಿನಂತೆ ಮೇಲ್ನೋಟಕ್ಕೆ ಭಾಸವಾಗುತ್ತದಾದರೂ ಆಳದಲ್ಲಿ ಈ ಮಾತಿನ ಹಿಂದೆ ವಸಾಹತುಶಾಹಿ ಮನೋಸ್ಥಿತಿಯನ್ನು ಕೆಡವಬೇಕೆಂಬ ಅಪಾರ ಕಾಳಜಿ ಇರುವುದು ಸ್ವಲ್ಪ ಗಹನವಾಗಿ ಯೋಚಿಸಿದಾಗ ನಮಗೆ ಮನದಟ್ಟಾಗುತ್ತದೆ. ಇಂಗ್ಲಿಷ್‌ನಲ್ಲೇ ಸಾಹಿತ್ಯ ರಚಿಸಿ ತನ್ನ ಜನರಿಂದ ಅಚಿಬೆ ದೂರವಾಗುತ್ತಿದ್ದಾರೆ ಎಂಬ ಟೀಕೆಯು ಆಫ್ರಿಕನ್ ಸಾಹಿತ್ಯಕ ವಲಯದಿಂದ ಮತ್ತು ಅಚಿಬೆಯ ಪೆಟ್ಟು ತಾಳಲಾರದ ಇಂಗ್ಲಿಷ್ ಲೇಖಕರಿಂದ ಮತ್ತು ಚಿಂತಕರಿಂದ ಅನೇಕ ಬಾರಿ ವ್ಯಕ್ತವಾಗಿದೆ. ಒಂದೆಡೆ ಆಫ್ರಿಕಾದ ಇನ್ನೊಂದು ಬಡ ದೇಶ ಕೀನ್ಯಾದ ಪ್ರಸಿದ್ಧ ಸಾಹಿತಿ ಗೂಗಿ ವಾ ಥಿಯಾಂಗೊ ಆಫ್ರಿಕನ್ ಭಾಷೆ ನಶಿಸಲು ಇಂಗ್ಲಿಷನ ದಾಳಿಯೇ ಕಾರಣ ಎಂದು ಸಿಡಿದೆದ್ದರೆ, ಇನ್ನೊಂದೆಡೆ ಅಚಿಬೆ ಯಾವ ಮುಲಾಜೂ ಇಲ್ಲದೇ ಇಂಗ್ಲಿಷ್‌ನಲ್ಲೇ ಸಮೃದ್ಧ ಸಾಹಿತ್ಯ ರಚಿಸಿದರು. ಗೂಗಿ ವಾ ಥಿಯಾಂಗೋ ಇಂಗ್ಲಿಷ್ ಪ್ರಾಬಲ್ಯದ ವಿರುದ್ಧ ಸಿಡಿದೆದ್ದು ತನ್ನದೇ ಭಾಷೆಯಲ್ಲಿ ಬರೆದರೆ ಅದು ತನ್ನ ಭಾಷಿಕ ಜನರಿಂದಾಚೆಗೆ ಹೋಗುವುದೇ ಇಲ್ಲ (ಪ್ರತೀ ಬಾರಿಯೂ ಲೇಖಕನೊಬ್ಬನ ಬರಹಗಳು ಅನುವಾದವಾಗುತ್ತದೆಯೆನ್ನಲಾಗದು). ಆಫ್ರಿಕನ್ ಸಂಸ್ಕೃತಿಯ ಮೇಲೆ ಅದಮ್ಯ ಪ್ರೀತಿಯಿಟ್ಟುಕೊಂಡಿದ್ದ ಅಚಿಬೆ ತನ್ನ ಸಾಹಿತ್ಯದ ಮೂಲಕ ಜಗತ್ತಿನ ಮೂಲೆ ಮೂಲೆಗೂ ತಲುಪಿದರು. ತನ್ನ ಬುಡಕಟ್ಟು ಸಂಸ್ಕೃತಿಯ ಶ್ರೀಮಂತಿಕೆಯನ್ನು ಜಗತ್ತಿಗೆ ಪರಿಚಯಿಸಿದರು. ಆದರೆ ಅಚಿಬೆ ಯಾವತ್ತೂ ಎಚ್ಚರ ತಪ್ಪಿದವರಲ್ಲ ಎಂಬ ವಿಚಾರವನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು.

ಅಚಿಬೆಯವರದ್ದೇ ಮಾತುಗಳಲ್ಲಿ ಕೇಳಬೇಕಾದರೆ "ನಾನು ನನ್ನದೇ ಬುಡಕಟ್ಟು ಭಾಷೆಯಲ್ಲಿ ನನ್ನ ಇಬೋ ಜನರ ನೋವು-ನಲಿವುಗಳನ್ನು ಬರೆದರೆ ಅದು ಇಬೋ ಸಂಸ್ಕೃತಿಯ ಗಡಿ ದಾಟಿ ಆಚೆ ಹೋಗುವುದಿಲ್ಲ. ಒಂದೊಮ್ಮೆ ಹೋದರೂ ಅದಕ್ಕೆ ನೈಜೀರಿಯಾದ ಪರಿಧಿ ಮೀರಿ ಹೋಗಲು ಸಾಧ್ಯವಿಲ್ಲ. ನಮ್ಮ ಇಬೋ ಸಂಸ್ಕೃತಿಗೆ ಮತ್ತು ಅದರ ಶ್ರೀಮಂತಿಕೆಗೆ ವಿಶಾಲ ಓದುಗ ಸಮೂಹ ಸಿಗಬೇಕಾದರೆ, ನಮ್ಮ ಕಪ್ಪು ಸಂಸ್ಕೃತಿಯ ಸಮೃದ್ಧ ವಿಚಾರಗಳು ಜಗತ್ತಿನ ಮೂಲೆಮೂಲೆಗೂ ತಲುಪಬೇಕಾದರೆ ಅದಕ್ಕೆ ಇಂಗ್ಲಿಷ್ ಭಾಷೆಯ ನೆರವಿನ ಅಗತ್ಯವಿದೆ."

ಚಿನುವಾ ಅಚಿಬೆ ಎಂದಾಕ್ಷಣ ಇಂಗ್ಲಿಷ್ ಸಾಹಿತ್ಯದ ಚೂರುಪಾರು ಜ್ಞಾನವುಳ್ಳವರಿಗೂ ತಕ್ಷಣ ಹೊಳೆಯುವುದು 'ಥಿಂಗ್ಸ್ ಫಾಲ್ ಅಪಾರ್ಟ್' ಎಂಬ ಈ ಮೂರು ಪದಗಳ ಪುಟ್ಟ ವಾಕ್ಯ. ಅಷ್ಟರಮಟ್ಟಿಗೆ ಅಚಿಬೆಯವರ ಹೆಸರು ಈ ಕೃತಿಯೊಂದಿಗೆ ಜೋಡಿಸಲ್ಪಟ್ಟಿದೆ. ಅಚಿಬೆಯವರತ್ತ ಜಾಗತಿಕ ಸಾಹಿತ್ಯ ಕ್ಷೇತ್ರ ಕುತೂಹಲದ ದೃಷ್ಟಿ ಬೀರಲು ಈ ಕೃತಿಯೇ ಮುಖ್ಯ ಕಾರಣವೆಂದರೆ ಅಚಿಬೆಯ ದೈತ್ಯ ಪ್ರತಿಭೆಗೆ ಖಂಡಿತಾ ಅವಮಾನವೆಸಗಿದಂತಾಗದು. ಥಿಂಗ್ಸ್ ಫಾಲ್ ಅಪಾರ್ಟ್ ಅಚಿಬೆಯ ಚೊಚ್ಚಲ ಕಾದಂಬರಿ. ಈ ಕಾದಂಬರಿಯೊಂದಿಗೆ ಪ್ರಾರಂಭವಾದ ಅಚಿಬೆಯ ನೆಲಸಂಸ್ಕೃತಿಯೊಂದಿಗಿನ ಬಿಡಿಸಲಾಗದ ನಂಟು ಅವರ ಅರ್ಧ ಶತಮಾನಕ್ಕೂ ಹೆಚ್ಚಿನ ಸಾಹಿತ್ಯಿಕ ಬದುಕಿನುದ್ದಕ್ಕೂ ಬೆಳೆಯುತ್ತಾ ಬಂದಿದೆ.

1958ರಲ್ಲಿ ಬರೆದ ಥಿಂಗ್ಸ್ ಫಾಲ್ ಅಪಾರ್ಟ್ ಕಾದಂಬರಿಯ ಹೆಸರಲ್ಲೇ ಒಂದು ವೈಶಿಷ್ಟ್ಯವಿದೆ. ಪ್ರಸಿದ್ಧ ಆಂಗ್ಲ ಕವಿ ವಿಲಿಯಂ ಬಟ್ಲರ್ ಯೇಟ್ಸ್‌ನ ಲೋಕವಿಖ್ಯಾತ ಕವನ ದಿ ಸೆಕೆಂಡ್ ಕಮಿಂಗ್‌ನ ಒಂದು ಸಾಲನ್ನೇ ಅಚಿಬೆ ತನ್ನ ಚೊಚ್ಚಲ ಕಾದಂಬರಿಯ ಶೀರ್ಷಿಕೆಯಾಗಿಸಿದರು. ಬ್ರಿಟಿಷ್ ವಸಾಹತುಶಾಹಿಗಳು ನೈಜೀರಿಯಾದಲ್ಲಿ ತಮ್ಮ ಸಾಮ್ರಾಜ್ಯ ಸ್ಥಾಪಿಸಿದ ಬಳಿಕ ಅಲ್ಲಿನ ಇಬೋ ಬುಡಕಟ್ಟು ಸಂಸ್ಕೃತಿಯನ್ನು ಕ್ರೈಸ್ತ ಧರ್ಮದ ಹೆಸರಲ್ಲಿ ಮತ್ತು ದೇವರ ಹೆಸರಲ್ಲಿ ಆಪೋಷನ ತೆಗೆದುಕೊಳ್ಳಲು ಯತ್ನಿಸುತ್ತಾರೆ. ಇಬೋ ಸಂಸ್ಕೃತಿಯ ಧರ್ಮಾಧಾರಿತ ಏಕ ಸಂಸ್ಕೃತಿಯ ಹೇರಿಕೆಯಿಂದ ಪತನದಂಚಿಗೆ ಸಾಗುವುದನ್ನು ಕಂಡು ಸಹಿಸಲಾಗದ ಒಕೋಂಕ್ವೊ ಎಂಬ ಬುಡಕಟ್ಟು ರೈತನೊಬ್ಬ ತನ್ನ ನೆಲದ ಮೂಲಸಂಸ್ಕೃತಿಯ ಉಳಿವಿಗಾಗಿ ಪ್ರಯತ್ನಿಸುವ ದುರಂತ ಹೋರಾಟ ಕಥನವೇ ಥಿಂಗ್ಸ್ ಫಾಲ್ ಅಪಾರ್ಟ್.

ಕಾದಂಬರಿಯ ಮೊದಲರ್ಧ ಭಾಗದಲ್ಲಿ ಇಬೋ ಸಂಸ್ಕೃತಿಯ ವೈಶಿಷ್ಟ್ಯತೆ ಮತ್ತು ಶ್ರೀಮಂತಿಕೆಯನ್ನು ಕಟ್ಟಿಕೊಡುವ ಅಚಿಬೆ ದ್ವಿತೀಯಾರ್ಧದಲ್ಲಿ ಅದನ್ನು ಆಪೋಷನ ತೆಗೆದುಕೊಳ್ಳುವ ವಸಾಹತುಶಾಹಿ ಕ್ರೌರ್ಯವನ್ನು ಕಟ್ಟಿಕೊಡುತ್ತಾರೆ. ವಸಾಹತುಶಾಹಿ ಕ್ರೌರ್ಯದ ವಿರುದ್ಧ ಸಿಡಿಯುವ ಕಥಾನಾಯಕ ಒಕೋಂಕ್ವೊ ಗ್ರಾಮೀಣ ನೈಜೀರಿಯನ್ ಬಡಕುಟುಂಬದಲ್ಲಿ ಜನಿಸಿದ್ದರೂ ತನ್ನ ಕಠಿಣ ಪರಿಶ್ರಮದಿಂದ ಬೆಳೆದು ಒಳ್ಳೆಯ ರೈತನಾಗುತ್ತಾನೆ ಮತ್ತು ಹಳ್ಳಿಯ ಮುಖ್ಯಸ್ಥನಾಗುತ್ತಾನೆ. ತನ್ನ ಇಬೋ ಸಂಸ್ಕೃತಿಯ ಬಗ್ಗೆ ತುಂಬು ಅಭಿಮಾನವಿಟ್ಟುಕೊಂಡಿದ್ದ ಒಕೋಂಕ್ವೊಗೆ ಬ್ರಿಟಿಷರು ದೇವರು ಧರ್ಮದ ಹೆಸರಿನಲ್ಲಿ ತನ್ನ ಜನತೆ ಮತ್ತು ಸಂಸ್ಕೃತಿಯ ಮೇಲೆ ಪಾರಮ್ಯ ಸಾಧಿಸುವುದನ್ನು ಕಂಡು ಸಹಿಸಲಾಗುವುದಿಲ್ಲ. ವಸಾಹತುಶಾಹಿಯು ಜನರನ್ನು ತನ್ನೆಡೆಗೆ ಒಲಿಸಿಕೊಳ್ಳಲು ಆರೋಗ್ಯ ಸೇವೆಯನ್ನು ಮುಂದಿಟ್ಟುಕೊಂಡು ಮಾಡುವ ಕುಟಿಲ ರಾಜಕೀಯ ತಂತ್ರವನ್ನು ಅರ್ಥೈಸುವ ಒಕೋಂಕ್ವೊ ಹೋರಾಟಕ್ಕಿಳಿಯುತ್ತಾನೆ. ಆದರೆ ಕಟ್ಟಕಡೆಯಲ್ಲಿ ತನ್ನ ತಳ ಸಂಸ್ಕೃತಿ ರಕ್ಷಣೆಯ ಹೋರಾಟದಲ್ಲಿ ತಾನು ಏಕಾಂಗಿಯಾಗುವುದನ್ನರಿತು ಮಾನಸಿಕ ವೇದನೆ ತಾಳಲಾರದೆ ಒಕೋಂಕ್ವೊ ಆತ್ಮಹತ್ಯೆಗೈಯುತ್ತಾನೆ.

ಥಿಂಗ್ಸ್ ಫಾಲ್ ಅಪಾರ್ಟ್‌ನ ನಿರೂಪಣೆ ಬಹಳ ವಿಶಿಷ್ಟವಾದುದು. ಅಚಿಬೆ ಕಾದಂಬರಿಯ ನಿರೂಪಕನ ವ್ಯಕ್ತಿತ್ವದ ಬಗ್ಗೆ ತನಗೇ ಖಾತ್ರಿಯಿಲ್ಲ ಎನ್ನುತ್ತಾರೆ. ಇಬೋ ಜನಾಂಗದ ಒಟ್ಟು ಧ್ವನಿಯನ್ನು ಒಬ್ಬನ ಮೂಲಕವೇ ಅಭಿವ್ಯಕ್ತಿಸುವುದಕ್ಕೆ ಬದಲಾಗಿ ಬೇರೆ ಬೇರೆ ಪಾತ್ರಗಳ ಮೂಲಕ ನಿರೂಪಿಸುವ ಅಚಿಬೆಯ ವಿಶಿಷ್ಟ ಶೈಲಿ ಅನನ್ಯವಾದದ್ದು.

ಥಿಂಗ್ಸ್ ಫಾಲ್ ಅಪಾರ್ಟ್ ಬಹುಸಂಸ್ಕೃತಿಂ… ನೆಲೆವೀಡಾಗಿರುವ ಭಾರತದ ಸಂದರ್ಭಕ್ಕೂ ಚೆನ್ನ… ಹೋಲಿಕೆಯಾಗುತ್ತದೆ. ಭಾರತದ ಉದ್ದಗಲಕ್ಕೂ ಹರಡಿರು… ಭಿನ್ನವಿಭಿನ್ನ ಜನಾಂಗಿಕ ಸಂಸ್ಕೃತಿಗಳು, ಪ್ರಾದೇಶಿಕ ಸಂಸ್ಕೃತಿಗ… ಹೀಗೆ ಬಹು ಸಂಸ್ಕೃತಿಯ ತಲೆಯ ಮೇಲೆ ಕಾಲಿಟ್ಟ… ಅವುಗಳನ್ನು ಪಾತಾಳಕ್ಕೆ ತಳ್ಳುವ ಆಗಮ ಆರ್ಯ… ಸಂಸ್ಕೃತಿಯಿರಬಹುದು. ಈ ನೆಲಕ್ಕೆ ಸ್ವಲ್ಪವೂ ತಾಳೆಯಾಗ… ವಸಾಹತುಶಾಹಿಗಳು ಬಿಟ್ಟುಹೋದ 'ಪಾಶ್ಚಾ… ಸಂಸ್ಕೃತಿಯಿರಬಹುದು. ಈ ನೆಲದ ಮೂಲನಿವಾಸಿಗ… ಮೇಲೆ ಸಾಂಸ್ಕೃತಿಕ ಯಜಮಾನಿಕೆ ತೋರುತ್ತಿರುವ ವೈದಿ… (Monoculture) ಸಂಸ್ಕೃತಿಯಿರಬಹುದ… ಜಾಗತೀಕರಣವೆಂಬ ಬ್ರಹ್ಮರಾಕ್ಷಸನಿರಬಹುದು. ಇವೆ… ಸಾಂಸ್ಕೃತಿಕ ಯಜಮಾನಿಕೆಗೂ ಅಚಿಬೆಯ ಇಬೋ… ಸಂಸ್ಕೃತಿಯ ಮೇಲೆ ಪಾರಮ್ಯ ಸಾಧಿಸಿದ ಬ್ರಿಟಿಷ… ವಸಾಹತುಶಾಹಿಯ ಸಾಂಸ್ಕೃತಿಕ ಯಜಮಾನಿಕೆಗೂ ಬಹ… ಸಾಮ್ಯವಿದೆ ಎಂಬುದನ್ನು ಅಲ್ಲಗಳೆಯಲು ಸಾಧ್ಯವೇ ಇ…

ಥಿಂಗ್ಸ್ ಫಾಲ್ ಅಪಾರ್ಟ್ ಜಗತ್ತಿನ 50 ಭಾಷೆಗಳ… ಅನುವಾದಗೊಂಡಿದೆ. ಸಿ. ನಾಗಣ್ಣ ಎಂಬ ಲೇಖಕರ… ಇದನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಆ್ಯರೋ ಆಫ್ ಗಾಡ… ನೋ ಲಾಂಗರ್ ಎಟ್ ಈಸ್, ಎ ಮ್ಯಾನ್ ಆಫ್ ದ… ಪೀಪಲ್, ಆ್ಯಂಟ್ ಹಿಲ್ಸ್ ಆಫ್ ಸವನ್ನಾ ಮುಂತಾದವುಗಳ… ಅಚಿಬೆಯ ಕೆಲವು ಪ್ರಮುಖ ಕಾದಂಬರಿಗಳು. ಇನ್ನು… ಅನೇಕ ಕಾದಂಬರಿಗಳು, ಕವನಗಳು, ವಿಮರ್ಶೆಗಳು, ಮಕ್ಕ… ಸಾಹಿತ್ಯ, ಪ್ರಬಂಧಗಳು- ಹೀಗೆ ಸಾಹಿತ್ಯದ ಎಲ… ಪ್ರಾಕಾರಗಳಲ್ಲೂ ಕೈಯಾಡಿಸಿದ ಶ್ರೇಷ್ಠ ಸವ್ಯಸಾಚಿ ಅಚಿಬೆ… ಅಚಿಬೆಗೆ ಹಲವಾರು ಅಂತಾರಾಷ್ಟ್ರೀಯ ಶ್ರೇಷ್ಠ ಸಾಹಿತ್… ಪುರಸ್ಕಾರಗಳು ದೊರೆತಿವೆ. ಅಚಿಬೆಯ ಪ್ರತಿಭೆಯ ಮುಂ… ನೊಬೆಲ್ ಕೂಡಾ ತಲೆತಗ್ಗಿಸಬೇಕು. ವಸಾಹತುಶಾಹಿ… ಸಾಮ್ರಾಜ್ಯಶಾಹಿ ಶಕ್ತಿಗಳ ಕಪಿಮುಷ್ಠಿಯಲ್ಲಿರುವ ನೊಬೆಲ್… ವಸಾಹತುಶಾಹಿ ಮತ್ತು ಸಾಮ್ರಾಜ್ಯಶಾಹಿಯ ಕಟು… ಟೀಕಾಕಾರನಾದ ಅಚಿಬೆಗೆ ಹೇಗೆ ತಾನೆ ಒಲಿದೀತು?


ಸಾದತ್ ಹಸನ್ ಮಂಟೋ 'ತೋಬಾ ತೇಕ್ ಸಿಂಗ್'… ಎಂಬ ಕಥೆಯ ಹೊರತಾಗಿ ಬೇರೇನನ್ನೂ… ಬರೆಯದಿರುತ್ತಿದ್ದರೂ ಆ ಒಂದು ಕಥೆಯೇ ಆತನಿಗೆ ಜಾಗತಿ… ಸಾಹಿತ್ಯದಲ್ಲಿ ಉನ್ನತ ಸ್ಥಾನವೊದಗಿಸುತ್ತಿತ್ತು ಎಂದು… ಹೇಳಲಾಗುತ್ತದೋ ಹಾಗೆಯೇ ಚಿನುವಾ ಅಚಿಬೆಗೆ ಥಿಂಗ್… ಫಾಲ್ ಅಪಾರ್ಟ್.

ಅಚಿಬೆಯ ಆಫ್ರಿಕನ್ ಜನರನ್ನು ತನ್ನ 'ಹಾರ್ಟ್ ಆಫ… ಡಾರ್ಕ್‌ನೆಸ್' ಕೃತಿಯಲ್ಲಿ ನಿಕೃಷ್ಟರಾಗಿ ಚಿತ್ರಿಸಿದ ಜೋಸೆಫ… ಕಾನ್ರಾಡ್‌ನನ್ನು ಅಚಿಬೆ "ಅವನೊಬ್ಬ ಬ್ಲಡಿ ರೇಸಿಸ್ಟ್… ಎಂದು ಯಾವ ಮುಲಾಜೂ ಇಲ್ಲದೆ ಒಗೆದು ಬಿಟ್ಟಿದ್ದರು… ತನ್ನ ಕಪ್ಪು ಜನರ ಕುರಿತಂತೆ, ಕಪ್ಪು ಸಂಸ್ಕೃತಿಯ ಕುರಿತಂ… ಕೀಳ್ಮಟ್ಟದ ಬರಹಗಳಿಗೆ ಅಚಿಬೆಯಷ್ಟು ಜೋರಾಗಿ ಸಿಡಿದ… ಸಾಹಿತಿ ಇನ್ನೊಬ್ಬನಿಲ್ಲ. ಅಚಿಬೆಯಿಂದಲೇ ಸ್ಫೂರ್ತಿ ಪಡೆ… ನೊಬೆಲ್ ವಿಜೇತ ಕಪ್ಪು ಸಾಹಿತಿ ಟೋನಿ ಮಾರಿಸ… ಅಚಿಬೆಯಷ್ಟು ತೀಕ್ಷ್ಣವಾಗಿ ಎಂದೂ ಬಿಳಿಯರ ಮೇ… ಮುಗಿಬಿದ್ದದ್ದಿಲ್ಲ. ಅಂದಮಾತ್ರಕ್ಕೆ ಅಚಿಬೆಯದ್ದು ಅಸೀಮ… ದ್ವೇಷವಂತೂ ಅಲ್ಲವೇ ಅಲ್ಲ. ಅಚಿಬೆಯ ಪ್ರಕಾ… ಅವರವರಿಗೆ ಅವರವರದ್ದು ಶ್ರೇಷ್ಠ. ಯಾವುದೂ ನಿಕೃಷ್ಟವ… ಅಚಿಬೆ ನಿಜಕ್ಕೂ ಬಹು ಉದಾರಿಯಾಗಿದ್ದರು.

● ಇಸ್ಮತ್ ಫಜೀರ್

ಚಂಪಾ ದುರಂತ

ಸಾಂಸ್ಕೃತಿಕ ವಿವೇಚನೆಯ ತೀಕ್ಷ್ಣಮತಿ, ಖ್ಯಾತ ಬಂಡಾಯ ಸಾಹಿತಿ ಎಂದೆಲ್ಲ ಕರೆಯಿಸಿ-ಹೊಗಳಿಸಿಕೊಂಡು ಬಂದ 'ಚಂಪಾ' ಎಂಬ ಪ್ರೊಫೆಸರ್ ಚಂದ್ರಶೇಖರ ಪಾಟೀಲ ಅವರು ರಾಜ್ಯ ರಾಜಕೀಯದ ಹಿನ್ನೆಲೆಯಲ್ಲಿ ಕೆಜೆಪಿ ಪಕ್ಷದೊಳಗೆ ಪಾದಾರ್ಪಣೆ ಮಾಡುವುದರ ಮೂಲಕ ಆಶ್ಚರ್ಯ ಮೂಡಿಸಿ, ತಮ್ಮ ಹೋರಾಟಮಯ ಬದುಕಿನ ದುರಂತಕ್ಕೆ ಬಹಿರಂಗವಾಗಿ ವ್ಯಾಖ್ಯಾನ ಬರೆದು ಬಿಸಾಕಿದ್ದಾರೆ.



ಹಾಗಂತ ಚಂಪಾ ರಾಜಕೀಯಕ್ಕೆ ಪ್ರವೇಶ ಮಾಡಬಾರದಿತ್ತು ಎಂದಲ್ಲ. ರಾಜಕೀಯ ಅವರಿಗೇನೂ ಹೊಸದಲ್ಲ. ಬಹುಶಃ ಬೇರೆ ಪಕ್ಷದವರು ಅವರನ್ನು ನಿರಾಕರಿಸಿದರೋ ಅಥವಾ ತಾವೇ ಅವುಗಳತ್ತ ಮನಸ್ಸು ಮಾಡಲಿಲ್ಲವೋ. ಕಳೆದ ಅನೇಕ ವರ್ಷಗಳಿಂದ ಈ ರಂಗದ ಪ್ರವೇಶಕ್ಕಾಗಿ ಗುದಮುರಗಿ ಹಾಕುತ್ತಲೇ ಈಗ ಕೆಜೆಪಿಯಲ್ಲಿ ಮುಗ್ಗರಿಸಿ ಬಿದ್ದಿರುವುದು 'ಚಂಪಾ ಅಂದರೆ ಇಷ್ಟೇನಾ?' ಎನ್ನುವಂತಾಗಿದೆ. ಹಾಗಂತ ಇನ್ನುಳಿದ ಪಕ್ಷಗಳು ಭ್ರಷ್ಟಾಚಾರದಿಂದ ಮುಕ್ತವಾಗಿವೆ ಎಂದು ಭಾವಿಸಬೇಕಾಗಿಲ್ಲ. ಬಾಡಿದ ಕಮಲದ ಹೂವಿಗೆ ನೀರು ಸಿಂಪಡಿಸಿ ಸಿದ್ಧಪಡಿಸಿದ ಕೆಜೆಪಿಯ ಹಾರ ಕೊರಳಿಗೆ ಎಳೆದುಕೊಳ್ಳುತ್ತಿದ್ದಂತೆ ಚಂಪಾ ಅವರು 'ಸಾರ್ವಜನಿಕ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ' ಎಂದಿದ್ದಾರೆ. ಹಾಗೇ ಹೇಳಿರುವಲ್ಲಿ ಅವರ ಜಾಣತನದ ಬಗ್ಗೆ ಶಂಕೆ ಮೂಡುತ್ತದೆ. ಕಳೆದ ಚುನಾವಣೆಯಲ್ಲಿ ವಿಧಾನಸಭೆಗೆ ಸ್ಪರ್ಧಿಸಿ ಮುಖಭಂಗವಾದ ಅನುಭವದ ಆಧಾರದ ಮೇಲೆ, ನೇರವಾದ ಚುನಾವಣೆಯಲ್ಲಿ ತಾನು ಗೆಲ್ಲುವುದಕ್ಕೆ ಸಾಧ್ಯವಿಲ್ಲ ಎಂಬುದನ್ನು ಅರಿತುಕೊಂಡಂತಾಗಿದೆ. ಹೀಗಾಗಿ ಈ ಎಲ್ಲ ತಯಾರಿ ಅವರ ಬೇರೆಯ ಲೆಕ್ಕಾಚಾರವೇ ಆಗಿದ್ದು, ಮುಂದೊಂದು ದಿನ ಇವರೂ ಸಹಿತ ಹಿತ್ತಲ ಬಾಗಿಲಿನಿಂದ ವಿಧಾನಸೌಧದ ಬಾಲ್ಕನಿಗೆ ಅಂದರೆ ಮೇಲ್ಮನೆಗೆ (= ಹಿತ್ತಲು ಬಾಗಿಲಿನಿಂದ ಬಂದ ಬುದ್ಧಿವಂತರ ಮನೆ) ಪ್ರವೇಶಿಸಿದರೆ ಯಾರೂ ಆಶ್ಚರ್ಯ ಪಡಬೇಕಾದ ಅವಶ್ಯಕತೆಯಿಲ್ಲ.

ತಮ್ಮ ಬರಹ ಮತ್ತು ಭಾಷಣದಿಂದ ಉದ್ದಕ್ಕೂ ಅನ್ಯಾಯ, ಅನೀತಿ, ಭ್ರಷ್ಟಾಚಾರ, ಜಾತಿಯತೆ, ಗುಂಪುಗಾರಿಕೆ, ವ್ಯಭಿಚಾರಗಳ ವಿರುದ್ಧ ಅತ್ಯಂತ ತೀಕ್ಷ್ಣ ಹಾಗೂ ತ್ವರಿತವಾದ ಪ್ರತಿಸ್ಪಂದನೆಯ ಮೂಲಕ ಸಾಹಿತ್ಯ ಹಾಗೂ ಸಾರ್ವಜನಿಕ ವಲಯದಲ್ಲಿ ಚಂಪಾ ತಮ್ಮದೇ ಆದ ಛಾಪು ಮೂಡಿಸಿದವರು. ಕನ್ನಡ ಸಾಂಸ್ಕೃತಿಕ ವಲಯದಲ್ಲಿ ಯಾವುದೇ ಏಜಂಟರನ್ನು ಹಾಗೂ ಬಹುಪರಾಕ್ ಹೇಳುವ ಬಾಲಬಡುಕರನ್ನು ಕಟ್ಟಿಕೊಳ್ಳದೆ ಒಂದು ರೀತಿಯಲ್ಲಿ ಒಂಟಿಸಲಗದಂತೆ ನಡೆದು, ಹೊಸ ಹಾದಿಯ ಗುರುತು ಹಾಕಿದವರು. ವೈಯಕ್ತಿಕ ಹಾಗೂ ಸಾಮಾಜಿಕ ಬದುಕಿನ ಮಧ್ಯ ಪಾರದರ್ಶಕತೆಯನ್ನು ಕಾಯ್ದುಕೊಳ್ಳದ ಅದೆಷ್ಟೋ ಸಾಹಿತಿಗಳ ಸೊಂಟ ಮುರಿದು ಹೆಡಮುರಗಿ ಕಟ್ಟುತ್ತ ಬಂದವರು. ಈ ಕಾರಣಕ್ಕಾಗಿ ಇನ್ನುಳಿದ ಬಂಡಾಯ ಸಾಹಿತಿಗಳಿಗಿಂತ ಚಂಪಾ ಅವರಿಗೆ ಒಂದು ರೀತಿಯ ಭಿನ್ನವಾದ ಸ್ಥಾನ ಮತ್ತು ಮಾನವಿತ್ತು. ಈಗ ಅವರೇ ಅದನ್ನೆಲ್ಲ ಬೀದಿಗೆ ಬಂದು ಹರಾಜು ಹಾಕಿದ್ದಾರೆ.

ಯಾವುದರ ವಿರುದ್ಧ ಹೋರಾಡುತ್ತ ಬಂದಿದರೋ ಅದರ ಜೊತೆಯಲ್ಲಿಯೇ ಕೈಕಾಲುಗಳನ್ನು ಜೋಡಿಸಿ, ಹಾಸಿಗೆ ಹಾಸುವುದರ ಮೂಲಕ ಅವರ ಹೋರಾಟದ ಬದ್ಧತೆಯನ್ನು ಪ್ರಶ್ನಿಸಲು ಅವಕಾಶ ಮಾಡಿಕೊಟ್ಟಿದ್ದಾರೆ. ಈ ನಿರ್ಧಾರ… ಅವರು ಬೇಕಾದಷ್ಟು, ಬೇಕಾದ ರೀತಿಯಲ್ಲಿ ಸಬೂಬುಗಳನ್ನು ನೀಡಬಹುದು… ಹೊಳೆಯಲ್ಲಿ ಹುಣಸೆಹಣ್ಣು ತೊಳೆದಾಗಿರುವುದರಿಂದ ಅದರ ಅವಶ್ಯಕತೆಯಿ… ಎನ್ನಿಸುತ್ತದೆ. ಚಂಪಾ ಅವರು 1995ರಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರ… ಅಧ್ಯಕ್ಷ ಗಾದಿಗಾಗಿ ಬೆಂಗಳೂರಿನತ್ತ ಮುಖ ಮಾಡಿ ಹೊರಟಾ… ತಮ್ಮ ಹೋರಾಟದ ಹೆಜ್ಜೆ ಗುರುತುಗಳ ಮೆಟ್ಟಿಲುಗಳನ್ನು… ಧಾರವಾಡದಲ್ಲಿಯೇ ಕಳಚಿಟ್ಟು ಹೋದ ಸುಳಿವು ಸುಳಿದಾಡುತ್ತಿತ್ತು… ಆ ಸುಳಿವಿಗೆ ಈಗ ತಾವೇ ಪ್ರತ್ಯಕ್ಷ ಸಾಕ್ಷಿ ಒದಗಿಸಿಕೊಟ್ಟಿದ್ದಾ…

ಹೋರಾಟ-ಚಳವಳಿಗಳೆಲ್ಲಾ ಇಂದು ವಿಧಾನಸೌಧದ… ಅಂಗಳದವರೆಗೆ ಬಂದು, ಆರಿ ಅಂಗಾರಾಗಿ ಹಾರಿ ಹೋರಟಿವೆ… ಕನ್ನಡತ್ವದ ಹಿತಾಸಕ್ತಿಗಳಿಗೆ ಪಕ್ಷಗಳನ್ನು ಬಗ್ಗಿಸಬೇಕಾದ ಇಂಥ… ಹೋರಾಟಗಾರರು, ತಮ್ಮ ಹೋರಾಟದ ರಥವನ್ನು ವಿಧಾನಸೌಧದ ಬಯಲಿನಲ್ಲಿ… ನಿಲ್ಲಿಸಿ, ಸದ್ದಿಲ್ಲದೆ ಒಳಗೆ ನಡೆದುಹೋಗುವುದು ಅವರ ಸಾಮಾಜಿಕ ಬದ್ಧತೆಯ… ದುರಂತಕ್ಕೆ ಸಾಕ್ಷಿಯಾಗಿದೆ. ಚಂಪಾ ಅವರು ಕೆಜೆಪಿಯನ್ನು ಪ್ರವೇಶಿಸಿ ತಮ್ಮ… ನೈತಿಕ ಅಧಃಪತನವನ್ನು ತೋರ್ಪಡಿಸಿದ್ದಾರೆ. ಹೀಗೆ ಪ್ರಗತಿಪರತೆ… ದಲಿತ-ಬಂಡಾಯದ ಲೇಬಲ್‌ಗಳನ್ನು ಅಂಟಿಸಿಕೊಂಡ ಅದೆಷ್ಟೋ ಬರಹಗಾರರು… ಸಾಮಾಜಿಕ ಜವಾಬ್ದಾರಿಯ ಹೆಸರಿನಲ್ಲಿ ವೈಯಕ್ತಿಕ ಹಿತಾಸಕ್ತಿಗಾಗಿ ಅನೇಕ… ರಾಜಕೀಯ ಪಕ್ಷಗಳೊಂದಿಗೆ 'ಸಂಬಂಧ' ಇಟ್ಟುಕೊಂಡಿರುವುದು ಗುಟ್ಟಾಗಿ… ಉಳಿದುಕೊಂಡಿಲ್ಲ. ಅಂಥವರೆಲ್ಲರ ಸಿದ್ಧಾಂತ-ತತ್ವಗಳು ಒಂದೊಂದಾಗಿ… ಬಟಾಬಯಲಾಗುತ್ತಿರುವುದು ಒಳ್ಳೆಯ ಬೆಳವಣಿಗೆಯೇ ಆಗಿದ್ದು, ಜನ… ಇಂಥವರನ್ನು ಕಣ್ಮುಚ್ಚಿ ನಂಬುವುದಿಲ್ಲ. ಇಂಥ ಅದೆಷ್ಟು ಜನ ಇನ್ನೂ ಬಯಲಿಗೆ… ಬರುತ್ತಾರೆಂಬುದನ್ನು ಕಾಯ್ದು ನೋಡೋಣ!

- ಡಾ.ಕೆ.ಎನ್.ದೊಡ್ಡಮನಿ, ಬೆಳಗಾ…

ಮುಂದಿನ ಮುಖ್ಯಮಂತ್ರಿಯೊಂದಿಗೆ ಒಂದೆರಡು ಮಾತು



• ಗೌರಿ ಲಂಕೇಶ್
editorlankesh@gmail.com

ಕಂಡಹಾಗೆ

ಎತ್ತಿಂದೆತ್ತ ನೋಡಿದರೂ ಬರುವ ವಣೆಯಲ್ಲಿ ಕಾಂಗ್ರೆಸ್ ಇತರೆ ಪಕ್ಷಗಳಿಗಿಂತ ಹೆಚ್ಚು ಗಳನ್ನು ಗೆಲ್ಲುವುದು ಎಷ್ಟು ಸ್ಪಷ್ಟವಾಗಿದೆಯೋ ನಿಚ್ಚಳವಾಗಿದೆ ಸಿದ್ದರಾಮಯ್ಯ ಮುಂದಿನ ಮುಖ್ಯಮಂತ್ರಿ ಆಗುವುದು. (ಕಾಂಗ್ರೆಸ್ ಪಕ್ಷದ ಇತರೆ ಪಿಂಡ ನಾಯಕರು ತಂಟೆ ತಕರಾರು ತದಿದ್ದರೆ!)


ಕಳೆದ ಮೂವತ್ತೈದು ವರ್ಷಗಳಿಂದ ಕೀಯದಲ್ಲಿರುವ ಸಿದ್ದರಾಮಯ್ಯ ಇಲ್ಲಿಯತನಕ ಯೊಂದಿಗೆ ಜನಪರ ಕಾಳಜಿಯನ್ನು, ರತೆಯೊಂದಿಗೆ ದಮನಿತರ ಪರ ವನ್ನು, ಸರಳತೆಯೊಂದಿಗೆ ಪಾಣಿಕತೆಯನ್ನೂ ಉಳಿಸಿಕೊಂಡು ದ್ದಾರೆ. ಅವರೆಂದೂ ತಮ್ಮ ಕಾರವನ್ನು ಬಳಸಿಕೊಂಡು ತಮ್ಮ ಳಿಗೆ ನೆರವಾದವರಲ್ಲ; ರಾಜಕಾರಣ ಮಾಡಿದವರಲ್ಲ. ಈ ಕಾರಣಗಳಿಗೆ ಅವರು ಅಪಾರ ಪ್ರಿಯತೆಯನ್ನು ಹೊಂದಿದ್ದಾರೆ ನನ್ನಂತಹವರ ಮೆಚ್ಚುಗೆಯನ್ನು ದ್ದಾರೆ.

ಸಿದ್ದರಾಮಯ್ಯನವರದ್ದು ಎಂತಹ ವೆಂದರೆ ಅಪ್ಪನ ಮಿತ್ರ ಮುದಾಸ್ ಸಿದ್ದರಾಮಯ್ಯನವರ ಆಪ್ತ ತರಾಗಿದ್ದರೂ ಎಂದೂ ಅದನ್ನು ಉಪಯೋಗಪಡಿಸಿಕೊಳ್ಳಲು ಯತ್ನಿಸಲಿಲ್ಲ, ಎಂದೂ ದಾಸ್ ಮೂಲಕ ಅಪ್ಪನನ್ನು ಭೇಟಿ ಆಗಲು ಅವರ ಮೇಲೆ ಪ್ರಭಾವ ಬೀರಲು ಯತ್ನಿಸಲಿಲ್ಲ. ಅಷ್ಟೇ ಅಲ್ಲ, ರಾಮದಾಸ್ ಜೊತೆಗೂ ರು ರಾಜಕೀಯದ ಆಗುಹೋಗುಗಳ ಬಗ್ಗೆ ಹೆಚ್ಚು ಸುತ್ತಿರಲಿಲ್ಲ. ರಾಮದಾಸ್ ಅವರ ಮಗಳು ಮದುವೆಯಾದಾಗಲೂ ಅದರ ಹಿಂದಿನ ೇ ಮನೆಗೆ ಬಂದು ಆಕೆಗೆ ಆಶೀರ್ವಾದ ಮಾಡಿ, ಒಂದು ಗಿಫ್ಟ್ ಕೊಟ್ಟು ಹೊರಟುಹೋಗಿದ್ದರು.

ರಾಜಕಾರಣಿಗಳಂತೆ ಸಿದ್ದರಾಮಯ್ಯನವರು ಊ ಪತ್ರಕರ್ತರಿಗೆ ಹೋಟೆಲ್‌ಗಳಲ್ಲಿ ಗಳನ್ನು ಏರ್ಪಡಿಸಿದವರಲ್ಲ. ತಮ್ಮ ಮನೆಯ ೋಪಕೂಟಗಳಿಗೆ ಪ್ರಚಾರ ಪಡೆದವರಲ್ಲ. ಅಂತಹ ಕ್ಕುಗಳ ಅಗತ್ಯ ಅವರಿಗೆಂದೂ ಕಂಡುಬಂದಿಲ್ಲ.

ಇಂತಹ ಸಿದ್ದರಾಮಯ್ಯನವರು ತಮ್ಮ ರಾಜಕೀಯ ಬದುಕಿನ ಪ್ರಮುಖ ಹಂತದಲ್ಲಿರುವಾಗಲೇ ಅವರ ಆರೋಗ್ಯ ಕೈಕೊಟ್ಟು ಆಸ್ಪತ್ರೆ ಸೇರಿದ್ದಾರೆ. (ಇದನ್ನು ಬರೆಯುವ ಹೊತ್ತಿಗೆ ಅವರ ಗಾಲ್ ಬ್ಲಾಡರ್‌ನಲ್ಲಿದ್ದ ಸ್ಟೋನ್‌ಗಳನ್ನು ವೈದ್ಯರು ತೆಗೆದು ಸಿದ್ದರಾಮಯ್ಯನವರು ಚೇತರಿಸಿಕೊಳ್ಳುತ್ತಿದ್ದಾರೆ ಎಂದು ಅವರ ಆಪ್ತನಾದ ಆಲನಹಳ್ಳಿ ಪ್ರದ್ಯುಮ್ನ ನನಗೆ ಹೇಳಿದ.) ಅವರು ಆಸ್ಪತ್ರೆ ಸೇರಿದ ಸುದ್ದಿ ಕೇಳಿ ಅವರನ್ನು ನೋಡಲು ಬುಧವಾರ ಸಂಜೆ ಹೋದೆ.

ಸಿದ್ದರಾಮಯ್ಯನವರನ್ನು ಭೇಟಿ ಆದಾಗಲೆಲ್ಲ



ಅವರು ತಮ್ಮ ಗಡಸು ದನಿಯಲ್ಲಿ "ಹೇಗಿದ್ದೀಯಾ ಗೌರೀ" ಎಂದು ಕೇಳುತ್ತಾರೆ. ಆದರೆ ಮೊನ್ನೆ ಅವರ ದನಿಯಲ್ಲಿನ ಗಡಸುತನ ಸ್ವಲ್ಪ ಕುಸಿದಿತ್ತು. ಮುಖದಲ್ಲಿ ಸುಸ್ತು ಎದ್ದು ಕಾಣುತ್ತಿತ್ತು. ಆಗ ತಾನೇ ನಿದ್ರೆಯಿಂದ ಎದ್ದಿದ್ದ ಅವರು ಲುಂಗಿ ತೊಟ್ಟು ಕೂತಿದ್ದರು.

ಹೊರಗಡೆ ನೂರಾರು ಅಭಿಮಾನಿಗಳು ಅವರನ್ನು ಭೇಟಿ ಆಗಲು ಕಾಯುತ್ತಿದ್ದರು. ಕೊಠಡಿಯ ಒಳಗೆ ಅವರೆದುರು ಕಾಂಗ್ರೆಸ್ ರಾಜ್ಯಾಧ್ಯಕ್ಷ ಜಿ.ಪರಮೇಶ್ವರ್ ಅವರು ಕೂತು ಕಾಫಿ ಕುಡಿಯುತ್ತಿದ್ದರು. ಎಂದಿನಂತೆ ಪರದೆಯ ಹಿಂದೆ ಯಾರ ಕಣ್ಣಿಗೂ ಬೀಳದಂತೆ ಸಿದ್ದರಾಮಯ್ಯನವರ ಪತ್ನಿ ಅವಿತುಕೊಂಡಿದ್ದರು. ನನ್ನನ್ನು ನೋಡುತ್ತಿದ್ದಂತೆ ಸಿದ್ದರಾಮಯ್ಯ "ಬಾ ಗೌರೀ" ಎಂದು ಕರೆದು ತಮ್ಮ ಎದುರಿದ್ದ ಸೋಫಾದತ್ತ ಕೈ ಮಾಡಿದರು.

ಮರುಕ್ಷಣ ಒಂದೆರಡು ಫೋಟೋಗ್ರಾಫರ್‌ಗಳೊಂದಿಗೆ ಕೊಠಡಿಗೆ ದಾಳಿ ಇಟ್ಟಿದ್ದು ಕಾಂಗ್ರೆಸ್ ನಾಯಕಿ ನಫೀಸಾ ಫಜಲ್. ಏರುದನಿಯಲ್ಲಿ "ನಿಮ್ಮ ಅಕ್ಕಾ ಆಸೀರ್ವಾದ ನಿಮ್ಮ ಮೇಲಿದೆ" ಎಂದು ಸಿದ್ದರಾಮಯ್ಯನವರಿಗೆ ನಫೀಸಾ ಹೇಳಿದರು. ಆಕೆಯ ಮಾತು ಯಾರಿಗೂ ಅರ್ಥವಾಗಲಿಲ್ಲ. ಆಗ ಆಕೆ ಮತ್ತೆ ತನ್ನ ಹರುಕುಮುರುಕು ಕನ್ನಡದಲ್ಲಿ "ನಾನು ನಿಮ್ಮ ಅಕ್ಕಾ. ನನ್ನ ಆಸೀರ್ವಾದ್ ನಿಮ್ಮ ಮೇಲೆ" ಎಂದರು. ಆಕೆಯ ಈ ನಾಟಕವನ್ನು ಆಕೆಯೊಂದಿಗೆ ಬಂದಿದ್ದ ಫೋಟೋಗ್ರಾಫರ್‌ಗಳು ತಮ್ಮ ಕ್ಯಾಮೆರಾದಲ್ಲಿ ವಿವಿಧ ಆ್ಯಂಗಲ್‌ಗಳಲ್ಲಿ ಸೆರೆಹಿಡಿಯುತ್ತಿದ್ದರು.

ಸಿದ್ದರಾಮಯ್ಯನವರಿಗೆ ಕೋಪ ಬಂತೋ ಅಥವಾ ನಗು ಬಂತೋ ನನಗೆ ಗೊತ್ತಾಗಲಿಲ್ಲ. ಯಾಕೆಂದರೆ ನಫೀಸಾರ ಬೃಹತ್ ದೇಹ ಅಡ್ಡ ನಿಂತಿತ್ತು. ಸಿದ್ದರಾಮಯ್ಯನವರು "ನೀವು ಮೊದಲು ಕನ್ನಡವನ್ನು ಸರಿಯಾಗಿ ಕಲಿಯಬೇಕು" ಎಂದರು. ಆದರೆ ಅದೇ ಹೊತ್ತಿಗೆ ನಫೀಸಾ ಅವರ ಫೋನ್ ಅವರ ಗಂಟಲಿಗಿಂತ ಜೋರಾಗಿ ಬಡಿದುಕೊಳ್ಳಲಾರಂಭಿಸಿತು. ಪರಮೇಶ್ವರರಿಗೆ **irritate** ಆಯಿತು. "ಆಸ್ಪತ್ರೆ ತರಹದ ಜಾಗಕ್ಕೆ ಬರುವಾಗ ಮೊಬೈಲ್ ಫೋನ್‌ಅನ್ನು ಸ್ವಿಚ್ ಆಫ್ ಅಥವಾ ಸೈಲೆಂಟ್ ಮಾಡಿಕೊಳ್ಳಬೇಕು" ಎಂದು ನಫೀಸಾ ಅವರಿಗೆ ಹೇಳಿದರು. ಆದರೆ ಇದ್ಯಾವುದರ ಬಗ್ಗೆಯೂ ಗಮನಹರಿಸದ ಆಕೆ ಕ್ಯಾಮೆರಾಗಳಿಗೆ ಪೋಸ್ ಕೊಡುವುದರಲ್ಲಿ ಮಗ್ನರಾಗಿದ್ದರು. ಫೋಟೊ ತೆಗೆಸಿಕೊಂಡ ನಂತರ ನಫೀಸಾ ಅಲ್ಲಿಂದ ಮಾಯವಾದರು.

ಸ್ವಲ್ಪಹೊತ್ತಿನ ನಂತರ ಪರಮೇಶ್ವರರು ಹೊರಟರು. ಆಗ ನನ್ನನ್ನು ತಮ್ಮ ಮುಂದೆ ಕೂಡಿಸಿಕೊಂಡ ಸಿದ್ದರಾಮಯ್ಯನವರನ್ನು "ನೀವು ನಿಮ್ಮ ರಾಜಕೀಯ ಜೀವನದ ಪ್ರಮುಖ ಹಂತದಲ್ಲಿರುವಾಗಲೇ ನಿಮ್ಮ ಆರೋಗ್ಯ ಕೆಟ್ಟಿತಲ್ಲಾ?" ಎಂದು ಕೇಳಿದೆ.

"ಇಲ್ಲಾ, ಈ ಗಾಲ್ ಬ್ಲಾಡರ್ ಸ್ಟೋನ್‌ಗಳನ್ನು ಬಹಳ ಹಿಂದೆಯೇ ವೈದ್ಯರು ಪತ್ತೆ ಮಾಡಿದ್ದರು. ಆದರೆ ಆಗ ಚಿಕಿತ್ಸೆಯ ಅಗತ್ಯವಿಲ್ಲ ಅಂದಿದ್ದರು. ಮೊನ್ನೆ ದೆಹಲಿಯಲ್ಲಿ ಸಮಸ್ಯೆ ಶುರುವಾಯಿತು. ಆದರೂ ಪರವಾಗಿಲ್ಲ, ಒಂದೆರಡು ದಿನಗಳಲ್ಲಿ ಡಿಸ್‌ಚಾರ್ಜ್ ಮಾಡುತ್ತಾರೆ. ಇನ್ನು ಕೆಲವೇ ದಿನಗಳಲ್ಲಿ ಚುನಾವಣಾ ಪ್ರಚಾರವನ್ನು ಪ್ರಾರಂಭಿಸುತ್ತೇನೆ" ಎಂದರು.

"ಹಲವು ಪತ್ರಿಕೆಗಳಲ್ಲಿ ನೀವು ಎರಡು ಕ್ಷೇತ್ರಗಳಿಂದ ಸ್ಪರ್ಧಿಸುವ ಇಚ್ಛೆ ತೋರಿದ್ದೀರಿ ಎಂದು ವರದಿ ಮಾಡಿವೆಯಲ್ಲಾ?" ಎಂದು ಕೇಳಿದೆ.

"ಹಾಗೇನಿಲ್ಲ. ಎರಡು ಕಡೆಗಳಿಂದ ಸ್ಪರ್ಧಿಸುವ ಯೋಚನೆ ನನಗೆ ಇಲ್ಲವೇ ಇಲ್ಲ. ಅದೆಲ್ಲ ಸುಳ್ಳು" ಎಂದರು.

"ಹಾಗಾದರೆ ವರುಣಾದಿಂದ ನೀವು ನಿಲ್ಲುತ್ತೀರಿ ಎಂದಾಯಿತು. ಅಲ್ಲಿ ಯಡಿಯೂರಪ್ಪನವರ ಭಂಟ ಸಿದ್ದಲಿಂಗಸ್ವಾಮಿ ಕೋಟ್ಯಾಂತರ ರೂಪಾಯಿ ಸುರಿಯುತ್ತಿದ್ದಾನೆ. ನಿಮ್ಮನ್ನು ಸೋಲಿಸಬೇಕೆಂದು ಎಲ್ಲ ತರಹದ ಸರ್ಕಸ್ ಮಾಡುತ್ತಿದ್ದಾನೆ. ನಿಮಗೆ ಹೇಗನ್ನಿಸುತ್ತೆ?" ಎಂದೆ.

"ನಾನು ವರುಣಾದಿಂದ ಗೆಲ್ಲುತ್ತೇನೆ ಎಂಬ ವಿಶ್ವಾಸ ನನಗಿದೆ" ಎಂದರು ಸಿದ್ದರಾಮಯ್ಯ.

"ಎಲ್ಲಾ ಸಮೀಕ್ಷೆಗಳ ಪ್ರಕಾರ ಕಾಂಗ್ರೆಸ್ ಹೆಚ್ಚು ಸ್ಥಾನಗಳನ್ನು ಪಡೆಯಲಿದೆ. ಆದರೆ ಕಾಂಗ್ರೆಸ್ ಪಕ್ಷಕ್ಕೆ ಒಂದು ದೌರ್ಬಲ್ಯ ಇದೆ. ಅದು ಸೆಲ್ಫ್ ಗೋಲ್ ಹೊಡೆದುಕೊಂಡು ಹಲವಾರು ಕ್ಷೇತ್ರಗಳಲ್ಲಿ ಸೋಲುವುದು. ಇದರ ಬಗ್ಗೆ ತಾವು ಏನು ಮಾಡುತ್ತಿದ್ದೀರಿ?"

"ಈ ಬಾರಿ ಹಾಗಾಗದಂತೆ ನೋಡಿಕೊಳ್ಳುತ್ತಿದ್ದೇವೆ."

"ಕಾಂಗ್ರೆಸ್ ನಾಯಕರ ಇನ್ನೊಂದು ಚಟ ಇತರರ ಕಾಲೆಳೆಯುವುದು. ನಿಮ್ಮ ಕಾಲನ್ನು ಎಳೆಯಲು ಹಲವಾರು ನಾಯಕರು ಸಿದ್ಧರಾಗಿದ್ದಾರೆ. ಇದರ ಬಗ್ಗೆ ಏನಂತೀರಿ?"

(ಉತ್ತರ: ನಗು)

ಇಷ್ಟು ಮಾತನಾಡುವ ಹೊತ್ತಿಗೆ ಅವರ ಸಹಾಯಕರು ಹಲವಾರು ಬಾರಿ ಕೊಠಡಿಯ ಬಾಗಿಲನ್ನು ತೆರೆದು ಇಣುಕಿನೋಡಿದ್ದರು. ಸಿದ್ದರಾಮಯ್ಯನವರನ್ನು ನೋಡಲು ಬಹಳಷ್ಟು ಜನ ಕಾದಿದ್ದರಿಂದ ಅವರ ಹೆಚ್ಚು ಸಮಯವನ್ನು ತೆಗೆದುಕೊಳ್ಳಲು ನನಗೆ ಇಷ್ಟವಾಗಲಿಲ್ಲ. ಆದರೂ ಒಂದು ಪ್ರಶ್ನೆಯನ್ನು ಕೇಳಲೇ ಬೇಕಿತ್ತು.

"ನೀವು ಮತ್ತು ಪರಮೇಶ್ವರರು ಸಿದ್ಧಪಡಿಸಿದ್ದ ಅಭ್ಯರ್ಥಿಗಳ ಪಟ್ಟಿಯಲ್ಲಿ ಯಾಕೆ ಮಹಿಳೆಯರ ಹೆಸರುಗಳು ಇರಲಿಲ್ಲ?" ಎಂದು ಕೇಳಿದೆ.

"ಮಹಿಳೆಯರ ಹೆಸರುಗಳನ್ನು ಆಯಾ ಕ್ಷೇತ್ರಗಳ ಕಾಂಗ್ರೆಸ್ ಜನರೇ ಹೇಳದಿರುವಾಗ ನಾವು ಹೇಗೆ ಸೇರಿಸಲು ಸಾಧ್ಯ ಗೌರಿ? ಆದ್ದರಿಂದ ಮಹಿಳೆಯರಿಗೆ ಮೀಸಲಾತಿ ನೀಡುವವರೆಗೂ ಈ ಸಮಸ್ಯೆ ಇದ್ದೇ ಇರುತ್ತದೆ" ಎಂದರು.

ಅದು ನಿಜ ಅನ್ನಿಸಿತು. ಆದರೂ ಕೇವಲ ಮೀಸಲಾತಿಯಿಂದ ಮಹಿಳೆಯರ ಸ್ಥಿತಿಗತಿಗಳಲ್ಲಿ ಹೆಚ್ಚು ವ್ಯತ್ಯಾಸವಾಗುವುದಿಲ್ಲ. ಅದಕ್ಕೆ ಉದಾಹರಣೆ ಪರಿಶಿಷ್ಟ ಜಾತಿ ಮತ್ತು ವರ್ಗಗಳಿಗೆ ಮೀಸಲಾತಿ ಇದ್ದರೂ ಅವರು ಬೇರೆ ಜಾತಿಯವರಿಗೆ ಮಣೆ ಹಾಕುವ ಸ್ಥಿತಿ ಇರುವುದು; ಅದಕ್ಕೆ ಬದಲಾಗಿ...

ಎಂದೆಲ್ಲಾ ಚರ್ಚಿಸಬೇಕೆನಿಸಿತು. ಆದರೆ ಅದಕ್ಕೆ ಅದು ಸೂಕ್ತವಾದ ಸಮಯವೂ, ಸ್ಥಳವೂ ಆಗಿರಲಿಲ್ಲವಾದ್ದರಿಂದ "ಬೇಗನೆ ಚೇತರಿಸಿಕೊಳ್ಳಿ" ಎಂದಷ್ಟೇ ಸಿದ್ದರಾಮಯ್ಯನವರಿಗೆ ಹೇಳಿ ಅಲ್ಲಿಂದ ಹೊರಟೆ...

ರಾಜ್ಯದಲ್ಲಿ ಚುನಾವಣೆ ಕಾವು ದಿನೇದಿನೇ ಏರುತ್ತಿದೆ. ಭರವಸೆಗಳ ಮಹಾಪೂರವೇ ಹರಿಯುತ್ತಿದೆ. ಅದರಂತೆ ಖಂಡಿಯಲ್ಲಿ ಕೂಡ ಮತದಾರರ ಓಲೈಕೆ ಆರಂಭವಾಗಿದೆ. ಭಾರಿ ಕೈಗಾರಿಕಾ ಮಂತ್ರಿಯಾಗಿರುವ ನಿರಾಣಿ ಇಲ್ಲಿ ಸುವುದು ಕಾಯಂ ಆಗಿದೆ. ಈತ ಮೂವತ್ತು ಕೋಟಿಗೂ ಹೆಚ್ಚು ಖರ್ಚು ಮಾಡುವ ಯೋಜನೆಯೊಂದನ್ನು ಸಿರುವ ಸುದ್ದಿಯಿದೆ. ಅದೇ ರೀತಿ ಕಾಂಗ್ರೆಸ್‌ನ ಸಿದ್ದು ನ್ಯಾಮಗೌಡ ಕೂಡ ಅಷ್ಟೇ ಹಣ ಚೆಲ್ಲಾಡಲು ತಯಾರಿ ದ್ದಾನೆ. ಇವರಿಬ್ಬರೂ ರೈತರ ರಕ್ತ ಹೀರುವ ಸಕ್ಕರೆ ಧನಿಗಳು.




ಜೈ ಡೆಮಾಕ್ರಸಿ


ನ್ನು ಇಲ್ಲಿನ ಬಿಜೆಪಿ ಶಾಸಕ ಶ್ರೀಕಾಂತ ಕುಲಕರ್ಣಿ "ಈಗ ಮೊದಲಿನ ಪರಿಸ್ಥಿತಿಯಲ್ಲಿ ನಾನೇನಿಲ್ಲ, ಈಗ ೂ ಖರ್ಚು ಮಾಡುವ ಸಾಮರ್ಥ್ಯ ಇದೆ" ಎಂದು ಕೋಟಿ ಕೋಟಿ ತೂರಾಡುವ ಭಾಷೆಯನ್ನೇ ಆಡುತ್ತಿದ್ದಾನೆ ವದಂತಿ ಇದೆ.

ಇಂತಹ ಸಂದರ್ಭದಲ್ಲೇ ಮೊನ್ನೆ ಏಪ್ರಿಲ್ 3ರಂದು ನಗರ ಕೇಂದ್ರ ಸ್ಥಳವಾದ ದೇಸಾಯಿ ಸರ್ಕಲ್‌ನ ಪಕ್ಕ ಳೆಯೊಬ್ಬಳು ರಾಶಿ ಮಾಡಿದ ಮಣ್ಣಿನಿಂದ ಜೋಳದ ಕಾಳು ಆರಿಸುತ್ತಾ ಕುಳಿತಿದ್ದಳು. ಬೆಂಕಿಯಂತೆ ಸುಡುವ ಶ ಬಿಸಿಲನ್ನೂ ಲೆಕ್ಕಿಸದೇ ಬೆಳಗ್ಗೆಯಿಂದ ಸಂಜೆವರೆಗೂ ಸುಮಾರು 30 ಸೇರು ಮಣ್ಣಿನಿಂದ ಕಾಳನ್ನು ಕೊಂಡಳು. ಸಿಕ್ಕ ಜೋಳದ ಕಾಳಾದರೂ ಎಷ್ಟು ಅಂದರೆ ಒಂದು ಸೇರಿಗಿಂತ ಕಡಿಮೆ.

ಜೈ ಡೆಮಾಕ್ರಸಿ.

ರೋಗಪತಿ ಭಟ್ಟನ ರಾಸಲೀಲೆ ಸಿನಿಮಾ ನಿರ್ಮಾಪಕರ್ಯಾರು?





ಉಡುಪಿ ಹೇಳಿ-ಕೇಳಿ ಪೋಲಿ ಕೃಷ್ಣನ ನೆಲವೀಡು; ಪೋಕರಿ ಹಿಂದೂವಾದಿಗಳ ಕರ್ಮಭೂಮಿ. ಈ ಉಡುಪಿ ವಿಧಾನಸಭಾ ಕ್ಷೇತ್ರದ ಶಾಸಕ ರೋಗಪತಿ ಭಟ್ಟ ಯಾನೆ ರಘುಪತಿ ಭಟ್ಟನೆಂಬ ಸಂಘ ಪರಿವಾರದ ಕಣ್ಮಣಿ ಇದ್ದಾನಲ್ಲ ಆತ ಕೃಷ್ಣ ಪರಮಾತ್ಮನನ್ನೇ ಮೀರಿಸುವ ರಾಸಲೀಲಾ ಪ್ರವೀಣ! ಬಾಯಿ ತೆರೆದರೆ ಶೀಲ-ಸಂಸ್ಕಾರ-ಸಂಸ್ಕೃತಿ ಎಂದು ಬೊಗಳುವ ಪರಿವಾರದ ಭಟ್ಟ ಕಂಡ-ಕಂಡಲ್ಲಿ ಚಡ್ಡಿ ಬಿಚ್ಚುವ ಮಹಾ ಹಲ್ಕಟ್ ಎಂಬುದು ಬಹಿರಂಗ ರಹಸ್ಯ. ಇಂಥ ಹೀನ ಚರಿತ್ರೆಯ ಭಟ್ಟನ ಲೇಟೆಸ್ಟ್ ಹಾದರದ ಸಿಡಿಯೊಂದೀಗ ಬಿಡುಗಡೆಗೊಂಡಿರುವುದು ಕರಾವಳಿಯಲ್ಲಿ ಚಿತ್ರ-ವಿಚಿತ್ರ ರಾಜಕೀಯ-ಸಾಮಾಜಿಕ-ನೈತಿಕ ಕಂಪನಗಳನ್ನೆಬ್ಬಿಸಿಬಿಟ್ಟಿದೆ.....

ಸೆರಗಿನ ವ್ಯಾಮೋಹ ಭಟ್ಟನ ಹುಟ್ಟುರೋಗ. ಮದುವೆಯಾಗುವ- ಶಾಸಕನಾಗುವ ಮೊದಲಿನಿಂದಲೂ ಈತ ಬೇಲಿ ಹಾರುವ ಬೆದ ಬಸವನೇ. ಪದ್ಮಪ್ರಿಯಾ ಎಂಬ ಸಾತ್ವಿಕ ಹುಡುಗಿಯನ್ನು ಮದುವೆಯಾದ ಮೇಲೂ ಭಟ್ಟನ ಹಗ್ಗ ಕಡಿಯುವ ಚಾಳಿ ನಿಲ್ಲಲಿಲ್ಲ. ಆ ಮುಗ್ಧ ಹೆಂಗಸಿನ ದುರಂತ ಸಾವಿಗೆ ಗಂಡನ "ಕುಜ" ದೋಷವೇ ಕಾರಣವಾಗಿತ್ತು. ಶಾಸಕನಂಥ ಸಾರ್ವಜನಿಕ ಮಹತ್ವದ ಸ್ಥಾನಕ್ಕೇರಿದ ನಂತರವೂ ಭಟ್ಟನ ಪೂರ್ವಾಶ್ರಮದ ಕ್ರೀಡೋತ್ಸವಗಳು ನಿಲ್ಲಲಿಲ್ಲ. ಮದುವೆಗೂ ಮೊದಲು ಹಿರಣ್ಯ ಹೈಯರ್ ಫೈನಾನ್ಸ್ ಎಂಬ ಸುಲಿಗೆ ಸಾಲ ಸಂಸ್ಥೆ ನಡೆಸುತ್ತಿದ್ದ ಭಟ್ಟನಿಗೆ ಹಡಬೆ ಬಡ್ಡಿ ಹಣ ಕಾಮ ಪಿತ್ಥ ನೆತ್ತಿಗೇರಿಸಿತ್ತು! ಎಮ್ಮೆಲ್ಲೆಯಾದ ಬಳಿಕ ಅಧಿಕಾರದ ಮದ ತೀಟೆಯನ್ನು ನೂರ್ಮಡಿಗೊಳಿಸಿಬಿಟ್ಟಿತು!!

ರೋಗಪತಿ ಭಟ್ಟನ ಸೆಟ್‌ಅಪ್‌ಗಳು ಉಡುಪಿ-ಕುಂದಾಪುರ-ಬೆಂಗಳೂರು- ಮಂಗಳೂರಲ್ಲಿರುವುದು ಅನೇಕಾನೇಕ ರಂಗೀಲಾ ಕತೆಗಳನ್ನು ಹುಟ್ಟುಹಾಕಿದೆ. ಹೆಂಡತಿಗೆ ಚಟ್ಟ ಕಟ್ಟಿದ ನಂತರ ಭಟ್ಟನ ಮೋಜು-ಮಸ್ತಿ ಮಿತಿಮೀರಿ ಹೋಯ್ತು. ಮುಂಬೈ-ಮಂಗಳೂರು- ಬೆಂಗಳೂರು-ಸಿಂಗಾಪುರಗಳ ಸ್ಟಾರ್ ಹೋಟೆಲ್, ರೆಸಾರ್ಟ್‌ಗಳಿಗೆ ಮೇಲಿಂದ ಮೇಲೆ "ಬೇಟೆ"ಗೆಂದೇ ನಡುವಯಸ್ಸಿನ ಭಟ್ಟ ಹೋಗುವುದು ಬಿಜೆಪಿ-ಭಜರಂಗಿ -ಚಡ್ಡಿ ವಲಯದಲ್ಲಿ ನಿತ್ಯ ನೂತನ ಸಮಾಚಾರವಾಗಿತ್ತು. ಈ ಕೊಳಕು ಪುರಾಣ ಕೇಳಿ ಕೇಳಿ ಜನರಂತೂ ರೋಸಿಹೋಗಿದ್ದರು. ಜೊತೆಗೆ ಬಡ್ಡಿ ಮಾಫಿಯಾ ದಂಧೆ, ಭೂವ್ಯವಹಾರ, ಭ್ರಷ್ಟಾಚಾರ, ಸರ್ಕಾರಿ ಯೋಜನೆಗಳಲ್ಲಿ ಕಿಕ್‌ಬ್ಯಾಕ್, ಟೆಗ್ಮಾ ಹಡಗು ಒಡೆವ ಕಂಪನಿಯಿಂದ ದಕ್ಷಿಣೆ ಪಡೆದ ಧರ್ಮಕಾರ್ಯಗಳು... ಸಕಲಕಲಾವಲ್ಲಭ ಭಟ್ಟನ ದೌರ್ಬಲ್ಯ ಬಲ್ಲವರೇ ಆತನನ್ನು ಖೆಡ್ಡಾಕ್ಕೆ ಕೆಡವಿ ಕೊಳಕು ಸಿಡಿ ಮಾಡಿ ಈಗ ಲೋಕಾರ್ಪಣೆ ಮಾಡಿದ್ದಾರೆ!!

ಬ್ಲೂಜೆಪಿಯ ರಘುಪತಿ ಭಟ್ಟ ಎಂಥವನೆಂಬುದು ಕರಾವಳಿಯ ಮನೆ-ಮನೆಗೂ ಗೊತ್ತು. ಹಾಗಾಗಿ ಸಿಡಿಯಲ್ಲಿ ಭಟ್ಟನನ್ನು ಬೆತ್ತಲುಗೊಳಿಸಿದ 'ಕಲಾವಿದೆ' ಯಾರು ಎಂಬುದರ ಬಗ್ಗೆ ಯಾರೂ ತಲೆ ಕೆಡಿಸಿಕೊಂಡಿಲ್ಲ. ಆದರೆ ಆ ನೇಪಾಳಿ ಹುಡುಗಿಯೊಂದಿಗೆ ಭಟ್ಟ ನಡೆಸಿದ ಸರ್ಕಸ್ ಅನ್ನು ತಾಸುಗಟ್ಟಲೆ ಸಿಸಿ ಕ್ಯಾಮರಾದಲ್ಲಿ ಸೆರೆಹಿಡಿದು ಸಿಡಿಗೆ ವರ್ಗಾಯಿಸಿ ಸಾರ್ವಜನಿಕ ವೀಕ್ಷಣೆಗೆ ಬಿಡುಗಡೆ ಮಾಡಿದವರ್ಯಾರೆಂಬುದೇ ಈಗ ದೊಡ್ಡ ಕುತೂಹಲಕ್ಕೆ ಎಡೆ ಮಾಡಿದೆ. ರಘುಪತಿ ಭಟ್ಟ ಮತ್ತವನ ಹಿಂದಿರುವ ಪೇಜಾವರ ಸ್ವಾಮಿ ಪರಿವಾರ ಇದೊಂದು ರಾಜಕೀಯ ಪಿತೂರಿ ಎನ್ನುತ್ತಿದ್ದಾರೆ. ಭಟ್ಟ ಅಪ್ಪಿತಪ್ಪಿಯೂ ಇದು ಕಾಂಗ್ರೆಸ್ ಕೈಚಳಕ ಎಂದು ಎಲ್ಲಿಯೂ ಹೇಳಿಲ್ಲ. ತನ್ನ ಪಕ್ಷದೊಳಗಿನ ಹಿತಶತ್ರುಗಳೇ ರಾಜಕೀಯವಾಗಿ ತನ್ನನ್ನು ಮುಗಿಸಲು ಸಿಡಿ ತಯಾರಿಸಿದ್ದಾರೆಂದು ಭಟ್ಟ ಗೋಳಾಡುತ್ತಿದ್ದಾನೆ.

ನಿಜ! ಭಟ್ಟನ ಎಮ್ಮೆಲ್ಲೆಗಿರಿಗೆ ಇತಿಶ್ರೀ ಹಾಡಲು ಸ್ಕೆಚ್ ಹಾಕಿದ್ದು ಆರೆಸ್ಸೆಸ್‌ನ ಸೂತ್ರಧಾರರು. ಬಿಜೆಪಿ-ಆರೆಸ್ಸೆಸ್-ಭಜರಂಗದಳಕ್ಕೆ ಸಮಾನಾಂತರವಾಗಿ ಬೆಳೆದಿದ್ದ ಭಟ್ಟ ಸಂಘಪರಿವಾರದ ದೊರೆಗಳಾದ ಕಲ್ಲಡ್ಕ ಪ್ರಭಾಕರ ಭಟ್, ಗುಜ್ಜಾಡಿ ಪ್ರಭಾಕರ ನಾಯಕ್, ಎ.ಜಿ. ಕೊಡ್ಗಿ, ಸೋಮಶೇಖರ ಭಟ್ ಗ್ಯಾಂಗಿಗೆ ತಲೆ ನೋವಾಗಿ ಪರಿಣಮಿಸಿದ್ದ. ಆತನ ಕೀಚಕ ಕಾರ್ಯಾಚರಣೆ ಬಿಜೆಪಿಗೆ ಸಾಕಷ್ಟು ಡ್ಯಾಮೇಜ್ ಮಾಡಿತ್ತು. ಗುಲಾಮಗಿರಿ ಬಯಸುವ ಆರೆಸ್ಸೆಸ್ ಬಾಸ್‌ಗಳಿಗೆ ಭಟ್ಟ ಗೌರವಿಸುವುದೂ ಕಮ್ಮಿ ಮಾಡಿದ್ದ. ಭಟ್ಟನ ಹೆಣ್ಣುಬಾಕತನ, ಭ್ರಷ್ಟಾಚಾರ, ಡಿನೋಟಿಫಿಕೇಷನ್ ಭಾನ್ಗಡಿಗಳು ಉಡುಪಿ ಕ್ಷೇತ್ರದಲ್ಲಿ ಬಿಜೆಪಿಯನ್ನು ಮಕಾಡೆ ಮಲಗಿಸಿ ಬಿಟ್ಟಿತ್ತು. ಈತನಿಗೆ ಟಿಕೆಟ್ ಕೊಟ್ಟರೆ ಬಿಜೆಪಿಗೆ ಸೋಲು ಖಾತ್ರಿಯೆಂಬುದು ಅಭ್ಯರ್ಥಿ ಆಯ್ಕೆದಾರರಿಗೆ ಮನದಟ್ಟಾಗಿತ್ತು.

ಈ ಬಾರಿ ಭಟ್ಟನಿಗೆ ಟಿಕೆಟ್ ಕೊಡದಿರಲು ಆರೆಸ್ಸೆಸ್ ಡಾನ್ ಪಡೆ ನಿರ್ಧರಿಸಿತ್ತು. ಆದರೆ ಬಿಜೆಪಿಯಲ್ಲಿ ತನ್ನದೇ ಟೀಮು ಕಟ್ಟಿಕೊಂಡು ಕಲ್ಲಡ್ಕ ಭಟ್- ಸೋಮಶೇಖರ್ ಭಟ್, ಗುಜ್ಜಾಡಿ, ಕೊಡ್ಗಿಗಳಿಗೆ ಬ್ಲ್ಯಾಕ್‌ಮೇಲ್ ಮಾಡತೊಡಗಿದ್ದ ಭಟ್ಟ ಟಿಕೆಟ್‌ಗಾಗಿ ಹಠಹಿಡಿದಿದ್ದ. ಸಂಘಪರಿವಾರದ ಯಜಮಾನರ ನೀಲಿಗಣ್ಣಿನ ಹುಡುಗರಾದ- ಜಿಲ್ಲಾ ಬಿಜೆಪಿ ಯುವ ಮೋರ್ಚಾದ ಅಧ್ಯಕ್ಷ-ಹನುಮಾನ್ ಬಸ್ ಮಾಲೀಕರ ಮಗ ವಿಲಾಸ್‌ಕುಮಾರ್ ನಾಯಕ್ ಮತ್ತು ವಿಶ್ವಹಿಂದೂ ಪರಿಷತ್ ಜಿಲ್ಲಾಧ್ಯಕ್ಷ ಬೈಕಾಡಿ ಸುಪ್ರಸಾದ್ ಶೆಟ್ಟಿಗಳಿಗೆ ಭಟ್ಟ ಕಾಡತೊಡಗಿದ್ದ. ಈ ಭಟ್ಟನಿಗೆ ಹೇಗಾದರೂ ಬುದ್ಧಿ ಕಲಿಸಿ ಬಿಜೆಪಿ ರಾಜಕೀಯದ ಅಂಗಳದಿಂದ ತೊಲಗಿಸಲು ಕಲ್ಲಡ್ಕ ಅಂಡ್ ಕೋ ನಿರ್ಧರಿಸಿತ್ತು. ಭಟ್ಟ ಕನ್‌ವರ್ಟೆಡ್ ಚಡ್ಡಿಯೇ ಹೊರತು ಒರಿಜಿನಲ್ ಅಲ್ಲ. ಇದು ಕಲ್ಲಡ್ಕರ ಕೇಡರ್ ಚಡ್ಡಿಗಳಲ್ಲಿ ಉರಿಯೆಬ್ಬಿಸಿತ್ತು!

ಅದರ ಪರಿಣಾಮವೇ ಭಟ್ಟನ ಸೆಕ್ಸ್ ಸಿಡಿ ತಯಾರಿಕೆ- ವಿತರಣೆ!! ಬ್ರೈನ್ ಬಿಹೈಂಡ್ ದಿ ಸಿಡಿ ಆರೆಸ್ಸೆಸ್ ಎಂಬುದು ನಿಸ್ಸಂಶಯ. ರಘುಪತಿ ಭಟ್ಟನ ಸಕಲ "ಸಾಹಸ"ದಲ್ಲಿ ಸಾಥ್ ಕೊಡುತ್ತಿದ್ದ ಸುಧೀರ್ ಕೊಡ್ಗಿ (ಬಿಜೆಪಿ ಯಜಮಾನ ರಲ್ಲೊಬ್ಬನಾದ ಎ.ಜಿ ಕೊಡ್ಗಿ ತಮ್ಮನ ಮಗ) ಮತ್ತು ಭಟ್ಟ ಎದುರಾಳಿ ತಾನೆಂದು ಪೋಸು ಕೊಡುತ್ತ ಬಂದಿರುವ ವಿಲಾಸ್ ಕುಮಾರ್ ನಾಯಕ್‌ನನ್ನು ಆರೆಸ್ಸೆಸ್‌ನ ಸಿಡಿ ನಿರ್ಮಾಪಕರು ಬಳಸಿಕೊಂಡಿದ್ದಾರೆ. ವಿಲಾಸ್ ನಾಯಕ್ ನಡೆಸುವ ಹುಕ್ಕಾ ಬಾರ್ (ಹೈ ಡೋಕ್)ಗೆ ಶಾಸಕ ಭಟ್ಟ ತೊಂದರೆ ಕೊಟ್ಟಿದ್ದ. ಹೀಗಾಗಿ ಶಾಸಕನಾಗುವ ಮಹತ್ವಾಕಾಂಕ್ಷೆಯ ವಿಲಾಸ್‌ಗೆ ಭಟ್ಟನ ತಲೆ ಕಂಡರೆ ಆಗುತ್ತಿರಲಿಲ್ಲ. ಸುನಿಲ್ ಕೊಡ್ಗಿಗೆ ಲ್ಯಾಂಡ್ ವ್ಯವಹಾರ ದಲ್ಲಿ ಭಟ್ಟ ಸರಿಯಾಗಿ ಸಹಕರಿಸುತ್ತಿಲ್ಲ ಎಂಬ ಸಿಟ್ಟಿತ್ತು.

ಒಂದು ಚರ್ಚೆಯ ಪ್ರಕಾರ ಭಟ್ಟನ ಬೆತ್ತಲೆ ಭಾನ್ಗಡಿ ಶೂಟಿಂಗ್ ಆಗಿರುವುದು ಮುಂಬೈನ "ಸವೇರಿಯಾ" ಹೋಟೆಲ್‌ನಲ್ಲಿ. ಈ ಹೋಟೆಲ್ ಸಾವುಕಾರ ಉಡುಪಿ ಮೂಲದ ಪರ್ವತ ಶೆಟ್ಟಿ. ಅಂಡರವರ್ಲ್ಡ್‌ನ ಸಂಪರ್ಕವಿರುವ ಈ ಶೆಟ್ಟಿಯೊಂದಿಗೆ ಸುಧೀರ್ ಕೊಡ್ಗಿ ಮತ್ತು ವಿಲಾಸ್ ನಾಯಕ್‌ಗೆ ನಂಟು ಇದೆ. ಈ ಪರ್ವತ ಶೆಟ್ಟಿ ಪಡುಬದ್ರಿಯ

ಭಟ್ಟನ ಶತ್ರುಗಳೆಲ್ಲ ಒಂದಾಗಿ ಆತ
ಹೆಡೆಮುರಿ ಕಟ್ಟಿ ಹಣಿದಿದ್ದಾರೆ. ಒಟ್ಟಿನ
ಅನಾಚಾರ-ಅವ್ಯವಹಾರ ಮಾ
ದಕ್ಕಿಸಿಕೊಳ್ಳುತ್ತ ಬಂದಿದ್ದ ಭಟ್ಟ ಈ
ಉಡುಪಿ ಜನರೆದುರು ಬೆತ್ತಲಾ
ನಿಂತಿದ್ದಾನೆ. ಪದ್ಮಪ್ರಿಯಾಳ ಕಣ್ಣೀರಿ
ಶಾಪ ಆತನಿಗೆ ತಟ್ಟಿದೆ ಎಂದು ಜ
ಆಡಿಕೊಳ್ಳುತ್ತಿದ್ದಾರೆ. ಭಟ್ಟನ ಹಣಿಯಲ
ಪ್ಲಾನ್ ಹಾಕಿದವರಿಗೆ ಅಪೆಕ್ಸ್ ಬ್ಯಾಂಕ
ಅಧ್ಯಕ್ಷ ರಾಜೇಂದ್ರಕುಮಾರ್ ಯಾ
ಗಡ್ಡ ರಾಜೇಂದ್ರಕುಮಾರ್ ಎಂಬ
ಪ್ರಳಯಾಂತಕ ನೆರವಾಗಿದ್ದಾನೆಂದ
ಉಡುಪಿಯಲ್ಲಿ ಗುಲ್ಲೆದ್ದಿದೆ. ಷಡ್ಯಂತ್ರ
ಹೆಣೆಯುವುದರಲ್ಲಿ ರಾಜೇಂದ್ರ ನಿಪುಣ
ಈತನ ಸ್ವ-ಸಹಾಯ ಗುಂಪಿನ
ಚಟುವಟಿಕೆಗೆ ಎಮ್ಮೆಲ್ಲೆಗಿರಿ ಬಳಸಿ ಭಟ್ಟ
ಅಡ್ಡಗಾಲು ಹಾಕಿದ್ದ. ಅಪೆಕ್ಸ್ ಬ್ಯಾಂಕಿ
ಕೋಟ್ಯಂತರ ರೂ. ಗೋಲ್‌ಮಾಲ್
ಮಾಡಿರುವ ಗಡ್ಡ ರಾಜೇಂದ್ರನನ್ನು
ಬ್ಲ್ಯಾಕ್‌ಮೇಲ್ ಮಾಡಲು ಭಟ್ಟ
ಹವಣಿಸಿದ್ದ. ಇದು ಇವರಿಬ್ಬರಲ್ಲಿ
ದ್ವೇಷ-ಶೀತಲ ಸಮರ ಸೃಷ್ಟಿಸಿತ್ತು

ಯಾರು ಈ ಪರ್ವತ ಶೆಟ್ಟಿ?

ಚೆಡ್ಡಿ ಪುರುಷೋತ್ತಮ ರಘುಪತಿ ಭಟ್ಟನನ್ನು ಬೆತ್ತಲೆ ಮಾಡಿ ಬಲಿ ಹಾಕಿದ ಪರ್ವತ ಶೆಟ್ಟಿ ಡಬ್ಬಲ್ ಗೇಮ್‌ನಲ್ಲಿ ನಿಷ್ಣಾತ. ಮುಂಬೈನ ಸಾಕಿನಾಕಾ ಪ್ರದೇಶದಲ್ಲಿ 'ಸವೇರಿಯಾ' ಎಂಬ ರಂಗೀಲಾ ಹೋಟೇಲ್ ನಡೆಸುತ್ತಿರುವ ಪರ್ವತ ಶೆಟ್ಟಿಯ ಮೂಲ ಕಾರ್ಕಳ ತಾಲ್ಲೂಕಿನ 'ಬೋಳ' ಎಂಬ ಗ್ರಾಮ. ಒಂದು ಕಡೆ ಭೂಗತ ಲೋಕದ ಲಿಂಕ್ ಹೊಂದಿರುವ ಈತ ಮತ್ತೊಂದು ಕಡೆಯಲ್ಲಿ ಪೊಲೀಸ್ ಖಬರಿ.


ಬೋಳ ಫ್ಯಾಮಿಲಿಯದು ಮುಂಬೈಯಲ್ಲಿ ರಾಧಾಕೃಷ್ಣ ಹೋಟೇಲ್ಸ್ ಗ್ರೂಪ್ ಎಂಬ ದೊಡ್ಡ ಹೋಟೇಲ್ ಉದ್ಯಮವಿದೆ. ಇದರ ಮೂಲಪುರುಷ ಬೋಳ ಸುಬ್ಬಯ್ಯ ಶೆಟ್ಟಿ ಎಂಬ ಸಾತ್ವಿಕ ಮನುಷ್ಯ. ಆತನ ತಮ್ಮ ರಘುನಾಥ್ ಶೆಟ್ಟಿಯ ಮಗನೇ ಈ ಪರ್ವತ ಶೆಟ್ಟಿ. ಮುಂಬೈನ ಆ್ಯಂಟಿ ರೌಡಿ ಸ್ಕ್ವಾಡ್‌ನ ಪೊಲೀಸ್ ಅಧಿಕಾರಿಯಾಗಿದ್ದ ವಿಜಯ್ ಸಾಲಸ್ಕರ್ ಜತೆ ಪರ್ವತನಿಗೆ ನಿಕಟ ನಂಟಿತ್ತು. ಆ ಅಧಿಕಾರಿಯ ಕಪ್ಪು ಹಣದ ಚಲಾವಣೆಗಾರರಲ್ಲಿ ಈತನೂ ಒಬ್ಬನಾಗಿದ್ದ. ವಿಜಯ ಸಾಲಸ್ಕರ್‌ಗೆ ಅಂಡರ್‌ವರ್ಲ್ಡ್ ಪುಂಡರ ಮಾಹಿತಿ ಕೊಟ್ಟು ಹಲವು ನಕಲಿ ಎನ್‌ಕೌಂಟರ್ ಮಾಡಿಸಿದ 'ಕೀರ್ತಿ' ಈ ಪರ್ವತನದು.

ಘಣಿಯೂ ಸಾಧು ಶೆಟ್ಟಿ ಬಗ್ಗೆಯೂ ಸಾಲಸ್ಕರ್‌ಗೆ ಮಾಹಿತಿ ಕೊಟ್ಟಿದ್ದು ಇದೇ ಪರ್ವತನಾಗಿತ್ತು! ತನ್ನ ಸಹಚರನಾಗಿದ್ದ ಬೋಳದವನೇ ಆದ ಓಡ ದಿನೇಶ್ ಯಾನೆ ದಿನೇಶ್ ಶೆಟ್ಟಿ ಮೂಲಕ ಸಾಧುಶೆಟ್ಟಿಗೆ ಮುಹೂರ್ತ ಇಟ್ಟಿದ್ದ ಪರ್ವತ ಶೆಟ್ಟಿ. ಅಂದರೆ ಓಡ ದಿನೇಶನನ್ನು ಮುಂದಿಟ್ಟುಕೊಂಡು ಸಾಧುಶೆಟ್ಟಿಯ ಚಲನವಲನ ತಿಳಿದುಕೊಂಡು ವಿಜಯ್ ಸಾಲಸ್ಕರ್‌ಗೆ ಮುಟ್ಟಿಸುತ್ತಿದ್ದ ಅನಾಹುತಕಾರಿ ಪರ್ವತ ಶೆಟ್ಟಿ. ಅಂತೂ ಸಾಧು ಶೆಟ್ಟಿ ಹತನಾಗುತ್ತಾನೆ.

ಛೋಟಾ ರಾಜನ್ ತನ್ನ ಗ್ಯಾಂಗ್‌ಸ್ಟರ್ ಸಾಧು ಶೆಟ್ಟಿ ಕೊಲೆಯಾಗುತ್ತಿದ್ದಂತೆಯೇ ಕೆರಳಿ ಕೆಂಡವಾಗುತ್ತಾನೆ. ಸಾಧು ಶೆಟ್ಟಿ ಹೆಂಡತಿ ಪ್ರೇಮಾಶೆಟ್ಟಿಗೆ ಫೋನಾಯಿಸಿ "ನಿನ್ನ ಗಂಡನನ್ನೂ ಕೊಂದ ಇಬ್ಬರನ್ನೂ ಒಂದು ವರ್ಷದಲ್ಲಿ ಮುಗಿಸುತ್ತೇನೆ" ಅನ್ನುತ್ತಾನೆ. ಅದೇ ಪ್ರಕಾರ ಶರತ್ ಶೆಟ್ಟಿಯನ್ನು ಕೊಂದೆಸೆಯುತ್ತಾನೆ. ಶರತ್‌ಗೆ ಸಾಧುಶೆಟ್ಟಿ ಬಗ್ಗೆ ಮಾಹಿತಿ ಕೊಟ್ಟಿದ್ದ ಓಡ (ದ್ರೋಣಿ) ದಿನೇಶ್‌ನನ್ನೂ ಮುಗಿಸುತ್ತಾನೆ. ಯಾವತ್ತೂ ಓಡ ದಿನೇಶ್‌ನ ಕಾರಲ್ಲಿ ಇರುತ್ತಿದ್ದ ಪರ್ವತ ಶೆಟ್ಟಿ ಅಂದು ಇರುವುದಿಲ್ಲ.

ಇಂಥ ಡಬ್ಬಲ್‌ಗೇಮ್ ಪರ್ವತ ಶೆಟ್ಟಿ ನಂದಿಕೂರು ಡಿ-ನೋಟಿಫಿಕೇಶ್ ಡೀಲ್‌ನಲ್ಲಿ ಶಾಸಕ ರಘುಪತಿ ಭಟ್ಟನೊಂದಿಗಿನ ಸಂಬಂಧ ಕೆಡಿಸಿಕೊಂಡಿದ್ದ. ಭಟ್ಟನ ಚಡ್ಡಿ ಹರುಕ ದೌರ್ಬಲ್ಯ ಬಳಸಿಕೊಂಡು ಆತನ ರಾಜಕೀಯ ವನವಾಸಕ್ಕೆ ಅಟ್ಟಲು ಪ್ಲಾನ್ ಮಾಡಿದ್ದಾನೆ.

ಪೇಜಾವರರಿಗಿದು ಬೇಕಿತ್ತಾ?



ಬ್ಲೂಜೆಪಿಯ ಬುರ್ನಾಸ್ ಶಾಸಕ ರಘುಪತಿ ಭಟ್ಟನ ಸೆಕ್ಸ್ ಸಿನಿಮಾ ತಯಾರಿಕೆ ಕೈಂಕರ್ಯದಲ್ಲಿ ಭಟ್ಟನಷ್ಟೇ ಡ್ಯಾಮೇಜ್ ಸಂಘಪರಿವಾರಕ್ಕೆ ಆಗಿದೆ. ಹೀಗಾಗಿ ಸಂಘ ಪರಿವಾರದ ಮಾನ ಉಳಿಸಲು ಪೇಜಾವರ ಮಠಾಧೀಶರೇ ಖುದ್ದು ಫೀಲ್ಡಿಗೆ ಇಳಿಯಬೇಕಾದ 'ದುರಂತ' ಎದುರಾಗಿದೆ. ಬಿಜೆಪಿ ಉಳಿಸಲು ಸ್ವಾಮೀಜಿ ಪರೋಕ್ಷವಾಗಿ ವಿಟ ಪುರುಷ ಭಟ್ಟನನ್ನು ಸಮರ್ಥಿಸಬೇಕಾಗಿದೆ. ರಾತ್ರೋರಾತ್ರಿ 'ಪ್ರಜಾಪ್ರಭುತ್ವ ಸಂರಕ್ಷಣಾ ವೇದಿಕೆ' ಹುಟ್ಟುಹಾಕಿ ಪೇಜಾವರರಿಂದ ಸಂಘ ಪರಿವಾರ ಭಾಷಣ ಮಾಡಿಸಿದೆ. ಈ ಸಭೆಯಲ್ಲಿ ರಘುಪತಿ ಭಟ್ಟ ತಂದ ಬಾಡಿಗೆ ಜನರೇ ಹೆಚ್ಚಿದ್ದರು. ಪೇಜಾವರರು 'ಸುಮ್ಮಸುಮ್ಮನೆ ಯಾರ್‍ಯಾರದೋ ತೇಜೋವಧೆ ಮಾಡಬಾರದು... ಸಿಡಿ ಸತ್ಯಾಸತ್ಯತೆ ಬಗ್ಗೆ ತನಿಖೆ ಆಗಲಿ...' ಎಂದು ಅಲವತ್ತುಕೊಂಡರು ಪಾಪ.

ಇಡೀ ಕರಾವಳಿಗೆ ಗೊತ್ತಿರುವ ರೋಗಪತಿ ಭಟ್ಟನ ಅವಲಕ್ಷಣ ಪೇಜಾವರರಂಥ ತಪೋಜ್ಞಾನಿಗಳಿಗೆ ಅರ್ಥವಾಗದ್ದು ವಿಪರ್ಯಾಸ. ಭಟ್ಟನ ದುರ್ಬುದ್ಧಿ ಗೊತ್ತಿದ್ದೂ-ಗೊತ್ತಿದ್ದೂ ಸ್ವಾಮೀಜಿ ಆತ, ಆತನ ಕೊಳಕು ಬಿಜೆಪಿ ಪರ ವಕಾಲತ್ತು ಮಾಡಿದ್ದಾರೆ. ಪೇಜಾವರರ ದಯನೀಯ ಸ್ಥಿತಿ ಕಂಡು ಜನ 'ಸ್ವಾಮೀಜಿಗೆ ಇದು ಬೇಕಿತ್ತೆ?' ಎಂದು ಲೊಚಗುಟ್ಟಿದರು. ಪಬ್, ಹೋಮ್‌ಸ್ಟೇ ಮೇಲೆ ದಾಳಿ ಮಾಡಿದಾಗ ಅಥವಾ ಸಹಪಾಠಿಗಳೊಂದಿಗೆ ಹೋಗುತ್ತಿರುವ ಹಿಂದೂ ಹುಡುಗಿಯರ ಶೀಲ ಶಂಕಿಸಿ ಹಿಂದೂತ್ವವಾದಿಗಳು ಹಿಂಡಿ-ಹಿಸುಕಿದಾಗ ಆಗದ ನೋವು-ಬೇಸರ ರಘುಪತಿ ಭಟ್ಟನ ಬಣ್ಣ ಬಯಲಾದಾಗ ಪೇಜಾವರರಿಗೆ ಆಗಿದೆ. ಪಾಪ!!

ಭಟ್ಟನ ಮಾನ-ಮರ್ಯಾದೆ ಹರಾಜು ಹಾಕಲು ಹೋದ ಸಂಘಪರಿವಾರಿಗಳು ಈಗ ತಮ್ಮ ಮುಸುಡಿಗೆ ತಾವೇ ಸಗಣಿ ಬಳಿದುಕೊಂಡಂತಾಗಿದೆ. ಮುಖ ಉಳಿಸಿಕೊಳ್ಳಲು ವಿತಂಡವಾದ ಮಂಡಿಸುತ್ತಿದ್ದಾರೆ. ಈಗ ಸಂಘಪರಿವಾರದ ಪ್ರೋಪಗಾಂಡ ಮಷಿನರಿ ಎಚ್ಚೆತ್ತುಕೊಂಡಿದೆ. ದೂರವಾಣಿ, ಅಂತರ್ಜಾಲದ ಸಾಮಾಜಿಕ ತಾಣಗಳಲ್ಲಿ ಮತ್ತು ಸಾರ್ವಜನಿಕವಾಗಿ ಸಂಘಿಗಳು ದುರುಳ ಶಾಸಕ ಭಟ್ಟನ ದುಶ್ಯಾಸನಗಿರಿಯನ್ನು ನಿರ್ಲಜ್ಜವಾಗಿ ಸಮರ್ಥಿಸಿಕೊಳ್ಳುತ್ತಿದ್ದಾರೆ. ಜನರನ್ನು ದಾರಿ ತಪ್ಪಿಸುವ ವಿಚಾರ ಹರಿಬಿಡುತ್ತಿದ್ದಾರೆ. ಹೆಂಡತಿ ಇಲ್ಲದ ಭಟ್ಟ ಹಿಂದೂ ಸ್ತ್ರೀಯೊಂದಿಗೆ ಆಟ ಆಡಿದ್ದು ತಪ್ಪಲ್ಲ, ಆಕೆ ಅನ್ಯ ಧರ್ಮೀಯಳಲ್ಲ, ಆಕೆ ಅಪ್ರಾಪ್ತೆಯಲ್ಲ, ಅದು ರೇಪ್ ಅಲ್ಲ, ಅದು ಸಮ್ಮತ ಕ್ರಿಯೆ, ಉಪ್ಪು-ಹುಳಿ-ಖಾರ-ತುಪ್ಪ ತಿಂದ ಭಟ್ಟ ಮಾಡಿದ್ದರಲ್ಲಿ ತಪ್ಪೇನಿಲ್ಲ... ಹೇಗಿದೆ ಸಮಸ್ತ ಹಿಂದೂ ಸಂಸ್ಕೃತಿಯ ವಾರಸುದಾರ ಹಿಂದೂಗಳ ಸ್ತ್ರೀ ಬಗೆಗಿನ ದೃಷ್ಟಿಕೋನ?

ರೋಗಪತಿ ಭಟ್ಟನದು ಅಹೋರಾತ್ರಿ ಸೂಳೆಗಾರಿಕೆಯಾದರೆ, ಸಂಘ ಪರಿವಾರದ ಸೋಗಲಾಡಿಗಳದ್ದು ಮಾನಸಿಕ-ತಾತ್ವಿಕ ಹಾದರ!!

ರ್ಘುಡ್ ಏರಿಯಾದ 400 ಎಕರೆ ಟಿಫಿಫೈಡ್ ಜಮೀನಿನಲ್ಲಿ 110 ಎಕರೆ ಕೊಂಡಿದ್ದ. ಈ ಡೀಲು ನಡೆಸಿದ್ದು ಆಳುವ ಪಾರ್ಟಿಯ ಶಾಸಕ ರಘುಪತಿ ಭಟ್ಟ. ಲ್ಯಾಂಡ್ ಟಿಫಿಕೇಷನ್ ಮಾಡಿಸಿಕೊಟ್ಟದ್ದಕ್ಕಾಗಿ ಭಟ್ಟನಿಗೆ ತ ಶೆಟ್ಟಿ ಬರೋಬ್ಬರಿ 50 ಕೋಟಿ ದ್ದನಂತೆ. ಆನಂತರ ಆ ಭೂಮಿಯನ್ನು ಶೆಟ್ಟಿ ಕಾರಣಿಯೊಬ್ಬನಿಗೆ ಮಾರಾಟ ಮಾಡಿದ್ದಾನೆ.

ಈ ಡಿನೋಟಿಫಿಕೇಷನ್ ಬಿಸಿನೆಸ್‌ನಲ್ಲಿ ಭಟ್ಟ-ತ ಶೆಟ್ಟಿ ನಡುವೆ ವೈಮನಸ್ಸು ಬೆಳೆದಿತ್ತು. ಭಟ್ಟ ಟ್ಟ ಹಣ ಡಿಮ್ಯಾಂಡ್ ಮಾಡಿದ್ದ. ಇದು ಪರ್ವತ ಯನ್ನು ಕೆರಳಿಸಿತ್ತು. ಆದರೂ ಹೊರನೋಟಕ್ಕೆ ೂ ಅನ್ಯೋನ್ಯವಾಗೇ ಇದ್ದರು. ಭಟ್ಟ ಆಗಾಗ ಹೋಟೇಲ್‌ಗೆ ದಾಹ ತೀರಿಸಿಕೊಳ್ಳಲೆಂದು ಗಿಬರುತ್ತಿದ್ದ. ಅಲ್ಲಿ ನೇಪಾಳಿ, ಟಿಬೆಟಿಯನ್, ಯನ್ ಮುಂತಾದ ಎಳೆಎಳೆ ವಿದೇಶಿ ಂಗಿಯರು ತಲೆ ನೆರೆತ ಭಟ್ಟನಿಗೆ ಸಿಗುತ್ತಿದ್ದರು. ಚಟ ತೀರಿಕೆಗೆಂದು ಭಟ್ಟ ವಿಮಾನದಲ್ಲೇ ಬೈಗೆ ಹೋಗಿ ಬೆಳಗಾಗುವುದರಲ್ಲಿ ಬರುತ್ತಿದ್ದ. ಾ ಪ್ರಕಾರ ಮೊನ್ನೆ 11-2-2013ರಂದು ಭಟ್ಟ ಯಾ ಹೊಟೇಲ್‌ಗೆ ನೇಪಾಳಿ ಹುಡುಗಿ ಜತೆ ಗಿದ್ದಾನೆ. ಆಗ ಪರ್ವತ ಶೆಟ್ಟಿ ಭಟ್ಟನ ್ಯಗೃಹದಲ್ಲಿ ಅಡಗಿಸಿಟ್ಟ ಸಿಸಿ ಕ್ಯಾಮರಾದಲ್ಲಿ ಲೀಲೆ ಇಂಚಿಂಚಾಗಿ ಸೆರೆಹಿಡಿದಿದ್ದಾನೆ. ಅದನ್ನು ಉಡುಪಿಯಲ್ಲಿರುವ ಭಟ್ಟನ ವೈರಿ ಪಡೆಗೆ ತರಿಸಿದ್ದಾನೆ. ಭಟ್ಟನ ವಿರೋಧಿ ಯುವ ಪಡೆ ಾರು ಸಿಡಿ ಮಾಡಿ ಊರು ತುಂಬ ಹಂಚಿ ಸ್ ಹಿರಿಯರಿಂದ ಶಹಬ್ಬಾಸ್‌ಗಿರಿ ಪಡೆದಿದ್ದಾರೆ. ಭಟ್ಟನ ಹಣಿಯಲು ಪ್ಲಾನ್ ಹಾಕಿದವರಿಗೆ ಅಪೆಕ್ಸ್ ್ ಅಧ್ಯಕ್ಷ ರಾಜೇಂದ್ರಕುಮಾರ್ ಯಾನೆ ಗಡ್ಡ ೇಂದ್ರಕುಮಾರ್ ಎಂಬ ಪ್ರಳಯಾಂತಕ ನೆರವಾಗಿ ಂದು ಉಡುಪಿಯಲ್ಲಿ ಗುಲ್ಲೆದ್ದಿದೆ. ಷಡ್ಯಂತ್ರ ಯುವುದರಲ್ಲಿ ರಾಜೇಂದ್ರ ನಿಪುಣ. ಈತನ ಸ್ವ-ಯ ಗುಂಪಿನ ಚಟುವಟಿಕೆಗೆ ಎಮ್ಮೆಲ್ಲೆಗಿರಿ ಬಳಸಿ ಅಡ್ಡಗಾಲು ಹಾಕಿದ್ದ. ಅಪೆಕ್ಸ್ ಬ್ಯಾಂಕಲ್ಲಿ ಟ್ಯಂತರ ರೂ. ಗೋಲ್‌ಮಾಲ್ ಮಾಡಿರುವ ಗಡ್ಡ ೇಂದ್ರನನ್ನು ಬ್ಲ್ಯಾಕ್‌ಮೇಲ್ ಮಾಡಲು ಭಟ್ಟ ೆಸಿದ್ದ. ಇದು ಇವರಿಬ್ಬರಲ್ಲಿ ದ್ವೇಷ-ಶೀತಲ ರ ಸೃಷ್ಟಿಸಿತ್ತು. ಹೀಗಾಗಿ ಈ ಭಟ್ಟನನ್ನು ಮಾಜಿ ಶಾಸಕ ಮಾಡಲು ರಾಜೇಂದ್ರ ಪಣ ತೊಟ್ಟಿದ್ದಾನೆ. ಸಹಜವಾಗೇ ಸಿಡಿ ತಯಾರಿಕೆ-ವಿತರಣೆಯಲ್ಲಿ ಕೈಯ್ಯಾಡಿಸಿದ್ದಾನೆ. ಭಟ್ಟನ ಶತ್ರುಗಳೆಲ್ಲ ಒಂದಾಗಿ ಆತನ ಹೆಡೆಮುರಿ ಕಟ್ಟಿ ಹಣಿದಿದ್ದಾರೆ. ಒಟ್ಟಿನಲ್ಲಿ ಅನಾಚಾರ-ಅವ್ಯವಹಾರ ಮಾಡಿ ದಕ್ಕಿಸಿಕೊಳ್ಳುತ್ತ ಬಂದಿದ್ದ ಭಟ್ಟ ಈಗ ಉಡುಪಿ ಜನರೆದುರು ಬೆತ್ತಲಾಗಿ ನಿಂತಿದ್ದಾನೆ. ಪದ್ಮಪ್ರಿಯಾಳ ಕಣ್ಣೀರಿನ ಶಾಪ ಆತನಿಗೆ ತಟ್ಟಿದೆ ಎಂದು ಜನ ಆಡಿಕೊಳ್ಳುತ್ತಿದ್ದಾರೆ.

ಸಿಡಿ ಉಡುಪಿಗೆ ಬಂದು ಕಡಿಮೆಯೆಂದರೂ 15 ದಿನ ಆಗಿದೆ. ಆದರೆ ಅದನ್ನು ವಿರೋಧಿ ಕಾಂಗ್ರೆಸ್‌ನವರಾಗಲಿ, ನೋಡಿದವರಾಗಲಿ ಬಹಿರಂಗ ಪಡಿಸಲು ಹೋಗಲಿಲ್ಲ. ಕಾಂಗ್ರೆಸ್‌ನ ಕ್ಯಾಂಡಿಡೇಟ್ ಪ್ರಮೋದ್ ಮಧ್ವರಾಜ್‌ಗೆ ಸಿಡಿ ತಮಗೇ ತಿರುಗುಬಾಣವಾಗುವ ಭಯವಿತ್ತು. ಮೊದಲು ಸಿಡಿಯನ್ನು ನಾಯರ್ ಕೆರೆ ಕಟ್ಟೆ ಮೇಲೆ ಇಟ್ಟು ಕಾಂಗ್ರೆಸ್ ಆಫೀಸಿಗೆ ಫೋನಾಯಿಸಿ "ನಿಮಗೆ ಎಲೆಕ್ಷನ್‌ನಲ್ಲಿ ಹೆಲ್ಪ್ ಆಗುವಂಥ ಸಿಡಿ ಕೆರೆ ಕಟ್ಟೆ ಮೇಲಿದೆ..." ಎಂದು ಚೆಡ್ಡಿಗಳು ಹೇಳಿದ್ದರು. ಅದೇನೋ ಬಾಂಬ್ ಆಗಿರಬಹುದೆಂದು ಪುಕ್ಕಲು ಕಾಂಗ್ರೆಸಿಗರು ಅತ್ತ ಸುಳಿಯಲಿಲ್ಲ. ನಂತರ ಕಾಂಗ್ರೆಸ್ ಕಚೇರಿಯ ಕಿಟಕಿಯಲ್ಲೇ ಇಟ್ಟುಹೋಗಿದ್ದರು. ಆಗ ಪ್ರಮೋದ್-ಜಯಪ್ರಕಾಶ್ ಹೆಗ್ಡೆ ನೋಡಿ ಇದರಲ್ಲಿ ತಲೆ ಹಾಕದೇ ಸುಮ್ಮನಿರಲು ತೀರ್ಮಾನಿಸಿದ್ದರು. ಹೇಗಾದರೂ ಮಾಡಿ ಭಟ್ಟನ ಮಾನ ಹರಾಜು ಹಾಕಲೇಬೇಕೆಂದು ಹಠತೊಟ್ಟಿದ್ದ ಚೆಡ್ಡಿಗಳು ಕಟ್ಟಕಡೆಯಾಗಿ ಪತ್ರಿಕಾ ಕಚೇರಿ, ಟಿವಿ ಚಾನೆಲ್ ಆಫೀಸಿಗೆ ಸಿಡಿ ಕಳಿಸಿದ್ದಾರೆ. ಆಗ ಭಟ್ಟನ ಅಸಲೀ ಅವತಾರ ಅನಾವರಣ ಆಗಿದೆ!!

ಇಷ್ಟಾದರೂ ಭಂಡ ಭಟ್ಟ ಮಾತ್ರ ತಾನು ಪರಿಶುದ್ಧ ಮರ್ಯಾದಾ ಪುರುಷೋತ್ತಮ ಎಂದು ಬಾಯ್ಬಾಯಿ ಬಡಿದು ಕೊಳ್ಳುತ್ತಿದ್ದಾನೆ. ಸಿಡಿಯಲ್ಲಿರುವಾತ ತಾನಲ್ಲ ಎಂದು ತಲೆ-ಬುಡವಿಲ್ಲದ ಸಬೂಬು ಕಟ್ಟುತ್ತಿದ್ದಾನೆ. ತನ್ನ ಚಿತ್ರ ಮಾರ್ಫಿಂಗ್ ಮಾಡಲಾಗಿದೆ ಅಂತಾನೆ. ಫೋಟೋ ಮಾರ್ಫಿಂಗ್ ಮಾಡಬಹುದೇ ವಿನಃ ಸಿಸಿ ಕ್ಯಾಮರಾದಲ್ಲಿ ಸೆರೆಹಿಡಿದ ದೃಶ್ಯ ಅದ್ಹೇಗೆ ಮಾರ್ಫಿಂಗ್ ಮಾಡಲಾದೀತೆಂದರೆ ಭಟ್ಟನಲ್ಲಿ ಉತ್ತರವಿಲ್ಲ. ಅಷ್ಟೇ ಅಲ್ಲ ಸೈಬರ್ ಕಾನೂನಿನಂತೆ ದೂರು ಕೊಡಲು ಅವಕಾಶವಿದ್ದರೂ ಆತ ಸುಮ್ಮನಿದ್ದಾನೆ. ದೂರು ಕೊಟ್ಟರೆ ಕೋಲು ಕೊಟ್ಟು ಹೊಡೆಸಿಕೊಂಡಂತಾ ದೀತೆಂಬ ಅಳುಕು ಭಟ್ಟನಿಗೆ. ಮಡದಿ ಪದ್ಮಪ್ರಿಯಾ ನಿಗೂಢ ಸಾವಿನ ಪ್ರಕರಣದಲ್ಲಿ ಮಿತ್ರ ಅತುಲ್‌ರಾವ್‌ನ ಫಿಕ್ಸ್ ಮಾಡಲು ಹೋಗಿ ಭಟ್ಟ ಸಿಕ್ಕಿಬಿದ್ದಿದ್ದ. ಆ ಕೇಸ್‌ನಲ್ಲಿ ಸಿಐಡಿ ಅತುಲ್‌ನ ಕೈಬಿಟ್ಟು ಭಟ್ಟನ ಮೇಲೆ ಎಫ್‌ಐಆರ್ ಹಾಕಿತ್ತು. ಭಟ್ಟ ನಿರೀಕ್ಷಣಾ ಜಾಮೀನು ತಂದುಕೊಂಡಿದ್ದ. ಈ ಸಿಡಿ ಕೇಸೂ ಉಲ್ಟಾ ಹೊಡೆಯುತ್ತದೆಂದು ಕಳ್ಳ ಭಟ್ಟ ಕಾನೂನು ಕ್ರಮಕ್ಕೆ ಮುಂದಾಗುತ್ತಿಲ್ಲ ಅಷ್ಟೇ. ಹಾಗೆಯೇ ಸಿಡಿಯಲ್ಲಿ ನಮೂದಾದ ದಿನಾಂಕ (11-02-2013)ರಂದು ತಾನು ಮುಂಬೈನಲ್ಲಿ ಇರಲೇ ಇಲ್ಲ, ಮಂಗಳೂರಲ್ಲಿದ್ದ ಶ್ರೀನಿವಾಸ ಕಲ್ಯಾಣೋತ್ಸವದಲ್ಲಿದ್ದೆ ಎಂದು ಬೂಸಿ ಬಿಡುತ್ತಿದ್ದಾನೆ. ಫ್ಲೈಟ್‌ನಲ್ಲಿ ಮುಂಬೈಗೆ ಹೋಗಿ ತೀಟೆ ತೀರಿಸಿಕೊಂಡು ಬರುವವನಿಗೆ ಎಷ್ಟು ಹೊತ್ತುಬೇಕು? ಎಂದು ಕರಾವಳಿ ಜನ ನಗುತ್ತಿದ್ದಾರೆ. ಕಲ್ಯಾಣೋತ್ಸವ ನಡೆದದ್ದು ಫೆಬ್ರವರಿ 9 ಮತ್ತು 10ರಂದೇ ವಿನಃ 11ರಂದು ಅಲ್ಲ. ಭಟ್ಟನ ತೆವಲೋತ್ಸವ ಚಿತ್ರೀಕರಣ ಆಗಿದ್ದು 11ರಂದು.

ಈ ಭಟ್ಟ ಏನು ಹೇಳಿದರೂ ಆತನ ಗುಣ-ನಡತೆ ಬಲ್ಲ ಉಡುಪಿಯ ಮಂದಿ ಮಾತ್ರ ನಂಬುತ್ತಿಲ್ಲ. ಈ ನಕಲಿ ಚೆಡ್ಡಿಗೆ ಒರಿಜಿನಲ್ ಚೆಡ್ಡಿ ದೊರೆಗಳು ಬಿಜೆಪಿ ಟಿಕೆಟ್ ಕೊಡುವ ಸಾಧ್ಯತೆಯಿಲ್ಲ; ಟಿಕೆಟ್ ಸಿಕ್ಕರೂ ಗೆಲ್ಲುವುದೂ ಇಲ್ಲ. ಮಾಡಿದ್ದುಣ್ಣೋ ಮಾರಾಯಾ! ಈ ಸೆಕ್ಸ್ ಸಿಡಿ ಭಟ್ಟನೊಬ್ಬನದೇ ಅಲ್ಲ, ಸಂಘ ಪರಿವಾರದ ಧರ್ಮಕಾರಣಿಗಳ ಕರ್ಮಕತೆಯನ್ನೂ ಬಿಚ್ಚಿಟ್ಟಿದೆ!!

● ನಹುಷ

ಟಿಕೆಟ್ ಯಾರಿಗೆ?



ಮಧ್ವರಾಜ್


ರಘುಪತಿ ಭಟ್ಟ ತನ್ನ ರಾಸಲೀಲಾ ವಿನೋದದ ಸಿಡಿ ಬಹಿರಂಗವಾಗುತ್ತಿದ್ದಂತೆಯೇ ಎಲೆಕ್ಷನ್‌ಗೆ ನಿಲ್ಲೋದಿಲ್ಲ ಎಂದು ವೈರಾಗ್ಯ ಪ್ರದರ್ಶಿಸಿದ್ದ. ಆದರೆ ಈಗ ಸಂಘ ಪರಿವಾರದ ಟಿಕೆಟ್‌ದಾತರಿಗೆ ನೇರಾನೇರ ಸೆಡ್ಡು ಹೊಡೆದು ನಿಂತಿದ್ದಾನೆ. ತನಗೆ ಟಿಕೆಟ್ ಕೊಡಿ ಎಂದು ಜನ ಸೇರಿಸಿ ದಾಂಧಲೆ ಎಬ್ಬಿಸುತ್ತಿದ್ದಾನೆ. ಆತನ ಅಭಿಮಾನಿಗಳು ಕಲ್ಲಡ್ಕ ಭಟ್ಟ, ಸೋಮಶೇಖರ್ ಭಟ್ಟ, ಗುಜ್ಜಾಡಿ ಪ್ರಭಾಕರ್, ಎ.ಜಿ. ಕೊಡ್ಗಿ ವಗೈರೆ ಚೆಡ್ಡಿ ಹಿರಿಯರಿಗೆ ರೋಪು ಹಾಕುವ ಚಹರೆ ತೋರಿಸಿಕೊಂಡಿದ್ದಾರೆ. ಟಿಕೆಟ್ ಕೊಡದಿದ್ದರೆ ಉಡುಪಿಯಲ್ಲಿ ಬಿಜೆಪಿಯನ್ನು ಭೂಗತ ಮಾಡುವ ಮಾತಾಡುತ್ತಿದ್ದಾರೆ.


ಪಾರ್ಟಿ ಸೋತರೂ ಸರಿಯೇ. ಹೈಬ್ರಿಡ್ ಚೆಡ್ಡಿ ತಳಿ ರಘುಪತಿಗೆ ಟಿಕೆಟ್ ಕೊಡದಿರಲು ಪಕ್ಕಾ ಚೆಡ್ಡಿ ಬಾಸ್‌ಗಳು ನಿರ್ಧರಿಸಿದ್ದಾರೆ. ಉಡುಪಿಯ ಶಾರದಾ ಇಂಟರ್‌ನ್ಯಾಷನಲ್ ಹೋಟೇಲ್ ಮಾಲಿಕ ಸುಧಾಕರ ಶೆಟ್ಟಿ, ಜಿಲ್ಲಾ ಬಿಜೆಪಿ ಅಧ್ಯಕ್ಷ ಉದಯಕುಮಾರ್ ಶೆಟ್ಟಿ ಮತ್ತು ಕೋಟಿ-ಚನ್ನಯ್ಯ ಸಿನೆಮಾ ತೆಗೆದ ಮುದ್ದು ಸುವರ್ಣರ ಸೊಸೆ ಗೀತಾಂಜಲಿ ಸುವರ್ಣರ ಹೆಸರನ್ನು ಕಲ್ಲಡ್ಕ ಹೈಕಮಾಂಡ್ ಪರಿಶೀಲಿಸುತ್ತಿದೆ. "ಬಿಜೆಪಿ ಸೋಲುವ ಹೊತ್ತಲ್ಲಿ ನನ್ನ ನೆನಪಾಯ್ತಾ? ಹಿಂದೆ ಬಿಜೆಪಿ ಕಟ್ಟಿ ಬೆಳೆಸಿದ ನನ್ನನ್ನು ಶೂದ್ರನೆಂದು ತಿರಸ್ಕರಿಸಿ ಬ್ರಾಹ್ಮಣ ರಘುಪತಿ ಭಟ್ಟನಿಗೆ ಕ್ಯಾಂಡಿಡೇಟ್ ಮಾಡಿದ್ದು ಮರೆತು ಹೋಯ್ತಾ?" ಎಂದು ಚೆಡ್ಡಿ ದೊರೆಗಳನ್ನು ತರಾಟೆಗೆ ತೆಗೆದುಕೊಳ್ಳುತ್ತಿರುವ ಉದಯಕುಮಾರ್ ಶೆಟ್ಟಿಗೆ ಮೊದಲಿನ ಉಮೇದಿ ಉಳಿದಿಲ್ಲ. ಬಿಜೆಪಿ. ಬಣ್ಣಗೆಟ್ಟಿದೆ ಎಂಬ ಭಯ ಉದಯ್‌ಗೆ. ಹಾಗಾಗಿ ಉಳಿದಿರುವುದು ಗೀತಾಂಜಲಿ ಸುವರ್ಣ ಎಂಬ ಬಿಲ್ಲವರ ವೀರ ವನಿತೆಯೊಬ್ಬಳೇ. ವಿ.ಎಸ್. ಆಚಾರ್ಯರ ಹೆಂಡತಿ-ಮಗನಂತೂ ಟಿಕೆಟ್ ಬೇಡವೇ ಬೇಡ ಅನ್ನುತ್ತಿದ್ದಾರೆ.

ಈ ಬಾರಿ ಉಡುಪಿಯಲ್ಲಿ ಕಾಂಗ್ರೆಸ್‌ನ ಪ್ರಮೋದ್ ಮಧ್ವರಾಜ್ ಎಂಬ ಜನಪರ ಯುವಕ ಮತ್ತು ಬಿಜೆಪಿಯ ಗೀತಾಂಜಲಿ ಸುವರ್ಣರ ನಡುವೆ ಹೋರಾಟ ನಡೆಯುವುದು ಬಹುತೇಕ ಖಾತ್ರಿಯಾಗಿದೆ. ಒಂದಂತೂ ಖರೆ, ಬಿಜೆಪಿಯಿಂದ ಈ ಬಾರಿ ಯಾರೇ ಸ್ಪರ್ಧಿಸಿದರೂ ಎಲ್ಲ ಜಾತಿ-ಧರ್ಮದ ಪ್ರೀತಿ ಗಳಿಸಿರುವ ಪ್ರಮೋದ್ ಮಧ್ವರಾಜ್ ಗೆಲ್ಲುವುದು ಗ್ಯಾರಂಟಿ!

ಬ್ಯಾಡಗಿ: ಸೋಲಿನ ಭಯಕ್ಕೆ ಹಿಂದೆ ಸರಿದ ಸುರೇಶಗೌಡ



ಸಿ.ಎಂ.ಉದಾಸಿ


ಶಿವರಾಜ್ ಸಜ್ಜನ್


ಸುರೇಶ್ ಪಾಟೀಲ್


ವಿರೂಪಾಕ್ಷಪ್ಪ


ಬಸವರಾಜ್ ಶಿವಣ್ಣವರ್


ಎಸ್.ಆರ್.ಪಾಟೀಲ್

ಚುನಾವಣೆಗಳು ಘೋಷಣೆ ಆಗುವ ಮುನ್ನ ತಾನು ಮ್ಮೆ ಗೆದ್ದು ಬಂದಂತೆ ಆರ್ಭಟಿಸುತ್ತಿದ್ದ ಮೆಣಸಿನ ು ಕ್ಷೇತ್ರವಾದ ಬ್ಯಾಡಗಿಯ ಶಾಸಕ ಸುರೇಶಗೌಡ ೀಲನಿಗೆ ಕೆಜೆಪಿಯಿಂದ ಟಿಕೆಟ್ ಸಿಕ್ಕಿದ್ದರೂ "ನಾನು ನಾವಣೆಯಲ್ಲಿ ಸ್ಪರ್ಧಿಸುವದಿಲ್ಲ, ಒತ್ತಾಯ ಮಾಡಬೇಡಿ" ು ಕಾರ್ಯಕರ್ತರೆದುರು ಅಂಗಲಾಚುತ್ತಿದ್ದಾನೆ. ಕಳೆದ ು ವರ್ಷಗಳ ಕಾಲ ತನ್ನನ್ನು ಗೆಲ್ಲಿಸಿದ್ದ ಮತದಾರರನ್ನು ಕಸದಂತೆ ಕಂಡಿದ್ದ ಈ ಭೂಪನಿಗೆ ಮತಪೆಟ್ಟಿಗೆಯಲ್ಲಿ ೀಲು ಖಚಿತ ಎಂಬುದು ಗೊತ್ತಾಗಿದೆ.

ಮೆಣಸಿನಕಾಯಿ ವ್ಯಾಪಾರದಿಂದ ಜಗತ್ತಿನಲ್ಲಿ ತನ್ನದೇ ನ್ನು ಮೂಡಿಸಿರುವ ಬ್ಯಾಡಗಿಯ ಎಪಿಎಂಸಿಯಲ್ಲಿ ಹಿಂದೆ ಸುರೇಶಗೌಡ ಪಾಟೀಲ. ಮೆಣಸಿನಕಾಯಿ ೀದಿಗಾರನಾಗಿದ್ದ. ಅದು ಹೇಗೋ ಮಾಜಿ ಬಿಜೆಪಿಯ ನಾಯಕ ಯಡಿಯೂರಪ್ಪನೊಂದಿಗೆ ದೋಸ್ತಿ ುರಿತು. ಹೀಗಾಗಿ ಕಳೆದ ಬಾರಿ ಈತನಿಗೆ ಬಿಜೆಪಿ ಟ್ ಸಲೀಸಾಗಿ ದಕ್ಕಿತ್ತು. ಜೊತೆಗೆ ಆಗ ಯಡ್ಡಿಯ ಗಾಯತ ಫ್ಯಾಕ್ಟರ್ ಕೂಡ ಇದ್ದದ್ದರಿಂದ ಪಾಟೀಲ ೀಸಾಗಿ ಶಾಸಕನಾಗಿಬಿಟ್ಟಿದ್ದ.

ಬಿಜೆಪಿ ತೊರೆದು ಕೆಜೆಪಿ ಸ್ಥಾಪಿಸಿದ ಯಡ್ಡಿಯ ಗನಂತೆ ಪಕ್ಷದ ಎಲ್ಲಾ ಉಸ್ತುವಾರಿಗಳನ್ನು ನಿಭಾಯಿಸುತ್ತಾ ದಿದ್ದ ಸುರೇಶಗೌಡನಿಗೆ ಮೊದಲ ಪಟ್ಟಿಯಲ್ಲೇ ಕೆಜೆಪಿಯ ಟ್ ಘೋಷಣೆಯಾಗಿತ್ತು. ಆದರೆ ತಾನು ಕ್ಷೇತ್ರದಲ್ಲಿ ುದಿರುವ ಅಂಧಾದರ್ಬಾರ್, ಭೂಹಗರಣ ಇತ್ಯಾದಿಗಳ ಪ್ರಜ್ಞೆ ಕಾಡುತ್ತಿರುವುದರಿಂದ ಜನರೆದುರು ಹೋಗು ುಕ್ಕೆ ಪಾಟೀಲನಿಗೆ ಹಿಂಜರಿಕೆ. ಆದ್ದರಿಂದ ಕೆಜೆಪಿಯ ಫಾರ್ಮ್' ಕೈಯಲ್ಲಿದ್ದರೂ "ನಾ ಒಲ್ಲೆ ನಾ ಒಲ್ಲೆ" ುದು ರಾಗ ಎಳೆಯುತ್ತಿದ್ದಾನೆ.

ಸಜ್ಜನರ ಎಂಟ್ರಿ

ಯಾವಾಗ ಸುರೇಶಗೌಡ ಸ್ಪರ್ಧೆಗೆ ನಿರಾಕರಿಸಿ ರಾಜಕೀಯ ್ಯತ್ತಿಯನ್ನು ಘೋಷಿಸಿದನೋ ಆಗ ವಿಧಾನ ಪರಿಷತ್ ಸ್ಯ ಶಿವರಾಜ ಸಜ್ಜನ ಬ್ಯಾಡಗಿ ಕ್ಷೇತ್ರಕ್ಕೆ ಕಾಲಿಟ್ಟರು. ದ ಬಾರಿ ಇದೇ ಸಜ್ಜನರಿಗೆ ಈ ಕ್ಷೇತ್ರಕ್ಕೆ ಬಿಜೆಪಿಯಿಂದ ಕೆಟ್ ನಿಗದಿಯಾಗಿತ್ತು. ಸುರೇಶಗೌಡ ಸ್ಥಳೀಯ, ಪ್ರಮುಖ ್ಯಾಪಾರಸ್ಥ ಮತ್ತು ಲಿಂಗಾಯತ ಸಮುದಾಯಕ್ಕೆ ಸೇರಿದವರಾಗಿದ್ದರಿಂದ ಕೊನೆ ಗಳಿಗೆಯಲ್ಲಿ ಶಿವರಾಜ ಸಜ್ಜನರಿಗೆ ಘೋಷಣೆಯಾಗಿದ್ದ ಬಿ ಫಾರ್ಮ್‌ಅನ್ನ ಸುರೇಶಗೌಡನಿಗೆ ನೀಡಲಾಗಿತ್ತು. ಈಗ ಈತ ಸೈಡ್ ಹಚ್ಚುತ್ತಿದ್ದಂತೆ 'ನಾನೇ ಅಸಲಿ ಕ್ಯಾಂಡಿಡೇಟ್ ಎಂದು ಸಜ್ಜನ ಬ್ಯಾಡಗಿ ಬಯಲಲ್ಲಿ ಓಡಾಡುತ್ತಿದ್ದಾರೆ.

ಜಿಲ್ಲೆಯ ಕಬ್ಬು ಬೆಳೆಗಾರರ ಏಕೈಕ ಜೀವನಾಡಿಯಾದ ಸಂಗೂರು ಶುಗರ್‍ಸ್‌ನ ನಿರ್ದೇಶಕರಾಗಿ ಸಜ್ಜನ ಮಾಜಿ ಮಂತ್ರಿ ಸಿ.ಎಂ.ಉದಾಸಿಯೊಂದಿಗೆ ಸೇರಿಕೊಂಡು ಕಾರ್ಖಾನೆಯನ್ನು ಸಂಪೂರ್ಣವಾಗಿ ದಿವಾಳಿ ಎಬ್ಬಿಸಿದ್ದಾರೆ. ಅಷ್ಟೇ ಅಲ್ಲ, ಕಾರ್ಖಾನೆಯನ್ನು ಖಾಸಗಿಯವರಿಗೆ ಗುತ್ತಿಗೆ ಆಧಾರದ ಮೇಲೆ ನೀಡಿ ಕಾರ್ಮಿಕರನ್ನು ಬೀದಿಗೆ ತಳ್ಳಲಾಗಿದೆ. ಜೊತೆಗೆ, ಹಾವೇರಿ ಹತ್ತಿರದ ಸರ್ಕಾರಿ ಗೋಮಾಳವನ್ನು ಕಬಳಿಸಿ ಅಲ್ಲಿ ಫಾರ್ಚುನ್ ಆಗ್ರೋ ಎಂಬ ಕಂಪನಿಯನ್ನು ಸಜ್ಜನ ತೆರೆದಿದ್ದಾನೆ.

ಜಿಲ್ಲೆಯಲ್ಲಿ ಉದಾಸಿ ಸಾರಥ್ಯದಲ್ಲಿ ಸಾಕಷ್ಟು ಭಾನಗಡಿಗಳನ್ನು ಮಾಡಿರುವ ಸಜ್ಜನ ಈಗ ಬ್ಯಾಡಗಿ ಕ್ಷೇತ್ರದಲ್ಲಿ ಕೆಜೆಪಿ ಅಭ್ಯರ್ಥಿಯಾಗುವುದು ಬಹುತೇಕ ನಿಶ್ಚಿತವಾಗಿದೆ.

ಅಳಿಯನಿಗೋಸ್ಕರ ಹಿಂದೆ ಸರಿದ ಗೌಡ

ಕ್ಷೇತ್ರದ ಪ್ರಭಾವಿ ನಾಯಕ ಎಸ್.ಆರ್.ಪಾಟೀಲ ಈ ಬಾರಿ ಕಾಂಗ್ರೆಸ್ ಅಭ್ಯರ್ಥಿಯಾಗುವುದು ಬಹುತೇಕ ಖಚಿತ ಎಂಬ ಮಾತು ಕೇಳಿಬಂದಿತ್ತು. ಈತ ಸಂಬಂಧದಲ್ಲಿ ಮಾಜಿ ಶಾಸಕ ಸುರೇಶಗೌಡನಿಗೆ ಅಳಿಯನಾಗಬೇಕು. ಕಳೆದ ಬಾರಿ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿದ್ದ ಎಸ್.ಆರ್.ಪಾಟೀಲ ಟಿಕೆಟ್ ದೊರೆಯದೇ ಇದ್ದಾಗ ಪಕ್ಷಾಂತರದ ನಾಟಕವಾಡಿ ಒಳಗೊಳಗೆ ಸುರೇಶಗೌಡನ ಗೆಲುವಿಗೆ ಬೆವರು ಹರಿಸಿದ್ದ ಎಂಬ ಮಾತಿದೆ. ಈ ಬಾರಿ ಅಳಿಯನ ಆ ಋಣ ತೀರಿಸಲು ಸುರೇಶಗೌಡ ಸ್ಪರ್ಧೆಯಿಂದ ಹಿಂದೆ ಸರಿದಿದ್ದಾರೆ ಎಂಬ ವದಂತಿ ಕೂಡ ಇದೆ.

ಆದರೆ ಎಸ್.ಆರ್.ಪಾಟೀಲರಿಗೆ ಕಾಂಗ್ರೆಸ್ ಈ ಬಾರಿಯೂ ಕೈ ಕೊಡಲಿದೆ. ಮಾಜಿ ಸಚಿವ ಬಸವರಾಜ ಶಿವಣ್ಣವರ ಅವರಿಗೆ ಬಿ ಫಾರ್ಮ್ ಗ್ಯಾರಂಟಿಯಾಗಿದೆ. ಹೀಗಾಗಿ ಸ್ಪರ್ಧೆಯಿಂದ ಹಿಂದೆಸರಿದಿರುವ ಮಾವ ಸುರೇಶಗೌಡ ಹಾಗೂ ಟಿಕೆಟ್ ವಂಚಿತ ಅಳಿಯ ಎಸ್.ಆರ್.ಪಾಟೀಲ ಯಾರ ಗೆಲುವಿಗೆ ಶ್ರಮಿಸುತ್ತಾರೆ ಎಂಬುದು ನಿಗೂಢವಾಗಿದೆ.

ಬಿಜೆಪಿಯಿಂದ ಬಳ್ಳಾರೀಲಿ ಸ್ಪರ್ಧೆ


ಮಾಜಿ ಶಾಸಕ ಸುರೇಶಗೌಡನೊಂದಿಗೆ ಹಲವರು ಕೆಜೆಪಿಯ ಅಂಗಳಕ್ಕೆ ಹಾರಿದ್ದರಿಂದ ಇಲ್ಲಿ ಬಿಜೆಪಿಗೆ ಹೊರಗಿನವರೇ ಆಸರೆಯಾಗಿದ್ದಾರೆ. ಜಿಲ್ಲಾ ಪಂಚಾಯತಿ ಚುನಾವಣೆಯಲ್ಲಿ ಬಿಜೆಪಿ ಟಿಕೆಟ್ ವಂಚಿತರಾಗಿದ್ದ ಮೋಟೆಬೆನ್ನೂರಿನ ಲ್ಯಾಂಡ್‌ಲಾರ್ಡ್ ವಿರುಪಾಕ್ಷಪ್ಪ ಬಳ್ಳಾರಿ ಪಕ್ಷೇತರರಾಗಿ ಕಣಕ್ಕಿಳಿದಿದ್ದರು. ಅಷ್ಟೇ ಅಲ್ಲ, ಚುನಾವಣೆಯಲ್ಲಿ ಗೆದ್ದು ತಮಗೆ ಟಿಕೆಟ್ ನಿರಾಕರಿಸಿದ್ದ ಬಿಜೆಪಿ ಮುಖಂಡರಿಗೆ ಸವಾಲು ಒಡ್ಡಿದ್ದರು. ಸದ್ಯ ಇವರೊಬ್ಬರೇ ಬಿಜೆಪಿಗೆ ಕ್ಷೇತ್ರದಲ್ಲಿ ಆಸರೆಯಾಗಿದ್ದಾರೆ. ಸುರೇಶಗೌಡ ಪಾಟೀಲನ ಆಡಳಿತದ ವಿರುದ್ಧ ಪ್ರತಿಭಟಿಸುತ್ತಾ ಪಕ್ಷದಲ್ಲೇ ವಿರೋಧಿ ಗುಂಪಿನ ನಾಯಕನಾಗಿದ್ದ ಬಳ್ಳಾರಿ ಸುರೇಶಗೌಡ ಕೆಜೆಪಿಗೆ ಹಾರುತ್ತಲೇ ಬಿಜೆಪಿ ಅಂಗಳದಲ್ಲಿ ಕಾಣಿಸಿಕೊಂಡಿದ್ದಾರೆ.

ಕ್ಷೇತ್ರದಲ್ಲಿ ಪ್ರಬಲರಾಗಿರುವ 62 ಸಾವಿರ ಮತದಾರರನ್ನು ಹೊಂದಿರುವ ಲಿಂಗಾಯತ ಪಂಚಮಸಾಲಿ ಸಮುದಾಯಕ್ಕೆ ಸೇರಿದ ಬಳ್ಳಾರಿ ಬಿಜೆಪಿಯ ಅಭ್ಯರ್ಥಿಯಾಗಿ ಕಣಕ್ಕೆ ಇಳಿದಿದ್ದಾರೆ. ಈ ಬಾರಿಯ ಚುನಾವಣೆ ತ್ರಿಕೋನ ಸ್ಪರ್ಧೆಯಾಗಿ ಹೊರಹೊಮ್ಮುವುದರಲ್ಲಿ ಎರಡು ಮಾತಿಲ್ಲ.


ಶಿವಣ್ಣವರ ಮೇಲೆ ಅನುಕಂಪ

ದಳ ಸರ್ಕಾರದಲ್ಲಿ ಮಂತ್ರಿಯಾಗಿದ್ದ ಹಾವೇರಿಯ ಮಾಜಿ ಸಚಿವ ಬಸವರಾಜ ಶಿವಣ್ಣವರ ಹಾವೇರಿ ಕ್ಷೇತ್ರ ಮೀಸಲಾತಿಗೆ ಒಳಪಟ್ಟಿದ್ದರಿಂದ ಪಕ್ಕದ ಬ್ಯಾಡಗಿಯನ್ನು ಆರಿಸಿಕೊಂಡಿದ್ದರು. ಕಳೆದ ಬಾರಿ ಇದೇ ಕ್ಷೇತ್ರದಿಂದ ಕಾಂಗ್ರೆಸಿನಿಂದ ಸ್ಪರ್ಧಿಸಿ ಅಲ್ಪಮತದಲ್ಲಿ ಪರಾಭವಗೊಂಡಿದ್ದರು. ಈ ಬಾರಿಯೂ ಕಾಂಗ್ರೆಸ್ ಟಿಕೆಟ್ ಇವರಿಗೆ ದಕ್ಕಲಿದೆ. ಕಳೆದ ಬಾರಿಯ ಸೋಲಿನ ಅನುಕಂಪದ ಜೊತೆಗೆ ಶಾಸಕ ಸುರೇಶಗೌಡ ಪಾಟೀಲನ ಅಂದಾದರ್ಬಾರಿನಿಂದ ಬೇಸತ್ತಿರುವ ಜನ ಕಾಂಗ್ರೆಸ್‌ನತ್ತ ವಾಲುತ್ತಿದ್ದಾರೆ. ಅಲ್ಲದೆ, ಕುರುಬ ಸಮಾಜದ ಶಿವಣ್ಣವರಿಗೆ ಸ್ವಜಾತಿಯ 42 ಸಾವಿರ ಮತಗಳ ಜೊತೆಗೆ ಹಿಂದುಳಿದ ವರ್ಗಗಳ ಮತ್ತು ಲಿಂಗಾಯತ ಮತದಾರರು ಕೈಹಿಡಿಯುವ ಸಾಧ್ಯತೆಯಿದೆ. ಆದ್ದರಿಂದ ಬ್ಯಾಡಗಿಯಲ್ಲಿ ಕಾಂಗ್ರೆಸ್ ಬಾವುಟ ಹಾರಿದರೆ ಅಚ್ಚರಿ ಇಲ್ಲ.

● ಹುರಳಿಕುಪ್ಪಿ ವಿನಯ




ಎ.ಸಿ.ಶ್ರೀನಿವಾಸ್



ನಾಗಭೂಷಣ ರೆಡ್ಡಿ



ಮುನಿರತ್ನಂ ನಾಯ್ಡು



ಕುಪೇಂದ್ರ ರೆಡ್ಡಿ

ಕ್ರಿಮಿನಲ್‌ಸ್‌ಗಳಿಗೆ ಕಾಂಗ್ರೆಸ್ ಟಿಕೆಟ್

ಕಾಂಗ್ರೆಸ್ ಅಭ್ಯರ್ಥಿಗಳ ಪಟ್ಟಿಯ ಗಜ ಪ್ರಸವಕ್ಕೆ ಕ್ಷಣಗಣನೆ ಶುರುವಾಗಿ ಅದೆಷ್ಟೋ ಕಾಲವಾಗಿದೆ. ಕಾಂಗ್ರೆಸ್‌ನ ಘಟಾನುಘಟಿ ಪ್ರಸೂತಿ ತಜ್ಞರು ನೀಡಿರುವ 'ಡೇಟ್ಸ್'ಗಳು ಗೋಡೆಗೆಸೆದ ಚೆಂಡಿನಂತೆ ಬೌನ್ಸ್ ಆಗುತ್ತಿವೆ.

ಹೇಳಿಕೇಳಿ ಇದು ಸಿದ್ದರಾಮಯ್ಯ- ಪರಮೇಶ್ವರ್ ಅವರ ಜಂಟಿ ಬಸಿರು. ಹಾಗಾಗಿ ನ್ಯಾಚುರಲ್ ಡೆಲಿವರಿ ಕಷ್ಟ. ಇದು ಎಐಸಿಸಿಯ ಸೂಲಗಿತ್ತಿ ಸೋನಿಯಾ ಮೇಡಂರಿಗೂ ಗೊತ್ತು. ಹೀಗಾಗಿಯೇ ಅವರು ಸಿಸೇರಿಯನ್‌ಗೆ ಸಿದ್ಧರಾಗಿಯೇ ಸ್ವದೇಶಕ್ಕೆ ಮರಳಿದ್ದಾರೆ.

ಆದರೆ ಕತ್ತರಿ ಪ್ರಯೋಗಕ್ಕೆ ಒಳಗಾಗಿ ಈ ಗಜಗರ್ಭದಿಂದ ಹೊರಬರಲಿರುವ ಮರಿಗಳಲ್ಲಿ ಹೆಚ್ಚಿನವು 'ಕ್ರಿಮಿನಲ್' ಹಿನ್ನೆಲೆಯುಳ್ಳ ಕಾಳಸರ್ಪದ ಮರಿಗಳು! ಹಾಗಂತ ಈಗಾಗಲೇ ಬಹುತೇಕ ಬಹಿರಂಗವಾಗಿರುವ 'ಸ್ಕ್ಯಾನಿಂಗ್ ರಿಪೋರ್ಟ್' ಹೇಳುತ್ತಿದೆ.

ಅಮಾಯಕನೊಬ್ಬನ ಕೊಲೆ ಕೇಸೊಂದರಲ್ಲಿ ಎ2 ಆಗಿ ಸ್ವಲ್ಪದರಲ್ಲೇ ಬಚಾವಾದ 'ವಿಷಸರ್ಪ' ನಾಗಭೂಷಣ್ ರೆಡ್ಡಿ, ಲ್ಯಾಂಡ್ ಡೆವಲಪರ್ ಪೋಷಾಕಿನಲ್ಲಿ ಇದ್ದು ಸಹಸ್ರಾರು ಸಜ್ಜನರಿಗೆ ವಂಚಿಸಿದ ಗೋಮುಖ ವ್ಯಾಘ್ರ ಎ.ಸಿ.ಶ್ರೀನಿವಾಸ್, ಹೆಚ್ಚು ಲಾಭಕ್ಕಾಗಿ ಯುವತಿ ಸಂಜನಾಳ ಸಾವಿಗೆ ಕಾರಣರಾದ ಮುನಿರತ್ನ ಮುಂತಾದ ಹೊಸಮುಖಗಳು ಬೆಂಗಳೂರು ಹೊರವಲಯದ ಸಮೃದ್ಧ ಹುಲ್ಲುಗಾವಲನ್ನು ಮೇಯಲು ತಯಾರಾಗಿ ನಿಂತಿರುವುದು ಈ 'ಸ್ಕ್ಯಾನಿಂಗ್ ರಿಪೋರ್ಟ್'ನಲ್ಲಿ ಸ್ಪಷ್ಟವಾಗಿ ಗೋಚರಿಸುತ್ತಿದೆ.

2008ರ ಚುನಾವಣೆಯಲ್ಲಿ 140 ಜನ ಕ್ರಿಮಿನಲ್ ಹಿನ್ನೆಲೆಯುಳ್ಳವರು ಎಲ್ಲಾ ಪಕ್ಷಗಳಿಂದಲೂ ಸ್ಪರ್ಧಿಸಿದ್ದರು. ಇವರಲ್ಲಿ 42 ಮಂದಿ ವಿಧಾನಸಭೆಗೆ ಆಯ್ಕೆಯಾಗಿದ್ದರು. ಇವರಲ್ಲಿ 16 ಜನರು ಮೊದಲಬಾರಿಗೆ ಶಾಸಕರಾದವರು ಎಂಬುದು ಆಘಾತಕಾರಿ ಸಂಗತಿ. ಹೀಗೆ ನೂತನವಾಗಿ ಆಯ್ಕೆಯಾದ 16 ಜನರ ಮೇಲೆ ಒಂದಿಲ್ಲೊಂದು ಕೊಲೆ, ಕೊಲೆಯತ್ನ, ಫೋರ್ಜರಿ, ವಂಚನೆ ಮುಂತಾದ ಗಂಭೀರ ಆರೋಪಗಳೇ ಇದ್ದವು ಎಂಬುದನ್ನು ನಂಬಲರ್ಹ ಸಂಸ್ಥೆಗಳೇ ದೃಢೀಕರಿಸಿವೆ.

2013ರ ಈ ಚುನಾವಣೆಯಲ್ಲಿ ಕಾಂಗ್ರೆಸ್ ಟಿಕೆಟ್‌ಗಾಗಿ ಅತಿಹೆಚ್ಚು ಬೇಡಿಕೆ ಇರುವುದು ಬೆಂಗಳೂರಿನಲ್ಲಿ. ಬೆಂಗಳೂರು ನಗರ ಮತ್ತು ಗ್ರಾಮಾಂತರ ಸೇರಿದಂತೆ ಇರುವ 28 ಕ್ಷೇತ್ರಗಳ ಪೈಕಿ 10 ಕ್ಷೇತ್ರಗಳಲ್ಲಿ ಹಾಲಿ ಶಾಸಕರುಗಳಿಗೆ ಟಿಕೆಟ್ ನಿಕ್ಕಿಯಾಗಿದೆ. ಇನ್ನುಳಿದ 17 ಕ್ಷೇತ್ರಗಳಿಗೆ ಟಿಕೆಟ್ ಬಯಸಿರುವ ಕಾಂಗ್ರೆಸ್‌ನ ಪ್ರಬಲ ಆಕಾಂಕ್ಷಿಗಳ ಸಂಖ್ಯೆ 200ರಷ್ಟು. ಅದರಲ್ಲೂ ಬೆಂಗಳೂರು ಹೊರವಲಯದ ವಿಧಾನಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಟಿಕೆಟ್ಟಿಗೆ ಇರುವಷ್ಟು ಡಿಮ್ಯಾಂಡ್ ಬೆಂಗಳೂರು ಕೋರ್ ಸಿಟಿಯ ಅಸೆಂಬ್ಲಿ ಕ್ಷೇತ್ರಗಳಿಗೇ ಇಲ್ಲ!

ಬೊಮ್ಮನಹಳ್ಳಿ, ಕೆ.ಆರ್.ಪುರಂ, ಮಹಾದೇವಪುರ, ಬೆಂಗಳೂರು ದಕ್ಷಿಣ.. ಹೀಗೆ ಎಲ್ಲವೂ ನಿತ್ಯ ಹರಿದ್ವರ್ಣದ, ಸಮೃದ್ಧ ಹುಲ್ಲುಗಾವಲುಗಳೇ. ಹೊಸದಾಗಿ ಬಿಬಿಎಂಪಿ ವ್ಯಾಪ್ತಿಗೆ ಇವು ಬಂದಿರುವದರಿಂದ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ ಹಣದ ಹೊಳೆಯನ್ನೇ ಸರ್ಕಾರ ಹರಿಸುತ್ತಿದೆ. ಒಂದು ಸಣ್ಣ ಉದಾಹರಣೆಯನ್ನೇ ಕೊಡುವುದಾದರೆ ಈ ಕ್ಷೇತ್ರಗಳಿಗೆ ಸರಾಸರಿ ಸಾವಿರ ಕೋಟಿ ರೂಪಾಯಿ ಮಂಜೂರಾಗಿದೆ. ಈ ಕ್ಷೇತ್ರಗಳ ಶಾಸಕರು ಲಂಚದ ಬೆನ್ನಿಗೆ ಬೀಳೋದು ಬೇಡ, ಬರೋದಿದ್ದರೇ ತನ್ನಷ್ಟಕ್ಕೆ ಬರಲಿ ಎಂದು ತೆಪ್ಪಗೆ ಕೂತರೂ ಸಾಕು ಕಾಲಬುಡಕ್ಕೆ ಹಣದ ಹೊಳೆಯೇ ಹರಿದುಬರುತ್ತದೆ. ಇನ್ನು ಈ ಕ್ಷೇತ್ರಗಳಲ್ಲಿ ಲಭ್ಯವಿರುವ ವಿಸ್ತಾರವಾದ ನಿರ್ಮಾಣಯೋಗ್ಯ ಭೂಮಿಯಂತೂ ಅಕ್ಷರಶಃ ಶಾಸಕರಿಗೆ ಸಮೃದ್ಧ ಹುಲ್ಲುಗಾವಲುಗಳು. ಕಣ್ಣು ಹಾಯಿಸಿದಷ್ಟು ಉದ್ದಕ್ಕೂ ಬಿಲ್ಡರ್‌ಗಳ ಅಮೇಧ್ಯದ ರಾಶಿಯೇ ಕಣ್ಣಿಗೆ ರಾಚುತ್ತೆ. ಅಪಾರ್ಟ್‌ಮೆಂಟ್ ಎದ್ದರೂ ದುಡ್ಡು! ಬಿದ್ದರಂತೂ ಬಂಪರ್ ದುಡ್ಡು. ಹೀಗಾಗಿಯೇ ರಿಯಲ್ ಎಸ್ಟೇಟ್ ವಂಚಕರು, ಭೂಗಳ್ಳರು, ಕೊಲೆಪಾತಕರು ತಮ್ಮ ಪಾಪದ ಸಂಪಾದನೆಯನ್ನು ಇಲ್ಲಿ 'ಇನ್‌ವೆಸ್ಟ್' ಮಾಡಲು ತುದಿಗಾಲಲ್ಲಿ ನಿಂತಿದ್ದಾರೆ. ಟಿಕೆಟ್ ಸಿಗೋದೊಂದೇ ಬಾಕಿ. ಸಿಕ್ಕ ನಂತರ ಆಯ್ಕೆಯಾಗಿಯೂ ಬಂದುಬಿಟ್ಟರೆ, ಕೆಂಗಲ್ ಹನುಮಂತಯ್ಯನ ವಿಧಾನಸೌಧ ಬೆಂಗಳೂರನ್ನೇ ಈ ಬಿಲ್ಡರ್‌ಗಳಿಗೆ ಜೆಪಿಎ ಮಾಡಿಸಿಕೊಟ್ಟು ಬಿಡುತ್ತಾರೇನೊ. ಇಂತಹ ಕಳ್ಳ ಖದೀಮರ ಬಗ್ಗೆ ಜನ ಎಚ್ಚರ ವಹಿಸಲಿ ಎಂಬ ಸದುದ್ದೇಶದಿಂದ ದಾಖಲೆಗಳು ಲಭ್ಯವಿರುವ ಕ್ರಿಮಿನಲ್ ಹಿನ್ನೆಲೆಯುಳ್ಳವರ ಬಗ್ಗೆ ಮಾತ್ರ ಇಲ್ಲಿ ಉಲ್ಲೇಖಿಸುತ್ತಿದ್ದೇವೆ.

ಬೆಂಗಳೂರಿನ ಅಸಲಿ ಸಾಫ್ಟ್‌ವೇರ್ ಹಬ್‌ಗಳ ಪೈಕಿ ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರವೂ ಒಂದು. ಐಟಿ-ಬಿಟಿ ಕಂಪನಿಗಳು, ಸಣ್ಣ ಕೈಗಾರಿಕೆಗಳು ಇರುವ ಈ ಕ್ಷೇತ್ರ ರಾಜಕಾರಣಿಗಳ ಪಾಲಿಗೆ ಫೇವರಿಟ್. ಇದರ ಮೇಲೆ ಕಣ್ಣಿಟ್ಟಿರುವ ಪ್ರಬಲ ಆಕಾಂಕ್ಷಿಯ ಹೆಸರು ನಾಗಭೂಷಣ ರೆಡ್ಡಿ.

ಯಾರೀ ನಾಗಭೂಷಣ ರೆಡ್ಡಿ ಎಂದು ಹುಡುಕುತ್ತಾ ಹೊರಟರೆ ದಂಗಾಗಿ ಬಿಡುತ್ತೀರಿ. ಯಾವುದೇ ಪೊಲಿಟಿಕಲ್ ಬ್ಯಾಕ್‌ಗ್ರೌಂಡ್ ಇಲ್ಲದ ಖಾಲಿ ಪುಢಾರಿ ಈತ. ಯಾವುದೇ ಸಣ್ಣ ಎಲೆಕ್ಷನ್‌ನಲ್ಲೂ ಸ್ಪರ್ಧಿಸಿದ ಇತಿಹಾಸವಿಲ್ಲ.


ಬೊಮ್ಮನಹಳ್ಳಿಯ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅನ್ನೋದೇ ಈತನ ಒನ್‌ಲೀ ಮೆರಿಟ್. ಜತೆಗೆ ಕುಬೇರ ಕಂಟ್ರಾಕ್ಟರ್ ಒಬ್ಬರ ಕೃಪಾಶೀರ್ವಾದ ಈತನಿಗೆ ಹೆಡ್‌ಆನ್ ಅಡ್ವಾಂಟೇಜ್. ಇಂತಹ ಬುಡಭದ್ರವಿಲ್ಲದ ನಾಗಭೂಷಣ್ ರೆಡ್ಡಿಗೆ ನಂಬಲರ್ಹ ಮೂಲದ ಪ್ರಕಾರ ಕಾಂಗ್ರೆಸ್ ಟಿಕೆಟ್ ಖಚಿತ ಆಗಿದೆ.

ಅಸಲಿಗೆ ಇಂತಹ ಪ್ರಮುಖ ಕ್ಷೇತ್ರವನ್ನು ನಾಗಭೂಷಣನಿಗೆ ದಯಪಾಲಿಸಲು ಇರುವ ಅರ್ಹತೆಯಾದರೂ ಏನು ಎಂಬುದನ್ನು ತಿಳಿಯಬೇಕಾದರೆ 2008 ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ಫಲಿತಾಂಶವನ್ನೊಮ್ಮೆ ಅವಲೋಕಿಸಬೇಕು. ಅಂದಿನ ಚುನಾವಣೆಯಲ್ಲಿ ಇಂದಿನ ಹಾಲಿ ಶಾಸಕ ಸತೀಶ್ ರೆಡ್ಡಿಯವರ ಗೆಲುವಿನಲ್ಲಿ ಪ್ರಮುಖ ಪಾತ್ರವಹಿಸಿದ್ದು ಹೊಂಗಸಂದ್ರ ಹೋಬಳಿ. ಅಲ್ಲಿ ಚಲಾವಣೆಯಾದ ಒಟ್ಟು ಮತಗಳ ಸಂಖ್ಯೆ ಸುಮಾರು ಹದಿನಾಲ್ಕು ಸಾವಿರ. ಇವುಗಳ ಪೈಕಿ ಶಾಸಕ ಸತೀಶ್ ರೆಡ್ಡಿ ಗಳಿಸಿದ್ದು 12 ಸಾವಿರ. ಸತೀಶ್ ರೆಡ್ಡಿಗೆ ದೊರೆತ ಲೀಡಿಂಗ್‌ನಲ್ಲಿ ಮೂರರ ಎರಡರಷ್ಟು ಅಧಿಕ ಮತ ಸಿಕ್ಕಿದ್ದೇ ಈ ಹೊಂಗಸಂದ್ರದಿಂದ. ಇದರರ್ಥ ಹೊಂಗಸಂದ್ರದಲ್ಲಿ ಸತೀಶ್ ರೆಡ್ಡಿಯ ಮುನ್ನಡೆಗೆ ಬ್ರೇಕ್ ಹಾಕಿದರೆ ಗೆಲುವು ಸಾಧಿಸಬಹುದು. ಇದು ಇಲ್ಲಿಯ ಸ್ಥಳೀಯ ನಾಯಕರ ಲೆಕ್ಕಾಚಾರ. ಆಗಲೇ ಧುತ್ತೆಂದು ಉದ್ಭವನಾದವನು ಈ ನಾಗಭೂಷಣ ರೆಡ್ಡಿ.

ಹತ್ಯೆಯ ಸೂತ್ರಧಾರ

ಕೃಷ್ಣ ಎಂಬುವವನು ಒಬ್ಬ ವಿಡಿಯೋಗ್ರಾಫರ್. 'ಬೊಮ್ಮನಹಳ್ಳಿಯಲ್ಲೊಂದು ಕಾರ್ಯಕ್ರಮವಿದೆ. ಅದನ್ನು ಶೂಟ್ ಮಾಡ್ಬೇಕು. ವಿಡಿಯೋ ಕ್ಯಾಮರಾವನ್ನು ತಗೊಂಡು ಬಾ' ಎಂದು ನಾಗಭೂಷಣ ರೆಡ್ಡಿ 250 ರೂಪಾಯಿ ಮುಂಗಡ ಕೊಟ್ಟು ಬುಕ್ಕಿಂಗ್ ಮಾಡಿದ್ದ. ದಿನದ ದುಡಿಮೆಯನ್ನೇ ನಂಬಿ ಬದುಕುತ್ತಿದ್ದ ಬಡಪಾಯಿ ಕೃಷ್ಣ ಶೂಟಿಂಗ್‌ಗೇನೊ ತನ್ನ ಸಹಚರನೊಂದಿಗೆ ಬಂದ. ಹೀಗೆ ಬಂದವನು ಬರ್ಬರವಾಗಿ ಕೊಲೆಯಾಗಿ ಹೋದ. ಮಡಿವಾಳ ಪೊಲೀಸರು ತನಿಖೆ ನಡೆಸಿ ಜಗದೀಶ್ ಎಂಬ ವ್ಯಕ್ತಿಯು ಜತೆಸೇರಿ ನಾಗಭೂಷಣ್ ರೆಡ್ಡಿಯೇ ಕೊಲೆಮಾಡಿದ್ದಾನೆ ಎಂದು ಎಫ್‌ಐಆರ್ ದಾಖಲಿಸಿ ಚಾರ್ಜ್‌ಶೀಟ್ ಕೂಡಾ ಸಲ್ಲಿಸಿದರು. ಪ್ರಕರಣದಲ್ಲಿ ಎ2 ಆಗಿದ್ದ ನಾಗಭೂಷಣ್ ರೆಡ್ಡಿಯೇನೊ ಬಂಧಿತನಾದ. ಆದರೆ ಎ1 ಜಗದೀಶ್ ಮಾತ್ರ ಪ್ರಕರಣದ ನಂತರ ಯಾರ ಕಣ್ಣಿಗೂ ಬೀಳಲಿಲ್ಲ, ಪೊಲೀಸರಿಂದಲೂ ಅವನನ್ನು ಬಂಧಿಸಲಾಗಲಿಲ್ಲ. ಪ್ರಕರಣದ ವಿಚಾರಣೆ ದೀರ್ಘಕಾಲ ನಡೆದು ಸಾಕ್ಷ್ಯಾಧಾರಗಳ ಕೊರತೆಯಿಂದಾಗಿ ನಾಗಭೂಷಣ್ ರೆಡ್ಡಿ ಖುಲಾಸೆಯಾದ. ಆದರೆ ಅಂದಿನಿಂದ ಇಂದಿನವರೆವಿಗೂ ಎ1 ಜಗದೀಶ್ ನಾಪತ್ತೆಯಾಗಿದ್ದಾನೆ. ಆತ ಪೊಲೀಸರಿಗೆ ಸಿಕ್ಕರೆ ತನ್ನ ಬಂಡವಾಳ ಬಯಲಾಗಬಹುದೆಂಬ ಭಯದಿಂದ ನಾಗಭೂಷಣ್ ರೆಡ್ಡಿಯೇ ಆತನನ್ನು ಕೊಂದಿರಬಹುದು ಎನ್ನುತ್ತಾರೆ ಜಗದೀಶನ ಸಂಬಂಧಿಗಳು.

ಕೇವಲ ಎಸ್‌ಎಸ್‌ಎಲ್‌ಸಿತನಕ ಓದಿರುವ ನಾಗಭೂಷಣ ರೆಡ್ಡಿ ಹೊಂಗಸಂದ್ರದ ಸಾಧಾರಣ ಕುಟುಂಬದಿಂದ ಬಂದವನು. ಇಂತಹ ವ್ಯಕ್ತಿ ಇಂದು ನೂರಾರು ಕೋಟಿಗೆ ತೂಗುತ್ತಾನೆ. ಇದು ಸಕ್ರಮ ಸಂಪಾದನೆಯೆ ಎಂದು ಕೆದುಕುತ್ತಾ ಹೋದರೆ ಮತ್ತೊಂದು ವಂಚನೆಯ ಪುರಾಣ ಬಯಲಾಗುತ್ತೆ. ಈ ನಾಗಭೂಷಣ ರೆಡ್ಡಿ ತನ್ನ ಸ್ವಂತ ಊರಾದ ಹೊಂಗಸಂದ್ರದಲ್ಲಿ ಪದ್ಮಿನಿವಲ್ಲಭ ಚಿಟ್ ಫಂಡ್ಸ್ ಎಂಬ ಬ್ಲೇಡ್ ಕಂಪನಿಯನ್ನು ಪ್ರಾರಂಭಿಸಿದ್ದ. ಸುತ್ತಮುತ್ತಲಿನ ಕಾರ್ಖಾನೆಗಳ ಬಡಪಾಯಿ ನೌಕರರು ಮತ್ತು ಗಾರ್ಮೆಂಟ್ಸ್ ಮಹಿಳೆಯರಿಗೆ ಹಲವಾರು ಸ್ಕೀಮ್‌ಗಳನ್ನು ತೋರಿಸಿ, ಸುಮಾರು ನಾಲ್ಕೂವರೆ ಕೋಟಿ ರೂಪಾಯಿ ಕಲೆಕ್ಟ್ ಮಾಡಿದ್ದ. ಅದೊಂದು ದಿನ ಕೈ ಎತ್ತಿದ ಈ ನಾಗಭೂಷಣ ರೆಡ್ಡಿ ತನ್ನ ರೌಡಿ ಪಟಾಲಂನ ನೆರವಿನಿಂದ ಜನರ ಬಾಯಿ ಮುಚ್ಚಿಸಿದ್ದ. ಪರಸ್ಥಳದಿಂದ ಬಂದಿದ್ದ ನೂರಾರು ಜನರು ಸ್ಥಳೀಯರಾದ ನಾಗಭೂಷಣ ರೆಡ್ಡಿ ವಿರುದ್ಧ ದನಿ ಎತ್ತದಾದರು. ಹೀಗೆ ಬಡಪಾಯಿಗಳ ಬಾಯಿಬಡಿದ ಹಣದಿಂದಲೇ ವಿವಾದಿತ ಜಾಗಗಳನ್ನು ಖರೀದಿಸಿದ.




SRI A.C. SRINIVAS, [redacted]
KPCC MEMBER,
NO.90, CHOKKANAHALLI,
JAKKUR POST, YELAHANKA HOBLI,
BANGALORE - 64

98451-23673/32955041

CC 5641/06

ಎ.ಸಿ.ಶ್ರೀನಿವಾಸ್ ವಿರುದ್ಧ ಕೋರ್ಟ್ ಹೊರಡಿಸಿರುವ ಸಮನ್ಸ್



CR 46004/..

PR 9/87

SC 37/91

ನಾಗಭೂಷಣ್ ವಿರುದ್ಧದ ಚಾರ್ಜ್‌ಶೀಟ್

⏭ 7

...ವಣಬೆಳಗೊಳ: ಪುಟ್ಟೇಗೌಡರ ಕಾಂಗ್ರೆಸ್ ಪ್ರವೇಶವೂ ...ೋಪಾಲಸ್ವಾಮಿ ಬೆಂಬಲಿಗರ ಆಕ್ರೋಶವೂ!

...ಾಲೀ ಶಾಸಕನೇ ಜೆಡಿಎಸ್ ತೊರೆದು ಕಾಂಗ್ರೆಸ್ಸಿಗೆ ...ಬ್ಬಾಗಲೂ ಶ್ರವಣಬೆಳಗೊಳ ಕ್ಷೇತ್ರದ ಸಹಸ್ರಾರು ... ಕಾರ್ಯಕರ್ತರೇಕೆ ಬೀದಿಗಿಳಿದು ಎದೆಬಡಿದು ...ತ್ತಾರೆ?

...ರಾಯಪಟ್ಟಣ ಯಾನೇ ಶ್ರವಣಬೆಳಗೊಳದ ಹಾಲೀ ... ಶಾಸಕ ಸಿ.ಎಸ್. ಪುಟ್ಟೇಗೌಡ ದೇವೇಗೌಡರ ...ತಿರುಗಿ ಬಿದ್ದು ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ ...ಾಲಿಗೆ ಬಿದ್ದು ಇನ್ನೇನು ಟಿಕೆಟ್ ಗಿಟ್ಟಿಸುತ್ತಾರೆನ್ನು... ಅವರದೇ ಕ್ಷೇತ್ರದ ಏಳು ಸಾವಿರ ಮಂದಿ ... ಬೆಂಬಲಿಗರು ಬೆಂಗಳೂರಿನ ಕೆಪಿಸಿಸಿ ಕಚೇರಿಗೆ ...ಟ್ಟಿರು. ಆ ಕಾಲದಿಂದಲೂ ಕ್ಷೇತ್ರದಲ್ಲಿ ಕಾಂಗ್ರೆಸ್ ...ಬೆಳೆಸಿದ ಎಂ.ಎ. ಗೋಪಾಲಸ್ವಾಮಿ ಎಂಬ ...ನನ್ನು ವಂಚಿಸಿ ಪುಟ್ಟೇಗೌಡರಿಗೇನಾದರೂ ಟಿಕೆಟ್ ...ಟ್ಟರೆ ಆದರೆ 'ನಾವೆಲ್ಲ ಸಾಮೂಹಿಕ ಆತ್ಮಹತ್ಯೆ ...ಕೊಳ್ತೀವಿ..!' ಎಂದು ನಾಯಕರೆದುರು ...ಯಿಟ್ಟರು. ಈ ಪೈಕಿ ಒಬ್ಬ ಕಾಂಗ್ರೆಸ್ ಕಾರ್ಯಕರ್ತನಂತೂ ...ಲೆ ಸೀಮೆಎಣ್ಣೆ ಸುರಿದುಕೊಂಡು ಕಡ್ಡಿಗೀರಲೆತ್ನಿಸಿದ್ದ!


...ವಣಬೆಳಗೊಳ ಕ್ಷೇತ್ರದ ನಿಷ್ಠಾವಂತ ಕಾಂಗ್ರೆಸ್ ...ರ್ತರ ಬೇಗುದಿ, ಆಕ್ರೋಶ, ಆವೇಶ ಮತ್ತು ...ನಕ್ಕೂ ಕಾರಣವಿದೆ. ನಿನ್ನೆಮೊನ್ನೆಯ ತನಕ ಜೆಡಿಎಸ್‌ನ ...ದರಾಕ್ರಮಿಯೆಂಬಂತೆ ಚನ್ನರಾಯಪಟ್ಟಣದ ಕಾಂಗ್ರೆಸ್ ...ರ್ತರನ್ನು ದಮನಿಸುತ್ತಲೇ ಬಂದದ್ದು ಇದೇ ...ಗೌಡ.


...ಮ್ಮ ಶಾಸಕತ್ವದ ಅವಧಿಯುದ್ದಕ್ಕೂ ಚನ್ನರಾಯ ...ದ ಕಾಂಗ್ರೆಸ್ ಕಾರ್ಯಕರ್ತರನ್ನು ಗೋಳಾಡಿಸಿಕೊಂಡೇ ... ಪುಟ್ಟೇಗೌಡರ ದಮನ ದಬ್ಬಾಳಿಕೆಯ ವಿರುದ್ಧ ...ಯುಂತೆ ನಿಂತು ಕಾಂಗ್ರೆಸ್ ಕಟ್ಟಿದ್ದು ಹಿರಿಸಾವೆ ಬ್ಲಾಕ್ ...ಸ್ ಅಧ್ಯಕ್ಷ ಎಂ.ಎ. ಗೋಪಾಲಸ್ವಾಮಿ!

...ೊದಲು ಶ್ರೀಕಂಠಯ್ಯ, ಆನಂತರ ಮಗ ...ಮಾರ್, ಚನ್ನರಾಯ ಪಟ್ಟಣದ ಕಾಂಗ್ರೆಸ್ ಅಧಿಪತ್ಯಕ್ಕೆ ...ಾದರೂ ಜೆಡಿಎಸ್‌ನ ಅಬ್ಬರ ಮತ್ತು ಮಣ್ಣಿನ ಮಗ ...ಡಿ. ರೇವಣ್ಣನ ಆರ್ಭಟದೆದುರು ಕಾಂಗ್ರೆಸ್ ...ಯಾಗಲೇ ಇಲ್ಲ, ಸತತವಾಗಿ ಪುಟ್ಟೇಗೌಡರೇ ಗೆಲ್ಲುತ್ತಾ ...ರು. ದೇವೇಗೌಡರ ಫೋಟೋ ಹಾಕಿಕೊಂಡೇ ...ಸ್ ಶಾಸಕರಾಗಿ ಗೆಲ್ಲುತ್ತಾ ಬಂದ ಪುಟ್ಟೇಗೌಡರ ...ಸ್ ದ್ವೇಷ ಒಂದೆಡೆಯಾದರೆ ಮತ್ತೊಂದೆಡೆ ...ಡಿಸಿಸಿ ಬ್ಯಾಂಕ್ ಅಧ್ಯಕ್ಷ ಮತ್ತು ದೇವೇಗೌಡರ ಖಾಸಾ ...ು ಡಾ. ಸಿ.ಎನ್. ಮಂಜುನಾಥ್‌ರ ತಮ್ಮ ಸಿ.ಎನ್. ...ಕೃಷ್ಣರ ರೋಷಾವೇಷಕ್ಕೆ ಸಿಲುಕಿ ಇನ್ನೇನು ಕಾಂಗ್ರೆಸ್ ...ಬೆಳಗೊಳದ ಮಟ್ಟಿಗೆ ನಿರ್ನಾಮವಾಗೇ ಹೋಯಿತು ...ಂಥ ಪರಿಸ್ಥಿತಿಯಲ್ಲಿ ಕ್ಷೇತ್ರದ ಕಾಂಗ್ರೆಸ್ ಸಾರಥ್ಯ ...ದ್ದು ಗೋಪಾಲಸ್ವಾಮಿ.

...ಬೆಂಗಳೂರಿನಲ್ಲಿದ್ದ ಹೆಚ್‌ಎಎಲ್ ಉದ್ಯೋಗವನ್ನೇ ...ಮು ಚನ್ನರಾಯಪಟ್ಟಣದ ಕಾಂಗ್ರೆಸ್ ಕಾಯಕಕ್ಕೆ ನಿಂತ ...ಪಾಲಸ್ವಾಮಿಯ ಪ್ರವೇಶದಿಂದಾಗಿ ಹೆಚ್ಚೂ ಕಮ್ಮಿ ...ಟ್ಟಿದ್ದ ಕಾಂಗ್ರೆಸ್ಸಿಗೆ ಜೀವಕಳೆ ಬಂತು. ಆ ಕಾಲದಿಂದಲೂ ...ಸ್ ಫಲಾಫಲಗಳನ್ನೆಲ್ಲ ಅನುಭವಿಸಿಕೊಂಡೇ ಬಂದಿದ್ದ ...ಠಯ್ಯ ಬೇರೆ ಕಾಂಗ್ರೆಸ್ ತೊರೆದು ಬಿಜೆಪಿ ಹೊಕ್ಕ ...ಬಂತೂ ಅಕ್ಷರಶಃ ಅನಾಥವಾಗಿದ್ದ ಕಾಂಗ್ರೆಸ್ಸಿಗೆ ...ಪಾಲಸ್ವಾಮಿಯೇ ಹುಲ್ಲುಕಡ್ಡಿಯ ಆಸರೆಯಾದರು.

ಶ್ರವಣಬೆಳಗೊಳದಲ್ಲಿ ಒಬ್ಬೇ ಒಬ್ಬ ಕಾಂಗ್ರೆಸ್ ಜಿಲ್ಲಾ ...ಾಯ್ತಿ ಸದಸ್ಯನಿರಲಿಲ್ಲ, ಇಂಥಾ ಸ್ಥಿತಿಯಲ್ಲಿ ನುಗ್ಗೇಹಳ್ಳಿ





ಹೆಚ್.ಡಿ. ರೇವಣ್ಣ ಶಾಸಕ ಪುಟ್ಟೇಗೌಡ ಗೋಪಾಲಸ್ವಾಮಿ


ಜಿ.ಪಂ. ಕ್ಷೇತ್ರದಿಂದ ತನ್ನ ತಮ್ಮ ರಂಗಸ್ವಾಮಿಯನ್ನೂ, ಶ್ರವಣಬೆಳಗೊಳ ಜಿ.ಪಂ.ಗೆ ನಂಜುಂಡಪ್ಪ ಎಂಬ ಸ್ಥಳೀಯ ನಾಯಕನನ್ನೂ ನಿಲ್ಲಿಸಿ ಗೆಲ್ಲಿಸಿ ಕೊಟ್ಟಿದ್ದು ಗೋಪಾಲ ಸ್ವಾಮಿಯೇ.

ರೈತರು ಕಟ್ಟಿ ಬೆಳೆಸಿದ ಹೇಮಾವತಿ ಸಕ್ಕರೆ ಕಾರ್ಖಾನೆಯನ್ನು ತಮಿಳುನಾಡಿನ ಚಾಂಶುಗರ್ ಧಣಿ ಶ್ರೀನಿವಾಸನ ಖಾಸಗಿ ಆಸ್ತಿಯನ್ನಾಗಿಸುವಲ್ಲಿ ದೇವೇಗೌಡರ ಕುಟುಂಬದ ಹಿತಾಸಕ್ತಿಯೇ ಅಧಿಕವಾಗಿತ್ತೆಂಬುದನ್ನು ಪತ್ತೆ ಹಚ್ಚಿ ಗೋಪಾಲಸ್ವಾಮಿ ಬೀದಿಗಿಳಿದರು. ಸಾವಿರಾರು ರೈತರನ್ನು ಕಟ್ಟಿಕೊಂಡು ಸಕ್ಕರೆ ಕಾರ್ಖಾನೆಯನ್ನು ಉಳಿಸಲು ಗೋಪಾಲಸ್ವಾಮಿ ನಡೆಸಿದ ಹೋರಾಟದಿಂದಾಗಿ ಅವರೇ ಕಾರ್ಖಾನೆಯ ಕಾರ್ಮಿಕರ ನಾಯಕರಾದರು. ನುಗ್ಗೇಹಳ್ಳಿ ಕುಡಿಯುವ ನೀರಿನ ಯೋಜನೆಗೆ ಬಿಜೆಪಿ ಸರ್ಕಾರ 22 ಕೋಟಿ ರೂಪಾಯಿಗಳನ್ನು ಮಂಜೂರು ಮಾಡುವುದಕ್ಕೂ ಗೋಪಾಲಸ್ವಾಮಿಯ ಹೋರಾಟ ಕಾರಣವಾಗಿತ್ತು.

ಹಿರಿಸಾವೆ ಬ್ಲಾಕ್ ಕಾಂಗ್ರೆಸ್ಸಿಗೆ ಗೋಪಾಲಸ್ವಾಮಿ ಅಧ್ಯಕ್ಷರಾದ ಮೇಲಂತೂ ದಿಡಗಾ, ಜನ್ನೇನಹಳ್ಳಿ, ಬಾಳಗಂಚಿ, ಬ್ಯಾಡರಹಳ್ಳಿಯಂಥ ಗ್ರಾಮಗಳಲ್ಲಿ ಕಾಂಗ್ರೆಸ್ ಗಿಟ್ಟಿಸುತ್ತಿದ್ದ ಶೇ. 15ರಷ್ಟು ಮತಗಳ ಪ್ರಮಾಣ ಏಕಾಏಕಿ ಶೇ. 35ರಿಂದ ನಲವತ್ತಕ್ಕೇರಿತು. ಶ್ರೀಕಂಠಯ್ಯ ಬದುಕಿದ್ದಾಗಲೇ ನುಗ್ಗೇಹಳ್ಳಿ, ಜಂಬೂರು, ಅಕ್ಕನಹಳ್ಳಿ ಕ್ರಾಸ್‌ನಂಥ ಗ್ರಾಮ ಪಂಚಾಯ್ತಿಗಳಲ್ಲಿ ಶೇ. 20ರಷ್ಟು ಓಟು ಗಿಟ್ಟಿಸುವುದಕ್ಕೇ ಸುಸ್ತು ಹೊಡೆಯುತ್ತಿದ್ದ ಕಾಂಗ್ರೆಸ್ಸಿಗೆ ಗೋಪಾಲಸ್ವಾಮಿ ಯಿಂದಾಗಿ ಶೇ. 80ರಷ್ಟು ಓಟು ಬರಲಾರಂಭಿಸಿತು. ಬಾಗೂರು ಹೋಬಳಿಯ ಆಣತಿ, ನವಿಲೆ, ಕೆಂಬಾಲು, ಕಾರೇಹಳ್ಳಿಗಳಲ್ಲಿ ಶೇ. 10ರಷ್ಟೂ ಮತ ಬೀಳುತ್ತಿರಲಿಲ್ಲ ಎಂಬಂಥ ಸ್ಥಿತಿಯನ್ನು ಗೋಪಾಲ್ ಶೇ.40ಕ್ಕೇರಿಸಿದ್ದರು. ಶ್ರವಣಬೆಳಗೊಳದ ಜುಟ್ಟನಹಳ್ಳಿ, ಸುಂಡಳ್ಳಿ, ದಕ್ಕ, ದಮ್ಮನಿಂಗಲಗಳಲ್ಲಿ ಶೇ.90ರಷ್ಟಿದ್ದ ಜೆಡಿಎಸ್ ಪ್ರಾಬಲ್ಯವನ್ನು ಶೇ.50ಕ್ಕಿಳಿಸಿದ್ದು ಕೂಡ ಗೋಪಾಲಸ್ವಾಮಿಯ ಪರಿಶ್ರಮದ ಫಲವಾಗಿತ್ತು.

ಒಂದೆಡೆ ನೆಲಕಚ್ಚಿದ್ದ ಕಾಂಗ್ರೆಸ್ಸಿಗೆ ಗೋಪಾಲಸ್ವಾಮಿ ಶಕ್ತಿ ತುಂಬತೊಡಗಿದ್ದರೆ ಮತ್ತೊಂದೆಡೆ ಜೆಡಿಎಸ್ ಶಾಸಕ ಪುಟ್ಟೇಗೌಡರ ದೌರ್ಜನ್ಯವೂ ಇಮ್ಮಡಿಗೊಂಡಿತ್ತು. ಮುಂಬರುವ ಚುನಾವಣೆಯಲ್ಲಿ ಇನ್ನೇನು ಗೋಪಾಲ ಸ್ವಾಮಿಯೇ ಗೆದ್ದು ಶ್ರವಣಬೆಳಗೊಳದಲ್ಲಿ ಕಾಂಗ್ರೆಸ್ ಬಾವುಟ ಹಾರಿಸುತ್ತಾರೆಂಬ ವಾತಾವರಣದಲ್ಲೇ ಜೆಡಿಎಸ್ ಅಂತಃಕಲಹವೂ ಭುಗಿಲೆದ್ದಿತ್ತು. ಇಲ್ಲಿಗೆ ಬರೋಬ್ಬರಿ ಐದು ವರ್ಷದ ಹಿಂದೆ ಪದ್ಮನಾಭನಗರದ ದೇವೇಗೌಡರ ಮನೆ ಮುಂದೆ ನೆರೆದಿದ್ದ ಮೂರು ಸಾವಿರಕ್ಕೂ ಅಧಿಕ ಚನ್ನರಾಯಪಟ್ಟಣದ ಜೆಡಿಎಸ್ ಕಾರ್ಯಕರ್ತರ ಮುಂದೆ ದೇವೇಗೌಡರ ಮೇಲೆ ಆಣೆ ಹಾಕಿಯೇ ಪುಟ್ಟೇಗೌಡರು ಪ್ರಮಾಣ ಮಾಡಿದ್ದರು.

ಮುಂದಿನ ಸಾರಿ ಶ್ರವಣಬೆಳಗೊಳವನ್ನು ದೇವೇಗೌಡರ ಅಳಿಯ ಡಾ. ಮಂಜುನಾಥ್‌ರ ತಮ್ಮ ಎನ್. ಬಾಲಕೃಷ್ಣರಿಗೆ ಬಿಟ್ಟುಕೊಡುತ್ತೇನೆಂದೂ, ತಾನು ಬಾಲಕೃಷ್ಣರ ಪರ ನಿಂತು ಪ್ರಚಾರ ಮಾಡುತ್ತೇನೆಂದೂ, ಯಾವುದೇ ಪರಿಸ್ಥಿತಿಯಲ್ಲೂ ಜೆಡಿಎಸ್ ತೊರೆಯುವುದಿಲ್ಲವೆಂದೂ ಮತ್ತು ಜೀವನ ಪರ್ಯಂತ ದೇವೇಗೌಡರಿಗೇ ನಿಷ್ಠನಾಗಿರುತ್ತೇನೆಂದು ಆವತ್ತು ಪುಟ್ಟೇಗೌಡರು ಮಾಡಿದ ಪ್ರಮಾಣ ಈಗ ಮರೆತೇ ಹೋಗಿತ್ತು!



ಕಾಂಗ್ರೆಸ್ ಕಚೇರಿ ಮುಂದೆ ಪ್ರತಿಭಟಿಸುತ್ತಿರುವ ಗೋಪಾಲಸ್ವಾಮಿ

ಕಾರಣವಿಷ್ಟೆ, ಒಮ್ಮೆ ಶ್ರವಣಬೆಳಗೊಳವನ್ನು ಬಾಲಕೃಷ್ಣರಿಗೆ ಬಿಟ್ಟುಕೊಟ್ಟೆನೆಂದರೆ ಮತ್ತೆಂದೂ ತಾನು ಶಾಸಕನಾಗುವುದು ಸಾಧ್ಯವಿಲ್ಲವೆಂಬ ಕಟುವಾಸ್ತವ ಪುಟ್ಟೇಗೌಡರಿಗೆ ಚೆನ್ನಾಗಿ ಮನದಟ್ಟಾಗಿತ್ತು. ಚುನಾವಣೆ ಸಮೀಪಿಸುತ್ತಿದ್ದಂತೆ ಬಾಲಕೃಷ್ಣರ ಪ್ರಭಾವ ಹೆಚ್ಚಾಯಿತು. ಆವತ್ತು ಪದ್ಮನಾಭನಗರದಲ್ಲಿ ದೇವೇಗೌಡರನ್ನು ಮುಂದಿಟ್ಟುಕೊಂಡೇ ಪುಟ್ಟೇಗೌಡರು ಮಾಡಿದ ಪ್ರಮಾಣವನ್ನು ನೆನಪಿಸಿದ ಹೆಚ್.ಡಿ. ರೇವಣ್ಣ ಮಾತಿನಂತೆ ಈ ಸಾರಿ ಬಾಲಕೃಷ್ಣರಿಗೆ ಕ್ಷೇತ್ರ ಬಿಟ್ಟುಕೊಡುವಂತೆ ನಿಷ್ಠುರವಾಗಿ ಹೇಳಿಬಿಟ್ಟರು. ಇಷ್ಟು ಕಾಲ ಶಾಸಕನಾಗಿದ್ದು ಅಧಿಕಾರದ ರುಚಿ ಕಂಡಿದ್ದ ಪುಟ್ಟೇಗೌಡರಿಗೆ ಯಾವ ಆಣೆ ಯಾವ ಪ್ರಮಾಣ ತಾನೇ ನೆನಪಾಗಲು ಸಾಧ್ಯ?

ಪುಟ್ಟೇಗೌಡರ ಪಾಲಿಗೆ ಕಾಂಗ್ರೆಸ್ ಬಿಟ್ಟರೆ ಬೇರೆ ಗತಿಯೇ ಇರಲಿಲ್ಲ. ಕಾಂಗ್ರೆಸ್ಸಿಗೆ ಸೇರುವ ಮುನ್ನ ತಾನೊಬ್ಬ ಸಾಮಾನ್ಯ ಕಾರ್ಯಕರ್ತನಾಗಿ ಕಾಂಗ್ರೆಸ್ಸಿನಲ್ಲಿರುತ್ತೇನೆಯೇ ಹೊರತು ಟಿಕೆಟ್ಟಿಗಾಗಿ ಬಂದಿಲ್ಲ ಎಂದೇ ಪುಟ್ಟೇಗೌಡ ಆಣೆ ಹಾಕಿದ್ದರು. ಈಗ ನೋಡಿದರೆ ಆ ಕಾಲದಿಂದಲೂ ಕಾಂಗ್ರೆಸ್ ಗೂಡು ಕಟ್ಟಲು ಹೆಣಗಾಡಿದ ಗೋಪಾಲಸ್ವಾಮಿಯನ್ನು ವಂಚಿಸಿ ಪುಟ್ಟೇಗೌಡರಿಗೇ ಕಾಂಗ್ರೆಸ್ ಟಿಕೆಟ್ ಎಂಬಂತಾಗಿದೆ.

ವಾಸ್ತವೇನೆಂದರೆ ಜೆಡಿಎಸ್ ತೊರೆದು ಬಂಡಾಯವಾಗಿ ಪುಟ್ಟೇಗೌಡರು ಪುರಸಭೆಗೆ ನಿಲ್ಲಿಸಿದ್ದ ಅಭ್ಯರ್ಥಿಗಳ ಪೈಕಿ ಒಬ್ಬೇ ಒಬ್ಬ ಗೆದ್ದದ್ದು ಬಿಟ್ಟರೆ 23 ಸದಸ್ಯರ ಪುರಸಭೆಯಲ್ಲಿ ಕಾಂಗ್ರೆಸ್‌ನಿಂದ ಎಂಟು ಮಂದಿ ಮತ್ತು ಜೆಡಿಎಸ್‌ನಿಂದ 12 ಮಂದಿ ಗೆದ್ದಿದ್ದರು. ಅಲ್ಲಿಗೆ ಜೆಡಿಎಸ್‌ಗೆ ಸರಿಸಾಟಿಯಾಗಿ ಪೈಪೋಟಿ ಕೊಟ್ಟಿದ್ದು ಗೋಪಾಲಸ್ವಾಮಿಯೇ ಹೊರತು ಪುಟ್ಟೇಗೌಡರಲ್ಲ ಎಂಬುದೂ ಸಾಬೀತಾಗಿತ್ತು. ಕೋಟೆ ನಾಗರಾಜು ಎಂಬ ಪುರಸಭಾ ಸದಸ್ಯನ ಹೊರತಾಗಿ ಜೆಡಿಎಸ್‌ನ ಬಹುತೇಕ ಕಾರ್ಯಕರ್ತರ್‍ಯಾರೂ ಪುಟ್ಟೇಗೌಡನ ಬೆನ್ನಿಗೆ ನಿಲ್ಲಲೇ ಇಲ್ಲ.

ಈ ಎಲ್ಲಾ ಹಿನ್ನೆಲೆಯಲ್ಲಿ ಎತ್ತಿಂದೆತ್ತ ನೋಡಿದರೂ ಹಾಲೀ ಶಾಸಕ ಪುಟ್ಟೇಗೌಡರಿಗಿಂತಲೂ ಗೋಪಾಲಸ್ವಾಮಿಯ ಶ್ರಮ ಮತ್ತು ತಾಕತ್ತೇ ಹೆಚ್ಚು ತೂಗುತ್ತಿತ್ತು. ಗೋಪಾಲಸ್ವಾಮಿಗೇ ಕಾಂಗ್ರೆಸ್ ಟಿಕೆಟ್ ಕೊಡಬೇಕೆಂಬುದು ಬಹುತೇಕ ಕಾಂಗ್ರೆಸ್ ಕಾರ್ಯಕರ್ತರ ಒತ್ತಾಯವೂ ಆಗಿತ್ತು. ಕಳೆದ ಮೂರ್‍ನಾಲ್ಕು ವರ್ಷಗಳಿಂದ ಕ್ಷೇತ್ರದಲ್ಲಿ ಕಾಂಗ್ರೆಸ್ ಸಂಘಟನೆಗೆಂದೇ ಗೋಪಾಲಸ್ವಾಮಿ ತನ್ನ ಸ್ವಂತ ದುಡಿಮೆಯ ಐದಾರು ಕೋಟಿ ರೂಪಾಯಿಗಳನ್ನು ಕಳಕೊಂಡಾಗಿತ್ತು, ಗಳಿಸಿದ್ದ ಆಸ್ತಿಪಾಸ್ತಿಯೂ ಕೈಬಿಟ್ಟಾಗಿತ್ತು. ದಿಕ್ಕಿಲ್ಲದ ಕಾಂಗ್ರೆಸ್ಸಿಗಾಗಿ ಅಪಾರ ದುಡ್ಡು, ಶ್ರಮ, ಸಮಯ ಎಲ್ಲವನ್ನೂ ಧಾರೆಯೆರೆದು ಪೊಲೀಸ್ ಕಿರುಕುಳ, ಜೆಡಿಎಸ್ ದೌರ್ಜನ್ಯ ಎಲ್ಲವನ್ನೂ ಸಹಿಸಿಯೂ ಕೊನೇಗಳಿಗೆಯಲ್ಲಿ ಪಕ್ಷವೇ ತನಗೆ ಕೈಕೊಡುತ್ತದೆಯೆಂಬ ನಿರೀಕ್ಷೆಯಾದರೂ ಗೋಪಾಲ ಸ್ವಾಮಿಗೆಲ್ಲಿತ್ತು?

ಇವತ್ತು ಇಡೀ ಶ್ರವಣಬೆಳಗೊಳದ ಕಾಂಗ್ರೆಸ್ ಸಮೂಹ ಗೋಪಾಲಸ್ವಾಮಿಯ ಬೆನ್ನಿಗೆ ನಿಂತಿದೆ. ಇನ್ನೇನು ಪುಟ್ಟೇಗೌಡರಿಗೆ ಟಿಕೆಟ್ಟಾಗುತ್ತದೆಯೆಂಬ ಆತಂಕಕ್ಕೆ ಬಿದ್ದೇ ಸರಿಸುಮಾರು ಏಳು ಸಾವಿರ ಕಾಂಗ್ರೆಸ್ ಕಾರ್ಯಕರ್ತರು ಲಾರಿ, ಬಸ್ಸು, ಟ್ರಾಕ್ಟರುಗಳಲ್ಲಿ ಬೆಂಗಳೂರಿಗೆ ಲಗ್ಗೆಯಿಟ್ಟಿದ್ದಾರೆ. ಗೋಪಾಲಸ್ವಾಮಿಗೆ ಟಿಕೆಟ್ ವಂಚಿಸಿದ್ದೇ ಆದಲ್ಲಿ ಕಾಂಗ್ರೆಸ್ಸಿಗೂ ಪಾಠ ಕಲಿಸುತ್ತೇವೆಂದು ಹಠಕ್ಕೆ ಬಿದ್ದಿದ್ದಾರೆ. ಸದ್ಯ ಕಾಂಗ್ರೆಸ್ ಕೈಕೊಟ್ಟಿದ್ದೇ ಆದಲ್ಲಿ ಪಕ್ಷೇತರನಾಗೇ ಹೋರಾಟಕ್ಕಿಳಿಯುವ ನಿರ್ಧಾರಕ್ಕೂ ಗೋಪಾಲಸ್ವಾಮಿ ಬಂದಂತಿದೆ. ಹಾಗೊಮ್ಮೆ ಗೋಪಾಲಸ್ವಾಮಿ ಪಕ್ಷೇತರನಾಗಿ ಕಣಕ್ಕಿಳಿದದ್ದೇ ಆದರೆ ಅದು once again ಜೆಡಿಎಸ್ ವಿರುದ್ಧದ ಕಾಂಗ್ರೆಸ್ ಹಣಾಹಣಿಯೇ. ಏಕೆಂದರೆ ಕಾಂಗ್ರೆಸ್‌ನಿಂದ ಸ್ಪರ್ಧೆಗಿಳಿದರೂ ಸ್ಥಳೀಯ ಕಾಂಗ್ರೆಸ್ ಕಾರ್ಯಕರ್ತರ ಪಾಲಿಗೆ ಪುಟ್ಟೇಗೌಡ ಇನ್ನೂ ಜೆಡಿಎಸ್ ಪಕ್ಷವಾಗೇ ಕಾಣಿಸುತ್ತಾರೆ. ದೇವೇಗೌಡರ ಜೆಡಿಎಸ್ ವರ್ಸಸ್ ಕಾಂಗ್ರೆಸ್ ಜೆಡಿಎಸ್ ವಿರುದ್ಧ ಪಕ್ಷೇತರ ಕಾಂಗ್ರೆಸ್ ಎಂಬ ವಿಚಿತ್ರ ಹಣಾಹಣಿಯೊಂದು ಶ್ರವಣಬೆಳಗೊಳದಲ್ಲಿ ಸಂಭವಿಸಲಿದೆ!

ಬಹುಶಃ ಪುಟ್ಟೇಗೌಡರಿಗೆ ಕಾಂಗ್ರೆಸ್ ಟಿಕೆಟ್ ಕೊಟ್ಟ ಒಂದೇ ಕಾರಣಕ್ಕೂ ಅಥವಾ ಗೋಪಾಲಸ್ವಾಮಿಗೆ ಅನ್ಯಾಯ ವಾಯಿತೆಂದೋ ಶ್ರವಣಬೆಳಗೊಳದ ಕಾಂಗ್ರೆಸ್ ಕಾರ್ಯಕರ್ತರು ಬೀದಿಗಿಳಿದಿದ್ದರೆ ಅದಕ್ಕಿಷ್ಟು ಮಹತ್ವವಿರುತ್ತಿರಲಿಲ್ಲ. ಇಡೀ ಹಾಸನ ಜಿಲ್ಲೆಯಲ್ಲಿ ಜೆಡಿಎಸ್ ಬಲಾಢ್ಯ ರೇವಣ್ಣನ ಆರ್ಭಟದ ವಿರುದ್ಧ ಎದೆ ತಟ್ಟಿ ನಿಂತ ಏಕೈಕ ಗಂಡೆಂಬ ನಿರೀಕ್ಷೆ ಹುಟ್ಟಿಸಿದ್ದು ಗೋಪಾಲಸ್ವಾಮಿ ಮಾತ್ರ.

ಗೋಪಾಲ ಸ್ವಾಮಿಯಂಥ ಹೋರಾಟಗಾರನನ್ನು ಕಾಂಗ್ರೆಸ್ ಕಳಕೊಂಡರೆ ನಾಳೆ ಬಾವುಟ ಹಿಡಿಯುವುದ ಕ್ಯಾದರೂ ಕಾರ್ಯಕರ್ತರು ಬೇಕಲ್ಲವೇ?

○ ರಾ. ಸೋಮನಾಥ್

HKK

...ಕರದ ದಿನಗಳಲ್ಲಿ ತನ್ನ ರೌಡಿಸಂ ಮತ್ತು ...ಗಾರಿಕೆಯಿಂದ ವಿವಾದಗಳನ್ನು ಬಗೆಹರಿಸಿಕೊಂಡ ...ಭೂಷಣ ರೆಡ್ಡಿ ಅವುಗಳನ್ನು ವಿದೇಶಿ ಸಾಫ್ಟ್‌ವೇರ್ ...ನಿಗಳಿಗೆ ಮಿಲಿಯನ್‌ಗಟ್ಟಲೆಗೆ ಮಾರಿಕೊಂಡ. ಹೀಗೆ ...ಾದಿಸಿದ ಹಣವನ್ನು ಇಂದು ಬೊಮ್ಮನಹಳ್ಳಿಯಲ್ಲಿ ...ನಂತೆ ಹರಿಸುತ್ತಿದ್ದಾನೆ.

...ನಂಬಲರ್ಹ ಮೂಲಗಳ ಪ್ರಕಾರ ಈ ನಾಗಭೂಷಣ ...ಗೆ ಕಾಂಗ್ರೆಸ್ ಟಿಕೆಟ್ ಖಾತ್ರಿಯಾಗಿದೆ. ಅಧಿಕೃತವಾಗಿ ...ಷಣೆಯಾಗಿಬಿಟ್ಟರೆ, ಬಹುಶಃ ಬಳ್ಳಾರಿಯ ಗಣಿ ಕಳ್ಳರೂ ...ಚುವಂತೆ ಅಕ್ರಮ ಹಣವನ್ನು ಬಿತ್ತನೆ ಮಾಡುತ್ತಾನೆ. ...ೃ ಬಂದುಬಿಟ್ಟರೆ ಬಿತ್ತಿದ್ದಕ್ಕೆ ಕನಿಷ್ಠ ನೂರರಷ್ಟಾದರೂ ...ಯು ಗ್ಯಾರಂಟಿ.

ಭೂಗಳ್ಳ ಎ.ಸಿ.ಶ್ರೀನಿವಾಸ್

...ಮಹಾದೇವಪುರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಖಚಿತವಾಗಿರುವ ಎ.ಸಿ.ಶ್ರೀನಿವಾಸ್ ವಿವಾದಿತ ಜಾಗಗಳನ್ನ ಯಾವ ರೀತಿ ಸ್ವಾಹಾ ಮಾಡಿಕೊಳ್ಳಬೇಕು ಎಂಬುದರಲ್ಲಿ ನಿಷ್ಣಾತ.

ಹೌಸಿಂಗ್ ಸೊಸೈಟಿಗಳನ್ನು ಪ್ರಾರಂಭಿಸುವುದರಲ್ಲಿ ಮತ್ತು ಮುಳುಗಿಸುವುದರಲ್ಲಿ ಈತ ಎಕ್ಸ್‌ಪರ್ಟ್. ಉದಾಹರಣೆಗೆ ಶ್ರೀ ವೆಂಕಟೇಶ್ವರ ಲ್ಯಾಂಡ್ ಡೆವಲಪರ್ಸ್ ಎಂಬ ಕಂಪನಿಯ ಮಾಜಿ ಪಾರ್ಟನರ್ ಆದ ಈತ ರಕ್ಷಣಾ ಇಲಾಖೆಯ ಎಡಿಎನ ನೂರಾರು ಕಾರ್ಮಿಕರಿಗೆ ಹಾಗೂ ವಿಜ್ಞಾನಿಗಳಿಗೆ ಸೈಟ್ ನೀಡುವುದಾಗಿ ಹೇಳಿ ವಂಚಿಸಿದ್ದಾನೆ. ತಮ್ಮ ಒಡೆತನದಲ್ಲಿರುವ ಸುಮಾರು 14 ಎಕರೆ ಪ್ರದೇಶದಲ್ಲಿ 156 ಸೈಟ್‌ಗಳನ್ನು ನಿರ್ಮಾಣ ಮಾಡಿಕೊಡುವುದಾಗಿ ಹೇಳಿ 3 ಕೋಟಿ 29 ಲಕ್ಷಗಳನ್ನು ಶ್ರೀ ವೆಂಕಟೇಶ್ವರ ಹೌಸ್ ಬಿಲ್ಡಿಂಗ್ ಕೋ ಸೊಸೈಟಿ ಲಿ. ಎಂಬ ಸಂಸ್ಥೆಯೊಂದಿಗೆ ಸೇರಿಕೊಂಡು ವಂಚಿಸಿದ್ದಾನೆ. ಈ ಸಂಬಂಧ ಚಾರ್ಜ್ ವರ್ಗೀಸ್ ಎಂಬ ಎಡಿಎ ವಿಜ್ಞಾನಿಯೊಬ್ಬರು ನೀಡಿದ ದೂರಿನ ಅನ್ವಯ ಅಡಿಷನಲ್ ಚೀಫ್ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟರು ಎ.ಸಿ.ಶ್ರೀನಿವಾಸ್‌ಗೆ ಸಮನ್ಸ್ ಜಾರಿ ಮಾಡಿದ್ದಾರೆ. ಭಾರತೀಯ ದಂಡ ಸಮಿತೆ 407, 408, 420.. ಮುಂತಾದ 10 ಸೆಕ್ಷನ್‌ಗಳ ಅಡಿಯಲ್ಲಿ ಎ.ಸಿ.ಶ್ರೀನಿವಾಸ್‌ಗೆ ಸಮನ್ಸ್ ಜಾರಿ ಆಗಿದೆ.

ಕೆಪಿಸಿಸಿ ಕಾರ್ಯದರ್ಶಿಯಾಗಿದ್ದ ಎ.ಸಿ.ಶ್ರೀನಿವಾಸ್ ತುಮಕೂರು ಜಿಲ್ಲೆ ಕಾಂಗ್ರೆಸ್‌ನ ಉಸ್ತುವಾರಿ ವಹಿಸಿದ್ದವರು. ಹೀಗಾಗಿ ಕೆಪಿಸಿಸಿ ಅಧ್ಯಕ್ಷರಾದ ಪರಮೇಶ್ವರ್ ಅವರೊಂದಿಗೆ ಈತನಿಗೆ ನಿಕಟಸಂಪರ್ಕವಿತ್ತು. ಜೊತೆಗೆ ಕಂಡವರ ಭೂಮಿ ನುಂಗಿದ ಕಂಡಾಪಟ್ಟೆ ಹಣವಿತ್ತು. ಹೀಗಾಗಿ ಕಾಂಗ್ರೆಸ್ ಟಿಕೆಟ್ ಗಿಟ್ಟಿಸಿದ್ದಾರೆ ಎಂಬ ಮಾತಿದೆ. ಮಹಾದೇವಪುರ ಕ್ಷೇತ್ರದಾದ್ಯಂತ ಕನಕಾಂಬರ ನೋಟುಗಳ ಮಳೆಯನ್ನೇ ಸುರಿಸಲು ಸಿದ್ಧರಾಗಿರುವ ಶ್ರೀನಿವಾಸ್ ಒಂದುವೇಳೆ ಗೆದ್ದುಬಿಟ್ಟರೆ ಮಹಾದೇವಪುರಕ್ಕೆ ಮಹಾದೇವಪುರವನ್ನೇ ಹರಾಜಿಗಿಟ್ಟರೂ ಅಚ್ಚರಿ ಇಲ್ಲ.

○


ಕಾಗೇರಿ ಗೆಲ್ಲಿಸಲು ದೇಶಪಾಂಡೆ-ಮ್ಯಾಗಿ ಮಸಲತ್ತು!


ಉತ್ತರ ಕನ್ನಡ ಕಾಂಗ್ರೆಸ್ ಕ್ಯಾಂಡಿಡೇಟ್‌ಗಳ ಆಯ್ಕೆ 'ಆಟ' ಅಧ್ವಾನದಿ ಹಿಡಿದಿದೆ! ಜಿಲ್ಲಾ ಕಾಂಗ್ರೆಸ್ ಕಬ್ಜಾ ಮಾಡಿಕೊಳ್ಳುವ ಮನೆಮುರುಕ ಹಠಕ್ಕೆ ಬದ್ದಿರುವ ದೇಶಪಾಂಡೆ ಮತ್ತು ಮಾರ್ಗರೆಟ್ ಆಳ್ವರ ಅಹಂಕಾರದ ಹಾರಾಟದಲ್ಲಿ ಅರ್ಹರು-ನಿಷ್ಠಾವಂತರು-ಜನ ಬಳಕೆಯವರು ಮೂಲೆಗುಂಪಾಗಿ ದೋಖಾಬಾಜಿಗಳು-ಫುಂಡರು-ಪೋಕರಿಗಳು ಟಿಕೆಟ್ ಹೊಡೆವ ಸಾಧ್ಯತೆ ಹೆಚ್ಚಾಗಿದೆ. ಕಾಂಗ್ರೆಸ್‌ನ ದುರಂತ ಎಂಥದೆಂದರೆ, ಅದಿರು ಕದ್ದು ಸಿಬಿಐ ಬೇಕಾದವರು, ಜುಗಾರಿ ಅಡ್ಡೆಯವರು, ರೌಡಿ ಶೀಟರ್‌ಗಳು, ಜನರಿಗೆ ಬೇಡದವರು ಆ ಪಕ್ಷದ ಗೌರವಾನ್ವಿತ ಅಭ್ಯರ್ಥಿಗಳಾಗುತ್ತಿದ್ದಾರೆ; ಅರ್ಥಾತ್ ಎದುರಾಳಿ ಪಕ್ಷದ ನಿರಾಯಾಸ ಗೆಲುವಿಗೆ ದೇಶಪಾಂಡೆ ಮತ್ತು ಮ್ಯಾಗಿಯೇ ಅನುಕೂಲ ಕಲ್ಪಿಸುತ್ತಿದ್ದಾರೆ.

ಜಿಲ್ಲೆಯಲ್ಲಿರುವುದು ಆರು ಅಸೆಂಬ್ಲಿ ಕ್ಷೇತ್ರ. ಇದರಲ್ಲಿ ತಲಾ ಮೂರ್ಮೂರು ಹಂಚಿಕೊಂಡಿರುವ ಮ್ಯಾಗಿ-ದೇಶಪಾಂಡೆ ತಂತಮ್ಮ ಗುಲಾಮರಿಗೆ ಟಿಕೆಟ್ ಕೊಡಿಸಲು ದಿಲ್ಲಿ ಲೆವೆಲ್‌ನಲ್ಲಿ ಪ್ರಯತ್ನ ನಡೆಸಿದ್ದಾರೆ. ಹಳಿಯಾಳದಲ್ಲಿ ಖುದ್ದು ತಾನೇ ಕ್ಯಾಂಡಿಡೇಟ್ ಆಗುವ ದೇಶಪಾಂಡೆ ಕಾರವಾರದಲ್ಲಿ ಗಣಿ ಕಳ್ಳ ಸತೀಶ್ ಸೈಲ್ ಮತ್ತು ಭಟ್ಕಳದಲ್ಲಿ ಗೋಲ್‌ಮಾಲ್ ಕಂಟ್ರಾಕ್ಟರ್ ಈಶ್ವರ್ ನಾಯ್ಕ್, ಅಥವಾ ಹಾಲಿ ಪಕ್ಷೇತರ ಶಾಸಕ ಜೆ.ಡಿ.ನಾಯ್ಕ್‌ಗೆ ಛಾನ್ಸ್ ಕೊಡಿಸಲು ಹವಣಿಸುತ್ತಿದ್ದಾರೆ. ಮ್ಯಾಗಿ ಕುಮಟೆಯಲ್ಲಿ ದಿವಂಗತ ಮಾಜಿ ಶಾಸಕ ಮೋಹನ ಶೆಟ್ಟಿ ಮಡದಿ ಶಾರದಾ ಶೆಟ್ಟಿ, ಯಲ್ಲಾಪುರದಲ್ಲಿ ಅದಿರು ಅವ್ಯವಹಾರಿ ಶಿವರಾಮ ಹೆಬ್ಬಾರ್ ಮತ್ತು ಶಿರಸಿಯಲ್ಲಿ ಗೂಂಡಾಗುರು ದೀಪಕ್ ಹೊನ್ನಾವರ್‌ಗೆ ಹುರಿಯಾಳಾಗಿಸಲು ಕಸರತ್ತು ನಡೆಸಿದ್ದಾರೆ.

ಸತೀಶ್ ಸೈಲ್ ಮತ್ತು ಶಿವರಾಮ ಹೆಬ್ಬಾರ್ ಇಬ್ಬರೂ ಅದಿರು ಕಳ್ಳ ಸಾಗಾಣಿಕೆ ಮಾಡಿ ಸಿಬಿಐಗೆ ಮೋಸ್ಟ್ ವಾಂಟೆಡ್ ಆಗಿರುವ ಪುಢಾರಿಗಳು. ಆದರೆ ಕಳೆದ ಐದು ವರ್ಷದಿಂದ ಪಕ್ಷ ಸಂಘಟಿಸುತ್ತ ಜನಸಂಪರ್ಕ ಸಾಧಿಸಿಕೊಂಡಿರುವವರು. ದುರಂತವೆಂದರೆ, ಇವರಿಬ್ಬರ ಬಿಟ್ಟರೆ ಆವರವರ ಕ್ಷೇತ್ರದಲ್ಲಿ ಕಾಂಗ್ರೆಸ್‌ಗೆ ಪರ್ಯಾಯ ಆಯ್ಕೆ ಇಲ್ಲ. ಗೆಲ್ಲುವ ಮಟ್ಟದ ಹೋರಾಟ ನೀಡಬಲ್ಲ ಈ ಗಣಿ ಕಳ್ಳರು ಕ್ಷೇತ್ರದಲ್ಲಿ ಮತ್ಯಾರನ್ನೂ ಬೆಳೆಯ ಬಿಡಲಿಲ್ಲ. ಗಣಿ ದುಡ್ಡಿನ ಮಹಿಮೆ ಇದು. ಆದರೆ ಶಿರಸಿಯಲ್ಲಿ ನಿಲ್ಲಿಸಲು ಮ್ಯಾಗಿ ಆಯ್ಕೆ ಮಾಡಿರುವ ದೀಪಕ್ ಹೊನ್ನಾವರ ಮತ್ತು ದೇಶಪಾಂಡೆ ಶಿಷ್ಯ ಭಟ್ಕಳದ ಜೆ.ಡಿ.ನಾಯ್ಕ್, ಸಮಾಜದಲ್ಲಿ ಹೆಸರು ಕೆಡಿಸಿಕೊಂಡವರು. ಜನರು ಅಸಹ್ಯ ಪಡುವಂಥ ಗುಣ-ಧರ್ಮ ಇವರದು.

ಭಟ್ಕಳದಲ್ಲಿ ಕಳೆದೈದು ವರ್ಷದಿಂದ ಶಾಸಕನಾಗಿರುವ ಜೆ.ಡಿ.ನಾಯ್ಕ್, ಜಗಳ ಗಂಟ. ಕಂಡ-ಕಂಡವರ ಮೇಲೇರಿ ಹೋಗಿ ಬೈದು ಮೋಕಳಿಕ್ ಆಗುವ ಅಸಡ್ಡಾಳ ಪುಢಾರಿ. ಈತನ ಹುಚ್ಚಾಟ ಕಂಡು ಜನ ರೋಸಿಹೋಗಿದ್ದಾರೆ. ಕಾಂಗ್ರೆಸ್ ನಡೆಸಿದ ಪ್ರೈವೇಟ್ ಸರ್ವೆ ಮತ್ತು ಗುಪ್ತಚರ









ದಳದ ಎರಡೂ ವರದಿಯಲ್ಲಿ ಜೇಡಿ ಈ ಬಾರಿ ಗೆಲ್ಲುವುದು ಸಾಧ್ಯವೇ ಇಲ್ಲವೆಂದು ಷರಾ ಬರೆಯಲಾಗಿದೆ. ಶಿಷ್ಯನ ಬಗ್ಗೆ ಕ್ಷೇತ್ರದಲ್ಲಿ ಕೆಟ್ಟ ಅಭಿಪ್ರಾಯ ಇರುವುದು ಕಂಡು ಕಂಗಾಲಾದ ದೇಶಪಾಂಡೆ ಬದಲಾವಣೆಗೆ ಪ್ಲಾನ್ ಹಾಕಿದ್ದರು. ಭಟ್ಕಳದಲ್ಲಿರುವ ಸ್ವಜಾತಿ ಬಂಧುಗಳಾದ ಟೈಲ್ಸ್ ಫ್ಯಾಕ್ಟರಿಯ ರಾಜೇಶ್ ನಾಯಕ್ ಮತ್ತು ಪ್ರದೀಪ್ ಪೈಗಳ ಸಲಹೆಯಂತೆ ಶಕುನಿ ಬುದ್ಧಿಯ ಈಶ್ವರ ನಾಯ್ಕ ಎಂಬ ದೀವರ ಧೀರನಿಗೆ ಟಿಕೆಟ್ ಕೊಡಿಸಲು ನೋಡಿದರು. ಅದ್ಯಾಕೋ ಎಡವಟ್ಟಾಗಿ ಈಗ ಜೇಡಿಗೇ ಕಿರೀಟ ರೆಡಿ ಮಾಡಿಕೊಂಡಿದ್ದಾರೆ.


ಹಾಗೆಯೇ ಮ್ಯಾಗಿಯಜ್ಜಿ ಶಿರಸಿ-ಸಿದ್ದಾಪುರ ಕ್ಷೇತ್ರದ ಟಿಕೆಟ್ ಅನ್ನು ಕೊಡಲು ಹೊರಟಿರುವುದು ದೀಪಕ್ ಹೊನ್ನಾವರ ಎಂಬ ರೌಡಿ, ಗ್ರೇಟ್ ಗ್ಯಾಂಬ್ಲರ್, ಅಂದರ್-ಬಾಹರ್ ಅಡ್ಡೆದಾರ, ಇಬ್ಬರು ಹೆಂಡಿರ ಮುದ್ದಿನ ಗಂಡ



ಸತೀಶ್ ಸೈಲ್



ದೀಪಕ್ ಹೊನ್ನಾವರ್



ಜೆ.ಡಿ.ನಾಯಕ್

ಎಂದೆಲ್ಲ ಹೆಸರುವಾಸಿಯಾಗಿರುವ ಹುಂಬನಿಗೆ! ಈತ ಎಮ್ಮೆಲ್ಲೆಗಿರಿ ಬಿಡಿ, ಗ್ರಾ.ಪಂ.ಸದಸ್ಯನಾಗುವ ಯೋಗ್ಯತೆಯೂ ಇಲ್ಲ. ಸುಮಾರು ಎರಡು ದಶಕದ ಹಿಂದೆ ಭಾರೀ ವಿರೋಧದ ನಡುವೆ ಉತ್ತರ ಕನ್ನಡ ಸೊಸೆ ತಾನೆನ್ನುತ್ತ ಮ್ಯಾಗಿ ಜಿಲ್ಲೆಗೆ ಎಂಟ್ರಿ ಕೊಟ್ಟಾಗ ಆಕೆಯ ಲಗೇಜ್ ಹೇರುತ್ತ ಬಾಡಿಗಾರ್ಡ್ ಚಾಕರಿ ಮಾಡಿದ್ದೇ ದೀಪಕ್ ಹೊನ್ನಾವರ್‌ನ ದೊಡ್ಡ 'ಅರ್ಹತೆ'! ಯುಪಿಎ-I ಕಾಲಕೀರ್ದಿಯಲ್ಲಿ ಈ ದಗಲುಬಾಜಿ ದೀಪಕ್‌ನನ್ನು ಮ್ಯಾಗಿ ನವ ಮಂಗಳೂರು ಪೋರ್ಟ್ ಟ್ರಸ್ಟ್ ಸದಸ್ಯನಾಗಿ ಮಾಡಿದ್ದರು. ಅಲ್ಲಾತ ಕಣ್ಣು-ಬಾಯಿ ಬಿಟ್ಟುಕೊಂಡು ಟಿಎ-ಡಿಎ ಹೊಡೆದುಕೊಂಡನೇ ಹೊರತು ಬೇರೇನೂ ಸಾಧಿಸಲಿಲ್ಲ.

ಗೂಂಡಾಗಿರಿ-ಲೇವಾದೇವಿ-ರಸಿಕತೆ-ಜೂಜುಕೋರತನ ವನ್ನೇ ಜೀವನೋಪಾಯ ಮಾಡಿಕೊಂಡಿರುವ ದೀಪಕ್‌ನಲ್ಲಿ ಮೇಡಮ್ ಮ್ಯಾಗಿಗೆ ಅದ್ಯಾವ ಸದ್ಗುಣ ಕಂಡಿದೆಯೋ ಆ ಏಸು ಸ್ವಾಮಿಯೇ ಬಲ್ಲ! ಈತನ ಕಟ್ಟಿಕೊಂಡು ತಿರುಗುವುದರಿಂದ ಜಿಲ್ಲೆಯಲ್ಲಿ ಮ್ಯಾಗಿ ಇಮೇಜ್ ಸಾಕಷ್ಟು ಖರಾಬ್ ಆಗಿತ್ತು. ಹಿಂದೆ ಪಿ.ಎಸ್. ಜೈವಂತ್ ಕಾಂಗ್ರೆಸ್ ಕ್ಯಾಂಡಿಡೇಟಾದಾಗ ಈ ದೀಪಕ್‌ನ ಪ್ರಚಾರದಿಂದಲೇ ಆ ಸಜ್ಜನ ಸೋಲಬೇಕಾಗಿ ಬಂದಿತ್ತು. ಒಂದು ಕಾಲದಲ್ಲಿ ಹೊಟ್ಟೆಪಾಡಿಗೆ ರಿಫೀಲ್ ಮಾರುತ್ತಿದ್ದ ಈತ ಇವತ್ತು ಕೋಟಿಗೆ ತೂಗುತ್ತಾನೆ. ಶಿರಸಿಯ ಪಿನ್‌ಬೋರ್ಡ್-ಜುಗಾರಿ ಮಂಡಲದ ಪಿತಾಮಹ ಈ ದೀಪಕ್! ವ್ಯಾಜ್ಯವಿರುವ ಹಳ್ಳಿ ಕಡೆಯ ಅಡಿಕೆಗೊನೆ ಕೊಯಿಸುವ ಗೂಂಡಾಗಿರಿಯಲ್ಲಿ ಖ್ಯಾತಿ ಗಳಿಸಿರುವ ಈತ ಕಾಂಗ್ರೆಸ್ ಕ್ಯಾಂಡಿಡೇಟಾದರೆ 10,000ಕ್ಕಿಂತ ಹೆಚ್ಚು ಓಟು ಬರಲಾರದೆಂದೇ ಜನ ಮಾತಾಡಿಕೊಳ್ಳುತ್ತಿದ್ದಾರೆ!

ಶಿರಸಿ-ಸಿದ್ದಾಪುರದ ಜನರ ತಾತ್ಸಾರ-ತಿರಸ್ಕಾರಕ್ಕೆ ತುತ್ತಾಗಿರುವ ದೀಪಕ್‌ಗೆ ಟಿಕೆಟ್ ಕೊಡಿಸುವ ಮ್ಯಾಗಿ ಲಾಜಿಕ್ ಮೂರ್ಖತನದ ಪರಮಾವಧಿಯೇ ಸರಿ! ಆಗಿಗ ಶಿರಸಿ ಕ್ಷೇತ್ರದ ಜಾತಿ ಲೆಕ್ಕಾಚಾರ-ರಾಜಕೀಯ-ಸಾಮಾಜಿಕ ಪರಿಸ್ಥಿತಿ, ಬ್ರಾಹ್ಮಣರ ಹಿಕಮತ್ತು ಒಂದೂ ಅರ್ಥವಾಗುತ್ತಿಲ್ಲ. ಹೇಳಿ-ಕೇಳಿ ಕಟ್ಟರ್ ಚೆಡ್ಡಿ ಬ್ರಾಹ್ಮಣ ಕಾಗೇರಿ ಮಾಣಿಯ ಕ್ಷೇತ್ರವಿದು. ಇಲ್ಲಿ ದೀವರು (ಈಡಿಗರು) ಮತ್ತು ಹೈಗರು (ಬ್ರಾಹ್ಮಣರು) ಸಮಬಲದಲ್ಲಿದ್ದಾರೆ. ಇಲ್ಲಿ ಒಂದೋ ಬ್ರಾಹ್ಮಣರಿಗೆ ಅಥವಾ ದೀವರಿಗೆ ಎಲ್ಲ ಪಾರ್ಟಿಯವರೂ ಕಣಕ್ಕಿಳಿಸುವುದು ವಾಡಿಕೆ. ಬಹುಸಂಖ್ಯಾತ ದೀವರು-ಬ್ರಾಹ್ಮಣರು ತಮ್ಮವರಿಗೆ ಟಿಕೆಟ್ ಕೊಡದ ಪಾರ್ಟಿ ವಿರುದ್ಧ ತಿರುಗಿ ಬೀಳುತ್ತಾರೆ.

ಇಂಥ ಜಾತಿ ಅಖಾಡದಲ್ಲಿ ಕೆಲವೇ ನೂರು ಮತಗಳಿರುವ ಸೇರುಗಾರ ಜಾತಿಯ ದೀಪಕ್ ಹೊನ್ನಾವರ್‌ಗೆ ಕಾಂಗ್ರೆಸ್ ಹುರಿಯಾಳಾಗಿಸಲು ಮ್ಯಾಗಿ ಮುಂದಾಗಿ ಹೈಕಮಾಂಡ್ ಮೇಲೆ ತರತರದ ಒತ್ತಡ ಹಾಕುತ್ತಿರುವುದು ವಿಪರ್ಯಾಸವೇ ಸರಿ. ದೀಪಕ್‌ಗೆ ಜಾತಿಮತಗಳೂ ಇಲ್ಲ; ಎಲ್ಲ ಜಾತಿ-ಧರ್ಮದವರ ಮತ ಪಡೆಯುವ ವ್ಯಕ್ತಿತ್ವವೂ ಇಲ್ಲ. ಇದೆಲ್ಲಕ್ಕಿಂತ ಹೆಚ್ಚಾಗಿ ಮತದಾರರಿಗೆ ಈತನೊಬ್ಬ ಕ್ಯಾಂಡಿಡೇಟ್ ಎಂದು ಕಲ್ಪಿಸಿಕೊಳ್ಳುವುದೂ ಕಷ್ಟ. ಇಂಥ ನಾಲಾಯಕ್‌ಗೆ ಟಿಕೆಟ್ ಕೊಡಿಸಲು ಮ್ಯಾಗಿ ದಿಲ್ಲಿ ದರ್ಬಾರಿನಲ್ಲಿ ತನಗಿರುವ ಪ್ರಭಾವ-ಪ್ರತಾಪ ಪ್ರದರ್ಶಿಸುತ್ತಿರುವುದು ನಾಚಿಕೆಗೇಡು. ಆಕಸ್ಮಾತ್ ದೀಪಕ್‌ನೇ ಕ್ಯಾಂಡಿಡೇಟಾದರೆ ಅನಾಯಾಸವಾಗಿ ಕಾಂಗ್ರೆಸ್ ಶಿರಸಿ ಕ್ಷೇತ್ರ ಕಳೆದುಕೊಂಡಂತೆಯೇ.

ಮ್ಯಾಗಿಯ ಅವಾಂತರಕ್ಕೆ, ಆಕೆಯ ಎದುರಾಳಿ ದೇಶಪಾಂಡೆ ಮೌನ ಸಮ್ಮತಿ ಕೊಟ್ಟಿದ್ದಾರೆ. ಇಷ್ಟು ದಿನ ದೀವರ ಸಮುದಾಯದ-ಡಿಸಿಸಿ ಅಧ್ಯಕ್ಷ- 'ಬಂ' ಭಾಮೈದ ಭೀಮಣ್ಣ ನಾಯ್ಕ್‌ಗೆ ಟಿಕೆಟ್ ಕೊಡಿಸುತ್ತೇನೆಂದು ಹೇಳುತ್ತಿದ್ದ ದೇಶಪಾಂಡೆ, ಮ್ಯಾಗಿ ಆವಾಜ್ ಜೋರಾಗುತ್ತಿದ್ದಂತೆ ಬಾಯ್ಮುಚ್ಚಿಕೊಂಡಿದ್ದಾರೆ. ಇದು ಒಂದು ಕಲ್ಲಲ್ಲಿ ಎರಡು ಹಕ್ಕಿ ಹೊಡೆಯುವ ದೇಶಪಾಂಡೆ ತಂತ್ರಗಾರಿಕೆ. ಆತನಿಗೆ ಬಿಜೆಪಿಯ ಆತ್ಮೀಯ ಮಿತ್ರ ಕಾಗೇರಿ ಸೋಲೋದು ಎಂದಿಗೂ ಬೇಕಾಗಿಲ್ಲ. ಕಳೆದ 20 ವರ್ಷದಿಂದ ದೇಶಪಾಂಡೆ ಕಾಗೇರಿ ಗೆಲುವಿಗೆ ಕೈಲಾದ ಸಹಾಯ ಮಾಡುತ್ತಿದ್ದಾರೆ. ಈ ಸಲವೂ ಆತನಿಗೆ ಕಾಗೇರಿ ಎದುರು ದುರ್ಬಲ ಕಾಂಗ್ರೆಸ್ ಕ್ಯಾಂಡಿಡೇಟ್ ಹಾಕುವ ಒಳ ಆಸೆಯಿತ್ತು. ಈಗ ಮ್ಯಾಗಿ ಮೂಲಕ ಅದು ಈಡೇರಿದೆ. ಮ್ಯಾಗಿ ಕ್ಯಾಂಡಿಡೇಟ್ ದೀಪಕ್ ಹೇಗಾದರೂ ಸೋಲ್ತಾನೆ. ಆಗ ದೋಸ್ತ್ ಕಾಗೇರಿ ಗೆಲ್ತಾನೆ; ವೈರಿಣಿ ಮ್ಯಾಗಿಯ ಮಾನ-ಮರ್ಯಾದೆ ಹೈಕಮಾಂಡ್‌ಲ್ಲಿ, ಜಿಲ್ಲೆಯಲ್ಲಿ ಹರಾಜಾಗುತ್ತದೆ. ಇದು ದೇಶಪಾಂಡೆ ಲೆಕ್ಕಾಚಾರ. ಹಾಗಾಗಿ ಆತ ಭೀಮಣ್ಣ ನಾಯ್ಕ್‌ಗೆ ಮೋಸ ಮಾಡುತ್ತಿದ್ದಾರೆ. ಹಿಂದುಳಿದವರಿಗೆ ದ್ರೋಹ ಮಾಡುತ್ತಿದ್ದಾರೆ. ಒಟ್ಟಿನಲ್ಲಿ ಕಾಗೇರಿಯನ್ನು ಐದನೇ ಬಾರಿ ಶಾಸಕನಾಗಿಸಲು ಮ್ಯಾಗಿ-ದೇಶಪಾಂಡೆ ತಂತಮ್ಮ ಆಳಿಲುಸೇವೆ ಮಾಡುತ್ತಿದ್ದಾರೆ.

● ನಹುಷ

ಕೊಪ್ಪಳ: ಪಕ್ಷಾಂತರಿ ಕರಡಿ ಮೇಲುಗೈ

ಬಿಜೆಪಿ ಶಾಸಕ ಸಂಗಣ್ಣ ಕರಡಿಯ ಪಕ್ಷಾಂತರದಿಂದ ಕೊಪ್ಪಳ ವಿಧಾನ ಸಭಾ ಕ್ಷೇತ್ರ ಅಭಿವೃದ್ಧಿ ಕಾಣದೆ ಹಾಳು ಬಿದ್ದಿದೆ. ಅಧಿಕಾರಕ್ಕಾಗಿ ಸದಾ ಪಕ್ಷ ಬದಲಿಸುವ ಕರಡಿಯ ಖಯಾಲಿ ಕಂಡು ಇಲ್ಲಿನ ಜನ ಈತನಿಗೆ 'ಪಕ್ಷಾಂತರಿ ಮಂಗಣ್ಣ' ಎಂತಲೂ ಅಡ್ಡ ಹೆಸರಿಟ್ಟಿದ್ದಾರೆ.

ಕಳೆದ ಚುನಾವಣೆಯಲ್ಲಿ ಜೆಡಿಎಸ್ ಪಕ್ಷದಿಂದ ಗೆದ್ದಿದ್ದ ಕರಡಿ ಚೆಡ್ಡಿಗಳ ಆಪರೇಶನ್ ಕ'ಮಲ'ಕ್ಕೆ ಬಲಿಯಾಗಿ ಬಿಜೆಪಿ ಸೇರಿ ಅಧಿಕಾರದ ಸಕಲ 'ಲಾಭ'ಗಳನ್ನು ಅನುಭವಿಸಿದ್ದರು. ಈಗ ಸಲೀಸಾಗಿ ಬಿಜೆಪಿಯ ಟಿಕೆಟ್ ಪಡೆದಿರುವ ಕರಡಿಗೆ ತನ್ನ ವಿರುದ್ಧ ಮತದಾರರು ಕಾಂಗ್ರೆಸ್‌ನ ಅಭ್ಯರ್ಥಿ ರಾಘವೇಂದ್ರ ಹಿಟ್ನಾಳ ಅಥವಾ ಜೆಡಿಎಸ್‌ನ ಪ್ರದೀಪಗೌಡ ಪಾಟೀಲರಿಗೆ ಓಟು ಹಾಕುತ್ತಾರೋ ಇಲ್ಲವೋ ಎಂಬ ಚಿಂತೆಗಿಂತ ತನ್ನದೇ ಪಕ್ಷ ಬಿಜೆಯಲ್ಲಿರುವ ವಿಲನ್‌ಗಳಿಂದ ಪಾರಾಗುವುದೇ ದೊಡ್ಡ ತಲೆನೋವಾಗಿದೆ.

ಕರಡಿ ಓಟಕ್ಕೆ ಬ್ರೇಕ್?

ಸಂಗಣ್ಣ ಕರಡಿ ಜೆಡಿಎಸ್ ತೊರೆದು ಬಿಜೆಪಿ ಅಂಗಳಕ್ಕೆ ಕಾಲಿಟ್ಟಾಗಲೇ ಎದ್ದಿದ್ದ ಭಿನ್ನಮತ ಈಗ ತಾರಕಕ್ಕೆ ಬೆಳೆದುನಿಂತಿದೆ. ಕರಡಿ ಬಿಜೆಪಿಯನ್ನು ಸೇರಿದಾಗ ಈತನ ಹಿಂದೆ ಬಂದ ಜೆಡಿಎಸ್ ಪುಢಾರಿಗಳು ಸ್ಥಳೀಯ ಚೆಡ್ಡಿಗಳ ಹಿಂದೂತ್ವದ ಆಟ ನಡೆಯದಂತೆ ನೋಡಿಕೊಂಡಿದ್ದರು. ರಾಜ್ಯದಲ್ಲಿ ತಮ್ಮ ಬಿಜೆಪಿ ಪಕ್ಷ ಅಧಿಕಾರದಲ್ಲಿದ್ದರೂ ಕೊಪ್ಪಳ ಕ್ಷೇತ್ರದಲ್ಲಿ ತಮ್ಮ ಆಟ ನಡೆಯದಿದ್ದದ್ದು ಕರಡಿ ವಿರುದ್ಧದ ಚೆಡ್ಡಿಗಳ ಕೋಪಕ್ಕೆ ಕಾರಣವಾಗಿತ್ತು. ಈಗ ಆ ಚೆಡ್ಡಿಗಳು ಕರಡಿಯ ವಿರುದ್ಧ ಕತ್ತಿ ಮಸೆಯುತ್ತಿದ್ದಾರೆ. ಮಾತ್ರವಲ್ಲ ಕರಡಿ ಸೋಲುವ ಅಂತರದ ಬಗ್ಗೆ ಚೆಡ್ಡಿಗಳು ಬೆಟ್ಟಿಂಗ್ ಮಾಡುತ್ತಿರುವುದೂ ಸೋಜಿಗವಾಗಿದೆ.

ಅಧಿಕಾರವನ್ನು ಅನುಭವಿಸಲೆಂದು ಕರಡಿ ಪಕ್ಷಾಂತರಿ ಆಗಿದ್ದಿರಬಹುದು. ಆದರೆ ಆತ ಎಂದೂ ಚೆಡ್ಡಿಗಳ ಪುರೋಹಿತಶಾಹಿ ವ್ಯವಸ್ಥೆಯೊಂದಿಗೆ ಹೊಂದಿಕೊಳ್ಳಲಿಲ್ಲ ಎಂಬುದನ್ನು ಯಾರೇ ಆದರೂ ಒಪ್ಪಿಕೊಳ್ಳುತ್ತಾರೆ. ಜೊತೆಗೆ ಯಾವ ಸ್ಪಷ್ಟ ರಾಜಕೀಯ ಸಿದ್ಧಾಂತವನ್ನೂ ಕರಡಿ ಹೊಂದಿಲ್ಲ ಎಂಬುದೂ ಅಷ್ಟೇ ನಿಚ್ಚಳವಾಗಿದೆ. ಪಕ್ಷ ಮತ್ತು ಸಿದ್ಧಾಂತ ಬದಲಾಗಿ ಕರಡಿ ಮಾಡಿಕೊಂಡು ಬಂದಿರುವುದು ತನ್ನದೇ ಆದ ಶೈಲಿಯ ಓಟ್ ಬ್ಯಾಂಕ್ ರಾಜಕೀಯವನ್ನು. ತನ್ನ ಮತಕ್ಷೇತ್ರದಲ್ಲಿರುವ ಯಾರದ್ದೇ ಮನೆಯಲ್ಲಿ ಹುಟ್ಟು, ಸಾವು, ಮದುವೆ, ಗೃಹ ಪ್ರವೇಶ ಇತ್ಯಾದಿಗಳು ಜರುಗಿದಾಗ ಕರಡಿ ತನ್ನ 'ಕೈಲಾದಷ್ಟು' ಕಾಣಿಕೆಯನ್ನು ನೀಡುವ ಮೂಲಕ



ರಾಘವೇಂದ್ರ ಬಸವರಾಜ್ ಪ್ರದೀಪಗೌಡ

ತನ್ನ ಮತದಾರರನ್ನು ಓಲೈಸುತ್ತಾ ಬಂದಿದ್ದಾರೆ. ಎಷ್ಟರ ಮಟ್ಟಿಗೆಂದರೆ ತನ್ನ ಪರ ಇರುವ ಜನರ ಮನೆಯಲ್ಲಿ ನಾಯಿ ಸತ್ತರೂ ಅದಕ್ಕೆ ಹಾರ ಹಾಕಲು ಕರಡಿ ಹೋಗುತ್ತಾರೆಂಬ ಜೋಕ್ ಕ್ಷೇತ್ರದಲ್ಲಿ ಚಾಲ್ತಿಗೆ ಬಂದಿದೆ. ವಿರೋಧಿಗಳ ವ್ಯಂಗ್ಯ ಎಂತಹದ್ದೇ ಆಗಿದ್ದರೂ ಕರಡಿ ಅವರ ಈ 'ಸಮಾಜ ಪ್ರಜ್ಞೆ' ಅವರ ಇಲ್ಲಿಯತನಕದ ಗೆಲುವಿಗೆ ನೆರವಾಗಿದೆ ಎಂಬುದಂತೂ ದಿಟ. ಹೀಗಾಗಿ ಕೊಪ್ಪಳದಲ್ಲಿ ಬಿಜೆಪಿಯ ಅಭ್ಯರ್ಥಿಯ ಸ್ಪರ್ಧೆ ಅನ್ನುವದಕ್ಕಿಂತ ಕರಡಿಯ ವಿರುದ್ಧ ಯಾರು ಎಂಬುದೇ ಮುಖ್ಯವಾಗಿದೆ.

ಕಾಂಗ್ರೆಸ್ ಟಿಕೆಟ್ ಮೇಲೆ ಕರಡಿ ಕಣ್ಣು


ಹೇಗಿದ್ದರೂ ಈ ಬಾರಿಯ ಚುನಾವಣೆಯಲ್ಲಿ ಬಿಜೆಪಿ ಸೋಲುವುದು ಗ್ಯಾರಂಟಿ ಆಗಿರುವುದರಿಂದ ಕರಡಿ ಮತ್ತೊಮ್ಮೆ ಪಕ್ಷಾಂತರ ಮಾಡಿ ಕಾಂಗ್ರೆಸ್ ಟಿಕೆಟ್ ಪಡೆಯುವ ಇರಾದೆಯಲ್ಲಿದ್ದರು. ಅದು ಹೊರಬಿದ್ದಿದ್ದೇ ತಡ ಕೊಪ್ಪಳದ ಜನ ಎತ್ತ ಕಡೆಯಿಂದ ನಗಬೇಕೆಂದು ಗೊತ್ತಾಗದೆ ಗೊಂದಲಕ್ಕೀಡಾದರು. ಆದರೂ ಅಂತಹವರಲ್ಲಿ ಹಲವರು "ಇಲ್ಲಿಯತನಕ ಸಂಗಣ್ಣ ಕರಡಿ ಸೇರದೆ ಉಳಿದಿರುವುದು ಅದೊಂದೇ ಪಕ್ಷ. ಅಲ್ಲಿಗೂ ಹೋದರೆ ಆತನ ರಾಜಕೀಯ ಬದುಕು ಸಾರ್ಥಕವಾಗುತ್ತದೆ" ಎಂದು ಗೇಲಿ ಮಾಡಿದ್ದರು.

ಆದರೇನಂತೆ, ಅಧಿಕಾರಕ್ಕಾಗಿ, ಎಲ್ಲಿಗೆ ಬೇಕಾದರೂ ಹೋಗಬಲ್ಲ ಕರಡಿ ಮಾಜಿ ಸಂಸದ ಹೆಚ್.ಜಿ.ರಾಮುಲು ಮೂಲಕ ಕಾಂಗ್ರೆಸ್‌ಗೆ ಎಂಟ್ರಿ ಕೊಡಲು ಪ್ರಯತ್ನಿಸಿದರು. ಆದರೆ ಕರಡಿಯ ಆಶಯಕ್ಕೆ ಅಡ್ಡಿ ಆದದ್ದು ಮಾಜಿ ಶಾಸಕ ಬಸವರಾಜ ಹಿಟ್ನಾಳ ಅವರು. ಕೊಪ್ಪಳದಿಂದ ಆರು ಬಾರಿ ಕರಡಿ ವಿರುದ್ಧ ಸ್ಪರ್ಧಿಸಿರುವ ಕಾಂಗ್ರೆಸ್‌ನ ಬಸವರಾಜ ಹಿಟ್ನಾಳ ಗೆದ್ದಿದ್ದು ಒಂದೇ ಬಾರಿ.

ಈ ಬಾರಿಯ ಚುನಾವಣೆಯಲ್ಲಿ ತನ್ನ ಪುತ್ರ ಹಾಲಿ ಜಿಪಂ ಅಧ್ಯಕ್ಷ ರಾಘವೇಂದ್ರ ಹಿಟ್ನಾಳನನ್ನು ಕಣಕ್ಕಿಳಿಸುವ ಇರಾದೆಯಲ್ಲಿದ್ದಾರೆ ಬಸವರಾಜ್ ಹಿಟ್ನಾಳ.ಒಂದು ಆಶಾಕಿರಣವನ್ನು ಕಾಂಗ್ರೆಸ್ ನಂಬಿಕೊಂಡಿದೆ. ಅದೇನೆಂದರೆ, ಇತ್ತೀಚಿಗಿನ ನಗರಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಜನರ ಬೆಂಬಲವನ್ನು ಪಡೆದಿರುವುದು. ಆದರೆ ಸ್ಥಳೀಯರ ಪ್ರಕಾರ ಆ ಚುನಾವಣೆಗಳ ಫಲಿತಾಂಶ ಕಾಂಗ್ರೆಸ್ ಅಭ್ಯರ್ಥಿಯ ಠೇವಣಿಯನ್ನು ಉಳಿಸಬಹುದಷ್ಟೆ.

ಜೆಡಿಎಸ್‌ನಿಂದ ಪ್ರದೀಪಗೌಡ

ಕರಡಿ ಜೆಡಿಎಸ್‌ಗೆ ಗುಡ್ ಬೈ ಹೇಳಿದ ನಂತರ ಇಲ್ಲಿ ಆ ಪಕ್ಷ ಉಳಿಯುವುದೇ ಡೌಟು ಎಂದು ಜನ ಭಾವಿಸಿದ್ದರು. ಆದರೂ ಕೊಪ್ಪಳದಲ್ಲಿ 'ತೆನೆ ಹೊತ್ತ ಮಹಿಳೆ' ಇನ್ನೂ ಉಸಿರಾಡುತ್ತಿದ್ದಾಳೆ. ಇದಕ್ಕೆ ಕಾರಣ ಕರಡಿ ಜೆಡಿಎಸ್ ಅನ್ನು ತೊರೆದಿದ್ದರೂ ಇಲ್ಲಿರುವ ಆ ಪಕ್ಷದ ಕಾರ್ಯಕರ್ತರು ತಮ್ಮ ನಿಷ್ಠೆಯನ್ನು ಬದಲಾಯಿಸದೇ ಇರುವುದು. ಅಷ್ಟೇ ಅಲ್ಲ, ಕರಡಿಯ ಪಲಾಯನದಿಂದ ಸ್ಥಳೀಯ



ಕರಡಿ

ಜೆಡಿಎಸ್‌ನಲ್ಲಿರುವ ಎರಡನೇ ಹಂತದ ಲೀಡರ್‌ಗಳಿಗೆ ಪ್ರಮೋಷನ್ ಸಿಕ್ಕಿದೆ. ಕರಡಿ ಜೆಡಿಎಸ್‌ಗೆ ದ್ರೋಹ ಬಗೆದು ಬಿಜೆಪಿ ಸೇರಿದಾಗ ಸಂಭವಿಸಿದ ಉಪ ಚುನಾವಣೆಯಲ್ಲಿ ಕರಡಿ ವಿರುದ್ಧ ಜೆಡಿಎಸ್ ವತಿಯಿಂದ ಮಾಜಿ ಶಾಸಕ ವಿರುಪಾಕ್ಷ ಗೌಡರ ಮಗ ಪ್ರದೀಪ ಗೌಡ ಸ್ಪರ್ಧಿಸಿದ್ದರು. ಆಗ ಕರಡಿಯನ್ನು ಸೋಲಿಸುವ ಏಕೈಕ ಅಭ್ಯರ್ಥಿಯೆಂದು ಪ್ರಚಾರ ಗಿಟ್ಟಿಸಿಕೊಂಡಿದ್ದ ಪ್ರದೀಪ ಗೌಡ 22 ಸಾವಿರ ಮತ ಪಡೆದು ಸೋತರಲ್ಲದೆ ಆನಂತರ ಕ್ಷೇತ್ರದಲ್ಲಿ ಕಾಣಿಸಿಕೊಂಡಿದ್ದು ಅಪರೂಪ. ಕೆಜೆಪಿಯಿಂದ ಕೆ.ಎಂ.ಸಯ್ಯದ್ ಕಣಕ್ಕಿಳಿಯಬಹುದು. ಈತ ಕೂಡ ಕರಡಿ ಸಂಗಣ್ಣನ ಆಪ್ತವಲಯದವನು ಎಂದು ಹೇಳಲಾಗುತ್ತಿದೆ. ತನ್ನ ಗೆಲುವಿನ ಓಟಕ್ಕೆ ನೆರವಾಗಲೆಂದು ಕರಡಿ ಕೆಜೆಪಿಯ ನಾಯಕ ಯಡಿಯೂರಪ್ಪನೊಂದಿಗೆ ಹೊಂದಾಣಿಕೆ ಮಾಡಿಕೊಂಡಿರುವ ಮಾತುಗಳು ಕೇಳಿಬರುತ್ತಿವೆ.

ಒಟ್ಟಿನಲ್ಲಿ ಕೊಪ್ಪಳದ ಚುನಾವಣಾ ಅಖಾಡ ದಿನಕಳೆದಂತೆ ರಂಗೇರುತ್ತಿದೆ. ಕ್ಷೇತ್ರ ಅಭಿವೃದ್ಧಿ ಕಾಣದೆ ಗಬ್ಬುನಾರುತ್ತಿದ್ದರೂ, ಇದರತ್ತ ಗಮನ ಹರಿಸದ ರಾಜಕಾರಣಿಗಳನ್ನು ಜನ ಗೆಲ್ಲಿಸುತ್ತಿರುವುದು ಪ್ರಜಾಪ್ರಭುತ್ವದ ಅಣಕದಂತಿದೆ.

● ಹುರಳಿಕುಪ್ಪಿ ವಿನಯ


…ಂದಗೋಳ: ವಲಸೆ ಹಕ್ಕಿ ಚಿಕ್ಕನಗೌಡರಿಗೆ ಸೋಲು?

…ಯಡಿಯೂರಪ್ಪನವರ ಬೀಗ …ಂ.ಚಿಕ್ಕನಗೌಡರ ಕಮಲದಿಂದ ಜಿಗಿದು ಕೆಜೆಪಿ …ಯಾಗಿದೆ. ಖಾರದ ಮೆಣಸಿನಕಾಯಿ ಬೆಳೆಯುವ …ಗೋಳದ ರೈತರು ಚಿಕ್ಕನಗೌಡರಿಗೆ …ಸಿನಕಾಯಿ ತಿನ್ನಿಸಲು ತಯಾರಿ ನಡೆಸಿದ್ದಾರೆ. … ಗಿರಾಕಿ ಎನಿಸಿಕೊಂಡಿರುವ ಚಿಕ್ಕನಗೌಡರ ಪಕ್ಷ …ನಾವಣೆಯಲ್ಲಿ ಮಾತ್ರವಲ್ಲ ಕ್ಷೇತ್ರ ಬದಲಾವಣೆ …ನ್ನೂ ಎತ್ತಿದ ಕೈ ಎನಿಸಿಕೊಂಡಿರುವ ಆಸಾಮಿ.


…1994ರಿಂದ 2004ರವರೆಗೆ ಕಲಘಟಗಿ …ನಸಭಾ ಕ್ಷೇತ್ರವನ್ನು ಎರಡು ಬಾರಿ ಬಿಜೆಪಿಯಿಂದ …ಧಿಸಿದ ಚಿಕ್ಕನಗೌಡರಿಗೆ ಮುಂದಿನ ಬಾರಿ …ದ ತಾನು ಗೆಲ್ಲುವುದಿಲ್ಲ ಎಂದು …ವಾಯಿತು. ಆಗ ಕುಂದಗೋಳಕ್ಕೆ ಎಂಟ್ರಿ ಕೊಟ್ಟ …ಮನುಷ್ಯ "ನಾನು ನಿಮ್ಮೂರಿನವ" ಎಂದು …ದಾರರ ಮುಂದೆ ಕೈ ಮುಗಿದು ಮತ್ತೆ ಆರಿಸಿ …ದ್ದರು. ಭಿನ್ನಮತೀಯ ಚಟುವಟಿಕೆಯಿಂದ …ಸಿದ್ದ ಯಡ್ಡಿಯನ್ನು ಬೆಂಬಲಿಸಿದ್ದಕ್ಕೆ ಈತನಿಗೆ … ಗೂಟದ ಕಾರನ್ನು ದಯಪಾಲಿಸಿದ್ದರು.

…ಅಷ್ಟು ಸಾಲದೆಂಬಂತೆ ಯಡ್ಡಿಯ ಕುಟುಂಬಕ್ಕೆ …ಮಗಳನ್ನು ಧಾರೆಯೆರೆದು ಕೊಡುವ ಮೂಲಕ …ರಾಜಕೀಯ ದಾರಿಯನ್ನು …ಮಗೊಳಿಸಿಕೊಂಡರು. ಕುಂದಗೋಳ ಕ್ಷೇತ್ರದಲ್ಲಿ … ಕಾಮಗಾರಿಗಳಲ್ಲಿ ಕಮೀಷನ್ ಪಡೆಯಲು ತನ್ನ …ಯ ಮಾಜಿ ಜಿಲ್ಲಾ ಪಂಚಾಯತಿ ಸದಸ್ಯ ಗದಿಗೆಪ್ಪ …ಮನಿಯನ್ನು ನೇಮಿಸಿದ. ಜೊತೆಗೆ ಧಾರವಾಡ … ಪಂಚಾಯತಿಗೂ ಇದೇ ಗದಿಗೆಪ್ಪ ಕಳ್ಳಿಮನಿಯ …ತಿ ರತ್ನವ್ವ ಕಳ್ಳಿಮನಿಯನ್ನು ಅಧ್ಯಕ್ಷೆಯನ್ನಾಗಿ …ಸಿ ಅಲ್ಲೂ ಪರ್ಸೆಂಟೇಜ್ ಪರಾಕ್ರಮವನ್ನು …ಂಭಿಸಿದ.


…ಈತ ಕ್ಷೇತ್ರಕ್ಕೆ ಮಾಡಿದ ಮಹದುಪಕಾರವನ್ನು …ೇ ಈ ಬಾರಿ ಆತನಿಗೆ ಮೆಣಸಿನಕಾಯಿ ರುಚಿಯನ್ನು ತೋರಿಸಲು ಕುಂದಗೋಳ ಮತದಾರರು ಸಜ್ಜಾಗಿದ್ದಾರೆ. ಇದೇ ಕ್ಷೇತ್ರದ ಕಮಡೊಳ್ಳಿ ಗ್ರಾಮದವರಾಗಿದ್ದ ಮಾಜಿ ಮುಖ್ಯಮಂತ್ರಿ ದಿ. ಎಸ್.ಆರ್.ಬೊಮ್ಮಾಯಿಯವರನ್ನೇ ಎರಡು ಬಾರಿ ಗೆಲ್ಲಿಸಿ ಎರಡು ಬಾರಿ ಸೋಲಿಸಿದ್ದ ಈ ಕ್ಷೇತ್ರದ ಮತದಾರರಿಗೆ ಈ ಚಿಕ್ಕನಗೌಡರ ಯಾವ ಲೆಕ್ಕ!




ಚಿಕ್ಕನ ಗೌಡರ



ಶಿವಳ್ಳಿ



ಆರ್.ಎಂ.ಪಾಟೀಲ್



ಅಕ್ಕಿ

ಈ ಕ್ಷೇತ್ರದಲ್ಲಿ ಲಿಂಗಾಯತ ಹಾಗು ಕುರುಬ ಜನಾಂಗದ ಮತಗಳು ಸಮಬಲದಲ್ಲಿದ್ದು ಮುಸ್ಲಿಂ ಮತಗಳು ನಿರ್ಣಾಯಕ ಪಾತ್ರ ವಹಿಸುತ್ತವೆ. ಈ ಬಾರಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಲು ಕುರುಬ ಸಮಾಜದ ಹಾಗು ಸಿದ್ದರಾಮಯ್ಯನವರ ಬೆಂಬಲಿಗ ಗ್ರಾಮೀಣ ಕಾಂಗ್ರೆಸ್ ಅಧ್ಯಕ್ಷ ಸಿ.ಎಸ್.ಶಿವಳ್ಳಿ ಸಿದ್ದರಾಮಯ್ಯನವರ ಹಿಂದೆ ಟಿಕೆಟ್‌ಗಾಗಿ ಓಡಾಡುತ್ತಿದ್ದಾನೆ. ಕಳೆದ ಬಾರಿ ಚಿಕ್ಕನಗೌಡರನ ವಿರುದ್ಧ ಕಡಿಮೆ ಅಂತರದಲ್ಲಿ ಸೋತಿದ್ದ ಶಿವಳ್ಳಿ ಮೊನ್ನೆ ನಡೆದ ಲೋಕಲ್ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಗೆಲ್ಲುವಂತೆ ಮಾಡಿದ್ದಾರೆ.

ಈ ಹಿಂದೆ ಕಾಂಗ್ರೆಸ್‌ನ ಭದ್ರಕೋಟೆ ಎಂದೇ ಪರಿಗಣಿಸಲ್ಪಟ್ಟಿದ್ದ ಕುಂದಗೋಳ ಕ್ಷೇತ್ರ 1994ರಲ್ಲಿ ಬಸವರಾಜ್ ಬೊಮ್ಮಾಯಿ ಶಿಷ್ಯನಾದ ಎಂ.ಎಸ್.ಅಕ್ಕಿಯನ್ನು ಆರಿಸುವ ಮೂಲಕ ಇಲ್ಲಿ ಜೆಡಿಯು ಖಾತೆ ತೆರೆಯುವಂತೆ ಮಾಡಿತ್ತು, ಬಸು ಬೊಮ್ಮಾಯಿ ಆಶೀರ್ವಾದದೊಂದಿಗೆ ಆರಿಸಿಬಂದಿದ್ದ ಅಕ್ಕಿ ಈಗ ಬೊಮ್ಮಾಯಿಗೆ ಟಾಂಗ್ ಕೊಟ್ಟು ಜೆಡಿಎಸ್ ಸೇರಿ ಆ ಪಕ್ಷದ ಅಭ್ಯರ್ಥಿಯಾಗಿದ್ದಾರೆ. ಇದೇ ಹೊತ್ತಿಗೆ ಬಸು ಬೊಮ್ಮಾಯಿ ಪಾಲಿಗೂ ಇತರೆ ಎಲ್ಲಾ ಪಕ್ಷಗಳ ಬಾಗಿಲುಗಳು ಮುಚ್ಚಿರುವುದರಿಂದ ಹಳೇ ಗಂಡನ ಪಾದವೇ ಗತಿ ಎಂದು ಕಮಲದ ಕೆಸರಿನಲ್ಲೇ ಮುಳುಗಿರಲು ಬಸು ನಿರ್ಧರಿಸಿದ್ದಾರೆ.

ಹಿಂದಿನ ಚುನಾವಣೆ ಸಂದರ್ಭದಲ್ಲಿ ಬಿಜೆಪಿಯಿಂದ ಸ್ಪರ್ಧಿಸಲು ತಾಲ್ಲೂಕು ಬಿಜೆಪಿ ಅಧ್ಯಕ್ಷನಾದ ಎಂ.ಆರ್.ಪಾಟೀಲ ಸಜ್ಜಾಗಿದ್ದ. ಆದರೆ ಬಿಜೆಪಿಗೆ ಹಾರಿ ಬಂದಿದ್ದ ವಲಸೆ ಹಕ್ಕಿ ಚಿಕ್ಕನಗೌಡರ "ಮುಂದಿನ ಬಾರಿ ನಾನು ಸ್ಪರ್ಧಿಸುವದಿಲ್ಲ, ಕ್ಷೇತ್ರವನ್ನು ನಿನಗೆ ಬಿಟ್ಟು ಕೊಡುತ್ತೇನೆ" ಎಂದು ನಂಬಿಸಿ ಬಿಜೆಪಿ ಟಿಕೆಟ್‌ಅನ್ನು ಗಿಟ್ಟಿಸಿದ್ದ. ಈಗ ನೋಡಿದರೆ ಇದೇ ಚಿಕ್ಕನಗೌಡರ ಕೆಜೆಪಿಯಿಂದ ಸ್ಪರ್ಧೆಗೆ ಇಳಿದಿದ್ದಾನೆ. ಈ ಕಾರಣಕ್ಕೆ "ನಾನು ಸೋತರೂ ಪರವಾಗಿಲ್ಲ, ಚಿಕ್ಕನಗೌಡರ ಮಾತ್ರ ಗೆಲ್ಲಬಾರದು" ಎಂದು ಹಟ ತೊಟ್ಟಿರುವ ಪಾಟೀಲ ಕ್ಷೇತ್ರದ ತುಂಬಾ ಸಂಚರಿಸುತ್ತಿದ್ದಾನೆ.

ಈ ಬಾರಿ ಜೆಡಿಎಸ್‌ನ ಅಕ್ಕಿ, ಕಾಂಗ್ರೆಸ್‌ನ ಸಿ.ಎಸ್.ಶಿವಳ್ಳಿ, ಬಿಜೆಪಿಯ ಎಂ.ಆರ್.ಪಾಟೀಲ ಮತ್ತು ಕೆಜೆಪಿಯ ಚಿಕ್ಕನಗೌಡರ ನಡುವೆ ಮಾರಮಾರಿ ನಡೆಯಲಿದೆ.

● ವರದಿಗಾರ


…ಲಘಟಗಿಗೆ ಲಾಡ್‌ನ ಪಾರುಪತ್ಯ

…ಧಾರವಾಡ ಜಿಲ್ಲೆಯ ಕಲಘಟಗಿ ವಿಧಾನಸಭಾ … ಒಂದು ರೀತಿಯಲ್ಲಿ ವಿಚಿತ್ರವೂ, ವಿಶಿಷ್ಟವೂ … ಕ್ಷೇತ್ರ. ಇಲ್ಲಿನ ಮತದಾರರು ಮೊದಲಿನಿಂದಲೂ …ನಾವಣೆಗಳಲ್ಲಿ ಅಭ್ಯರ್ಥಿಗಳ ಜಾತಿ, ಸಮುದಾಯ …ದಿಗಳಿಗೆ ಮನ್ನಣೆ ನೀಡಿದವರಲ್ಲ. ಅಷ್ಟೇ ಅಲ್ಲ, …ರ ಸ್ಥಳೀಯರೋ, ಹೊರಗಿನವರೋ ಎಂದು …ಡಿದವರೂ ಅಲ್ಲ. ಉದಾಹರಣೆಗೆ 1957ರಿಂದ …ಯುವರೆಗೆ 12 ಸಾರ್ವತ್ರಿಕ ಚುನಾವಣೆಗಳು …ದಿದ್ದು ಕೇವಲ ಎರಡು ಬಾರಿ ಮಾತ್ರ ಸ್ಥಳೀಯರು …ಯ್ಕೆಯಾಗಿದ್ದಾರೆ.


…ಲಿಂಗಾಯತರು, ಮರಾಠರು ಮತ್ತು ಮುಸ್ಲಿಂರು … ಪ್ರಮಾಣದಲ್ಲಿರುವ ಈ ಕ್ಷೇತ್ರದಲ್ಲಿ …ನ್ಯವಾಸಿಗಳಾದ ಸಿದ್ದಿ ಹಾಗೂ ಗೌಳಿ …ಂಗದವರೂ ಗಮನಾರ್ಹ ಸಂಖ್ಯೆಯಲ್ಲಿದ್ದು ಇವರ …ಗಳು ನಿರ್ಣಾಯಕ ಪಾತ್ರ ವಹಿಸುತ್ತವೆ.

… 1985ರಲ್ಲಿ ಮೊದಲ ಬಾರಿಗೆ ಜನತಾದಳದಿಂದ …ಸಿದ ಪಿ.ಸಿ. ಸಿದ್ದನಗೌಡರ ಆನಂತರ ಮೂರು …ಿ ಆಯ್ಕೆಯಾಗಿದ್ದರಲ್ಲದೆ ಜೆ.ಹೆಚ್.ಪಟೇಲರ …ಾರದಲ್ಲಿ ಮಂತ್ರಿಯಾಗಿದ್ದರು. ಆದರೆ ಅಧಿಕಾರ …ನಂತರ ಜಾತಿ ಪ್ರೇಮ ಮೆರೆದು ಹೆಸರು …ಸಿಕೊಂಡರು. ರಾಣೆಬೆನ್ನೂರ ಹತ್ತಿರ ಹತ್ತಿ ಗಿರಣಿ …ಸುತ್ತೇನೆಂದು ಹೇಳಿ ರೈತರಿಂದ ಷೇರು ಹಣ …ಗ್ರಹಿಸಿ ಪಂಗನಾಮ ಹಾಕಿದರು. ಇದೆಲ್ಲದರಿಂದ …ೇಸಿಹೋದ ಕ್ಷೇತ್ರದ ಜನ ಇವರಿಗೆ ಗೇಟ್‌ಪಾಸ್ …ಿದರು. ಆದರೂ ಈ ಬಾರಿ ಮತ್ತೆ ಜೆಡಿಎಸ್‌ನಿಂದ …ರ್ಧಿಸುವ ತಯಾರಿ ನಡೆಸಿದ್ದಾರೆ ಸಿದ್ದನಗೌಡರು. …ಕ್ಕೆಂದು ತಮ್ಮ ಸ್ವಜಾತಿ ಪಂಚಮಸಾಲಿ …ಗಾಯತರನ್ನೇ ಟ್ರಂಪ್ ಕಾರ್ಡ್ ಆಗಿ ಬಳಸಲು …ಮುದಿಟ್ಟುಕೊಂಡಿದ್ದಾರೆ.

1999 ಹಾಗೂ 2004ರ ಚುನಾವಣೆಯಲ್ಲಿ …ಸಿ.ಸಿದ್ದನಗೌಡರು ಕೆಳಗಿಳಿದು ಅವರ ಬೀಗರಾದ …ಸ್.ಚಿಕ್ಕನಗೌಡರ ಬಿಜೆಪಿಯಿಂದ ಆಯ್ಕೆಗೊಂಡಿದ್ದರು. …ದರಿಂದ ಕ್ಷೇತ್ರಕ್ಕೆ ಆದ ಲಾಭಕ್ಕಿಂತ ಲುಕ್ಸಾನೆ ಹೆಚ್ಚು. …ವರ ಅಧಿಕಾರಾವಧಿಯಲ್ಲಿ ಕಾಮಗಾರಿ ಆಗಿದ್ದಕಿಂತ …ಮಿಷನ್ ಪಹಿಂಪಾಟು ನಡೆದದ್ದೇ ಹೆಚ್ಚು. ಆದ್ದರಿಂದ …ಲ್ಲಿ ಮತ್ತೆ ಗೆಲ್ಲುವುದು ಅಸಾಧ್ಯ ಎಂದು …ಕ್ಕನಗೌಡರಿಗೆ ಅರ್ಥವಾಯಿತು. ಆದಕ್ಕೆ ಸರಿಯಾಗಿ …ಲಘಟಗಿ ಕ್ಷೇತ್ರದಿಂದ ಹುಬ್ಬಳ್ಳಿ ತಾಲ್ಲೂಕಿನ ಹಳ್ಳಿಗಳನ್ನು ತೆಗೆದು ಕುಂದಗೋಳ ಮತಕ್ಷೇತ್ರಕ್ಕೆ ವರ್ಗಾಯಿಸಲಾಯಿತೋ ಆಗ ಚಿಕ್ಕನಗೌಡರು ಇಲ್ಲಿಂದ ಗಂಟುಮೂಟೆ ಕಟ್ಟಿದರು. ಚಿಕ್ಕನಗೌಡರ ಮತ್ತು ಸಿದ್ದನಗೌಡರ ತಮ್ಮ ರಾಜಕೀಯವನ್ನು ಕುಂದಗೋಳ ವಿಧಾನಸಭಾ ಕ್ಷೇತ್ರಕ್ಕೆ ವರ್ಗಾಯಿಸಿದರು. ಈ ಮಧ್ಯೆ ಚಿಕ್ಕನಗೌಡರ ಯಡಿಯೂರಪ್ಪನ ಕುಟುಂಬದೊಂದಿಗೆ ಸಂಬಂಧ ಬೆಳೆಸಿದರು.



ಸಂತೋಷ್ ಲಾಡ್



ಸಿ.ಎಂ.ನಿಂಬಣ್ಣವರ್



ಸಿದ್ದನಗೌಡರ

2008ರ ಚುನಾವಣೆಗೆ ಮುನ್ನ ಬಳ್ಳಾರಿಯ ಗಣಿ ಧಣಿ ಸಂತೋಷ ಲಾಡ್ ಕಲಘಟಗಿಗೆ ಎಂಟ್ರಿ ಕೊಟ್ಟಿದ್ದು ಸಂತೋಷ ತಂದಿತು. ಅದಕ್ಕೆ ಕಾರಣವೂ ಸಿಕ್ತು. ಕೃಷಿ ಪ್ರಧಾನವಾದ ಈ ಕ್ಷೇತ್ರದ ಪರಿಚಯವನ್ನು ಲಾಡ್ ಒಂದು ವರ್ಷದ ಮುನ್ನವೇ ಪ್ರಾರಂಭಿಸಿದ್ದರು. ಈ ಕ್ಷೇತ್ರ ಸುಮಾರು 460 ಕೆರೆಗಳನ್ನು ಹೊಂದಿದ್ದರೂ ಇಲ್ಲಿ ಬಡತನ ಹಾಸಿ ಹೊದ್ದಿತ್ತು. ಆಗ ಸಂತೋಷ್ ಲಾಡ್ ತಮ್ಮ ಕೈಯಿಂದ ರೈತರಿಗೆ ನೆರವು ನೀಡಲು ಮುಂದಾದರು. 141 ಹಳ್ಳಿಗಳಲ್ಲಿ ಸಾವಿರಾರು ಸಂಖ್ಯೆಯಲ್ಲಿ ತನ್ನದೇ ಹಣದಲ್ಲಿ ಬೋರ್‌ವೆಲ್ ಕೊರೆಸಿದರು. ಐದು ಜೆಸಿಬಿ ಯಂತ್ರಗಳನ್ನು ಕಳುಹಿಸಿ ಭೂಮಿಯನ್ನು ಸಮತಟ್ಟು ಮಾಡಿಸಿದರು. ತಮ್ಮ ನಂಬಿಗಸ್ಥರಾದ ಹರೀಶ ಮತ್ತು ಗಾಯಕವಾಡನನ್ನು ಕ್ಷೇತ್ರದ ಕೆಲಸಕ್ಕೆ ನಿಯೋಜಿಸಿದರು. ಜನರ ಹತ್ತಿರ ಇರಬೇಕೆಂದು ಕಲಘಟಗಿಯಲ್ಲಿ ಒಂದು ಮನೆ ಖರೀದಿಸಿದರು. ಅಲ್ಲಿತನಕ ಬರೀ ನುಂಗಣ್ಣಗಳನ್ನು ನೋಡಿದ್ದ ಕಲಘಟಗಿಯ ಜನರಿಗೆ ಸಂತೋಷ್ ಲಾಡ್ ಭರವಸೆಯ ನಾಯಕರಾಗಿ ಕಂಡರು. ಆದ್ದರಿಂದ ಅವರನ್ನು ಕಳೆದ ಬಾರಿ ಗೆಲ್ಲಿಸಿ ವಿಧಾನಸಭೆಗೆ ಕಳುಹಿಸಿದ್ದರು.

ಈಗ ಜೆಡಿಎಸ್ ಬಾವುಟ ಹಿಡಿದು ಕಲಘಟಗಿ ಕ್ಷೇತ್ರಕ್ಕೆ ರೀಎಂಟ್ರಿ ಕೊಡಲು ನೋಡುತ್ತಿರುವ ಸಿದ್ದನಗೌಡರಿಗೆ ಸಂತೋಷ್ ಲಾಡ್‌ರ ಜನಪ್ರಿಯತೆ ಎದುರು ಗೆಲ್ಲಲಾಗುವುದಿಲ್ಲ ಎಂದು ಅರಿವಾಗಿದೆ. ಆದ್ದರಿಂದಲೇ ಲಾಡ್ ವಿರುದ್ಧ ಇಲ್ಲಸಲ್ಲದ ಆರೋಪಗಳನ್ನು ಮಾಡಹತ್ತಿದ್ದಾನೆ. ಹಾಗೆಯೇ ಈಗ ಬಿಜೆಪಿ ತೊರೆದು ಯಡ್ಡಿಯ ಕೆಜೆಪಿ ಸೇರಿರುವ ಸಿ.ಎಂ. ಲಿಂಬಣ್ಣವರ ಎಂಬಾತ ಲಾಡ್‌ನ ಮುಖಕ್ಕೆ ಕೆಸರು ಎರಚಲು ಹೋಗಿ ತನ್ನ ಮುಖಕ್ಕೇ ಹಚ್ಚಿಕೊಂಡಿದ್ದಾನೆ.

ಬೇರೆಕಡೆಯಿಂದ ವಲಸೆ ಬಂದಿರುವ ಲಾಡ್ ಜನರ ಕೈಗೆ ಸಿಗುವುದಿಲ್ಲ ಎಂಬ ಇವರ ಆರೋಪಗಳಿಗೆ ಉತ್ತರವಾಗಿ ಲಾಡ್ ಮೊನ್ನೆ ನಡೆದ ಕಲಘಟಗಿ ತಾಲ್ಲೂಕು ಪಂಚಾಯತಿ ಚುನಾವಣೆಯಲ್ಲಿ ಕಾಂಗ್ರೆಸ್ಸಿಗರನ್ನು ಗೆಲ್ಲಿಸಿ ಅಧಿಕಾರಕ್ಕೆ ತಂದಿದ್ದಾರೆ. ಆ ಮೂಲಕ ತನ್ನ ವಿರೋಧಿಗಳ ಬಾಯಿ ಮುಚ್ಚಿಸಿದ್ದಾರೆ.

ಬಿಸಿರಕ್ತದ ಯುವಕ ಬಸವರಾಜ ಮುತ್ತಗಿ ಎಂಬಾತ ಶ್ರೀರಾಮುಲುವಿನ ಬಿಎಸ್‌ಆರ್ ಕಾಂಗ್ರೆಸ್‌ನಿಂದ ಸ್ಪರ್ಧಿಸುವ ಉಮೇದಿನಲ್ಲಿದ್ದಾನೆ. ಇವನನ್ನು ತಡೆಯಲು ಕೆಜೆಪಿಯ ನಿಂಬಣ್ಣವರ ಹವಣಿಸುತಿದ್ದಾನೆ. ಕೆಲವು ತಿಂಗಳು ಹಿಂದೆ ನಡೆದ ವಾಲ್ಮೀಕಿ ಜನಾಂಗದ ಮುಖಂಡ ಮಂಜುನಾಥ ರೊಟ್ಟಿಗವಾಡನ ಕೊಲೆ ಪ್ರಕರಣದಲ್ಲಿ ಮುತ್ತಗಿಯನ್ನು ಫಿಟ್ ಮಾಡಿ ಜೈಲಿಗೆ ಅಟ್ಟಲು ನಿಂಬಣ್ಣವರ ತಯಾರಿ ನಡೆಸಿ ನಗೆಪಾಟಲಿಗೀಡಾಗಿದ್ದಾನೆ. ಕಳೆದ ಐದು ವರ್ಷಗಳಿಂದ ರಾಜ್ಯದಲ್ಲಿ ಅಧಿಕಾರ ನಡೆಸಿರುವ ಬಿಜೆಪಿಗೆ ಈ ಕ್ಷೇತ್ರದಲ್ಲಿ ಅಭ್ಯರ್ಥಿಗಳ ಬರ ಆರಂಭವಾಗಿದೆ.

ಸಂತೋಷ್ ಲಾಡ್ ತನ್ನ ಕ್ಷೇತ್ರದ ಜನತೆಗೆ ಸಾಮೂಹಿಕ ವಿಮಾ, ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಬಸ್ ಪಾಸ್, ಅಳ್ನಾವರ ಮತ್ತು ಕಲಘಟಗಿಯಲ್ಲಿ ಹತ್ತು ಪೈಸೆಗೆ ಒಂದು ಲೀಟರ್ ಮಿನರಲ್ ವಾಟರ್, ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್, ಹೆಣ್ಣುಮಕ್ಕಳಿಗೆ ಕಂಪ್ಯೂಟರ್ ತರಬೇತಿ, ಜೊತೆಗೆ ರೈತರ ಜಮೀನಿನಲ್ಲಿ ಬೋರ್ ವೆಲ್ ಕೊರೆಸಿದ್ದು- ಇವೆಲ್ಲ ಅವರನ್ನು ಮತ್ತೆ ಗೆಲ್ಲಿಸಲಿವೆ.

● ಹುಬ್ಬಳ್ಳಿಯಾಂವ

ಯಡ್ಡಿ ಸಾಕಿದ ಇಬ್ಬರೂ ಸರ್ಪವಾದರು



ದುಡ್ಡು ಆಸ್ತಿ ಅಧಿಕಾರದ ಮುಂದೆ ನಿಯತ್ತು ಬೆಲೆ ಬಾಳುವುದಿಲ್ಲ. ರಾಜಕಾರಣದಲ್ಲಂತೂ ಮನುಷ್ಯತ್ವ, ಸಿದ್ಧಾಂತ, ಆದರ್ಶಕ್ಕಿಂತಲೂ ಕಾಂಚಾಣದ ಲೀಲೆಯೇ ಮೆರೆದು ಬಿಡುತ್ತದೆ. ಇನ್ನು ಕೆಜೆಪಿ ಅಧಿಪತಿ ಯಡಿಯೂರಪ್ಪ ಏನು ಯಡಿಯೂರು ಸಿದ್ದಲಿಂಗೇಶ್ವರರಲ್ಲವಲ್ಲ?

ಉತ್ತರ ಕರ್ನಾಟಕದ ಮಟ್ಟಿಗೆ ಯಡ್ಡಿ ಪಾಲಿನ ಡಾರ್ಕ್‌ಹಾರ್ಸ್‌ಗಳೆಂದೇ ನಿರೀಕ್ಷೆಯಿದ್ದದ್ದು ಇಬ್ಬರ ಮೇಲೆ. ಒಬ್ಬರು ಬೃಹತ್ ಕೈಗಾರಿಕಾ ಮಂತ್ರಿ ಮುರುಗೇಶ್ ನಿರಾಣಿಯಾದರೆ ಮತ್ತೊಬ್ಬರು ಕೃಷಿ ಸಚಿವ ಉಮೇಶ್ ಕತ್ತಿ. ಯಾಗದ ಕುದುರೆಗಳಂತಿದ್ದ ಇವರಿಬ್ಬರೂ ಕೊನೇಗಳಿಗೆಯಲ್ಲಿ ಯಡ್ಡಿಯ ಬೆನ್ನಿಗಿರಿದಿದ್ದಾರೆ.

ಉದಾಸಿ, ಕರಂದ್ಲಾಜೆ, ರೇಣುಕಾಚಾರ್ಯ, ಸೋಮಣ್ಣ, ಬೊಮ್ಮಾಯಿ ಇತ್ಯಾದಿ ಯಡ್ಡಿ ನಿಷ್ಠ ಬಿಜೆಪಿ ಮಂತ್ರಿಗಳ ಸಾಲಿನಲ್ಲಿ ಕತ್ತಿ ಮತ್ತು ನಿರಾಣಿ ಹೆಸರಿಗಿರುವ ವಜನ್ನೇ ಬೇರೆಯದು. ಭೂಮಿ ತಲೆಕೆಳಗಾದರೂ ಅವರಿಗೆ ಯಡ್ಡಿ ಮೇಲಿರುವ ನಿಷ್ಠೆ ಕುಂದಲಾರದೆಂದೇ ಇಡೀ ಉತ್ತರ ಕರ್ನಾಟಕ ಭಾವಿಸಿತ್ತು. ಇಂಥವರನ್ನೆಲ್ಲ ನಂಬಿ ತಾನೇ ಯಡ್ಡಿ ಬಿಜೆಪಿಗೆ ಸೆಡ್ಡು ಹೊಡೆದು ತನ್ನದೇ ಪ್ರತ್ಯೇಕ ಪಕ್ಷ ಸ್ಥಾಪಿಸಿದ್ದು?

ಬಿಜೆಪಿ ಮತ್ತೆಂದೂ ರಾಜ್ಯದಲ್ಲಿ ಅಧಿಕಾರಕ್ಕೆ ಬರುವುದಿಲ್ಲವೆಂಬುದು ಗೊತ್ತಿದ್ದೂ ತಮ್ಮನ್ನು ಬಿಜೆಪಿಗೆ ಕರೆತಂದು, ಗೆಲ್ಲಿಸಿ, ಮಂತ್ರಿ ಮಾಡಿ, ಕೋಟಿಗಟ್ಟಲೆ ಕಮಾಯಿಸುವುದಕ್ಕೂ ವ್ಯವಸ್ಥೆ ಮಾಡಿಕೊಟ್ಟ ಯಡ್ಡಿಯನ್ನು ಕೊನೇ ಕ್ಷಣದಲ್ಲಿ ಕೈಬಿಟ್ಟು ಆಗುವ ಲಾಭ ಅಷ್ಟಕ್ಕಷ್ಟೆ. ಹಾಗಿದ್ದೂ ಏಕೆ ತಮ್ಮ ಜನ್ಮೋದ್ಧಾರಕನ ಬೆನ್ನಿಗಿರಿಯುತ್ತಿದ್ದಾರೆ?

ರಾಜಕಾರಣದ ವಿಪರ್ಯಾಸವೇ ಅಂಥಾದ್ದು. ಯಡಿಯೂರಪ್ಪ ಕೆಜೆಪಿ ಹುಟ್ಟುಹಾಕುತ್ತಾರೆಂದು ಮೊದಲು ಘೋಷಣೆ ಮಾಡಿದ್ದೇ ಉಮೇಶ್ ಕತ್ತಿ. ಆ ನಂತರವಷ್ಟೇ ನಿರಾಣಿ ಯಡ್ಡಿಯ ಪಕ್ಷದ ಬಗ್ಗೆ ಗುಣಗಾನ ಶುರುವಿಟ್ಟಿದ್ದು. ಕೆಜೆಪಿ ಬಗ್ಗೆ ಕರಂದ್ಲಾಜೆ, ರೇಣುಕಾಚಾರ್ಯ, ಸೋಮಣ್ಣ, ಬೊಮ್ಮಾಯಿಗಿಂತಲೂ ಹೆಚ್ಚು ಬೊಬ್ಬೆ ಹೊಡೆದ ಭಟ್ಟಂಗಿಗಳಿಬ್ಬರೂ ಗುರುವನ್ನು ನಡುನೀರಲ್ಲಿ ಕೈಬಿಟ್ಟು ಜಾರಿಕೊಂಡಿದ್ದಾದರೂ ಏಕೆ?

ನಿರಾಣಿಯ ನಿಜಬಣ್ಣ ಗೊತ್ತಾಗಲು ಯಡ್ಡಿಗೆ ಇಲ್ಲಿಯತನಕ ಕಾಯಬೇಕಾಗಿ ಬಂದದ್ದು ದುರಂತವೇ ಸರಿ. ನಿನ್ನೆಮೊನ್ನೆಯ ತನಕ ಜಮಖಂಡಿಗೆ ನಿರಾಣಿಯೇ ಕೆಜೆಪಿ ಅಭ್ಯರ್ಥಿಯೆಂದೂ ಆತನ ತಮ್ಮ ಹಣಮಂತ ನಿರಾಣಿ ಕೂಡ ಬೀಳಗಿಗೆ ಕೆಜೆಪಿ ಅಭ್ಯರ್ಥಿಯಾಗಬೇಕಿತ್ತು. ಆದರೆ ಎಲ್ಲಾ ನಿರೀಕ್ಷೆಗಳನ್ನೂ ಹುಸಿ ಮಾಡಿದ ನಿರಾಣಿ ತಾನು ಬೀಳಗಿಯಿಂದಲೇ ಬಿಜೆಪಿ ಅಭ್ಯರ್ಥಿಯಾಗಿ ನಿಲ್ಲುತ್ತೇನೆಂದು ಘೋಷಿಸಿದ್ದಾನೆ. ಅಲ್ಲಿಗೆ ಯಡ್ಡಿ-ನಿರಾಣಿಯ ಸುದೀರ್ಘ ದಾಂಪತ್ಯ ಅಂತ್ಯವಾದಂತೆಯೇ!


ಈ ಬಾರಿ ನಿರಾಣಿಯ ಮುಖ ಕಂಡರೇನೇ ಬೀಳಗಿಯ ರೈತರು ಎಕ್ಕಡ ಕೈಗೆತ್ತಿಕೊಳ್ಳುವಂತಹ ದುರ್ಗತಿ ನಿರಾಣಿಗೊದಗಿದೆ. ಆತನ ತಮ್ಮ ಹಣಮಂತ ನಿರಾಣಿಯ ಗೂಂಡಾಗಿರಿ, ದೌರ್ಜನ್ಯಗಳು ಒಂದೆಡೆಯಾದರೆ ಮತ್ತೊಂದೆಡೆ ನಿರಾಣಿಯ ಸಕ್ಕರೆ ಕಾರ್ಖಾನೆಯಿಂದಾಗಿ ಆ ಭಾಗದ ರೈತರ ಬದುಕು, ಆರೋಗ್ಯ ಎರಡೂ ಹಾಳಾಗತೊಡಗಿದೆ. ತನ್ನ ಸಕ್ಕರೆ ಕಾರ್ಖಾನೆಗೆ ರೈತರು ಕೊಟ್ಟ ಕಬ್ಬಿನ ಕಾಸನ್ನೂ ಬಿಡದೆ ಮುಂಡಾಯಿಸುವ ನಿರಾಣಿ ಕೇವಲ ಬೀಳಗಿಯ ಮಟ್ಟಿಗಷ್ಟೇ ಅಲ್ಲ, ಇಡೀ ಜಮಖಂಡಿಗೇ ದೊಡ್ಡ ಪೀಡೆ.

ಮೊದಮೊದಲು ನಿರಾಣಿಯನ್ನು ಬೆಂಬಲಿಸಿ ಥರಾವರಿ ಕನಸು ಕಂಡಿದ್ದ ರೈತರಿಗೆ ಕಾಂಗ್ರೆಸ್ಸಿನ ಜೆ.ಟಿ. ಪಾಟೀಲರಂಥವರು ಈತನಿಗಿಂತ ಸಾವಿರ ಪಾಲು ವಾಸಿ ಎನ್ನಿಸತೊಡಗಿದ್ದರಲ್ಲಿ ಯಾವುದೇ ಅತಿಶಯವಿರಲಿಲ್ಲ. ಇದನ್ನೆಲ್ಲ ಲೆಕ್ಕಹಾಕಿಯೇ ಈ ಸಾರಿ ಬೀಳಗಿಯನ್ನು ತೊರೆದು ಪಕ್ಕದ ಜಮಖಂಡಿಗೆ ವಲಸೆ ಹೋಗುವುದು ನಿರಾಣಿಯ ಲೆಕ್ಕಾಚಾರವಾಗಿತ್ತು. ಕೆಜೆಪಿಯಿಂದಲೇ ನಿಲ್ಲುವ ತಯಾರಿಯೂ ಮುಗಿದಿತ್ತು. ಈ ಮಧ್ಯೆಯೇ ಶೆಟ್ಟರ್‌ರನ್ನು ಛೂಬಿಟ್ಟ ಅನಂತಕುಮಾರ್ ಅಸಾಧ್ಯ ದೀಲೊಂದಕ್ಕೆ ಕೈಯಿಟ್ಟಿದ್ದು.

ತನ್ನ ಪ್ರೇಯಸಿಯರು, ಛೇಲಾಗಳು, ಸಂಬಂಧಿಕರ ಹೆಸರಲ್ಲಿ ನಕಲಿ ಯೋಜನೆಗಳನ್ನು ಹುಟ್ಟಿ ಹಾಕಿ ಕೆಐಎಡಿಬಿಯನ್ನೇ ಬಳಸಿಕೊಂಡು ಸಾವಿರ ಕೋಟಿಗೂ ಅಧಿಕ ಮೊತ್ತದ ಸರ್ಕಾರಿ ಭೂಮಿಯನ್ನು ಕಬಳಿಸಿದ ಸರಿಸುಮಾರು 68 ಪ್ರಕರಣಗಳ ಫೈಲೊಂದನ್ನು ಅನಂತ್‌ಕುಮಾರ್ ಅಸ್ತ್ರವಾಗಿ ಬಳಸಿದ್ದರು. ಜೊತೆಗೆ ಉದ್ಯಮಿ ಆಲಂಪಾಷಾ ನೀಡಿದ ದೂರಿನ ವಿಚಾರಣೆಗೆ ರಾಜ್ಯಪಾಲ ಭಾರದ್ವಾಜ್ ಬೇರೆ ಅಂಕಿತ ಹಾಕುವುದೂ ಬಾಕಿಯಿತ್ತು. ಕೇಂದ್ರದ ಕೆಲ ಕಾಂಗ್ರೆಸ್ ನಾಯಕರ ಮೂಲಕ ರಾಜ್ಯಪಾಲರ ಮೇಲೆ ಪ್ರಭಾವ ಬೀರಿ ಒಂದಷ್ಟು ಸಮಯಾವಕಾಶವನ್ನೂ ಪಡೆದಿದ್ದ ನಿರಾಣಿಗೆ ಈಗ ಅನಂತ್ ಮುಂದಿಟ್ಟ ಫೈಲು ನಿಜಕ್ಕೂ ನಡುಕ ಹುಟ್ಟಿಸಿತ್ತು.

ನಿರಾಣಿಯ ನಿಜಬಣ್ಣ ಗೊತ್ತಾಗಲು ಯಡ್ಡಿಗೆ ಇಲ್ಲಿಯತನಕ ಕಾಯಬೇಕಾಗಿ ಬಂದದ್ದು ದುರಂತವೇ ಸರಿ. ನಿನ್ನೆಮೊನ್ನೆಯ ತನಕ ಜಮಖಂಡಿಗೆ ನಿರಾಣಿಯೇ ಕೆಜೆಪಿ ಅಭ್ಯರ್ಥಿಯೆಂದೂ ಆತನ ತಮ್ಮ ಹಣಮಂತ ನಿರಾಣಿ ಕೂಡ ಬೀಳಗಿಗೆ ಕೆಜೆಪಿ ಅಭ್ಯರ್ಥಿಯಾಗ ಬೇಕಿತ್ತು. ಆದರೆ ಎಲ್ಲಾ ನಿರೀಕ್ಷೆಗಳನ್ನೂ ಹುಸಿ ಮಾಡಿದ ನಿರಾಣಿ ತಾನು ಬೀಳಗಿಯಿಂದಲೇ ಬಿಜೆಪಿ ಅಭ್ಯರ್ಥಿಯಾಗಿ ನಿಲ್ಲುತ್ತೇನೆಂದು ಘೋಷಿಸಿದ್ದಾನೆ. ಉಮೇಶ್ ಕತ್ತಿಯ ದೋಖಾಬುದ್ಧಿ ಏನೇ ಆದರೂ ಹುಕ್ಕೇರಿಯಲ್ಲಿ ತನ್ನನ್ನು ಸೋಲಿಸಬಲ್ಲ ಮತ್ತೊಬ್ಬ ಗಂಡು ಹುಟ್ಟಿಲ್ಲ. ಇನ್ನು ಯಡ್ಡಿ ಕೆಜೆಪಿಯಿಂದ ಯಾರನ್ನೇ ತನ್ನ ವಿರುದ್ಧ ಕಣಕ್ಕಿಳಿಸಿದರೂ ಹುಕ್ಕೇರಿಯ ಮಟ್ಟಿಗದು ಲೆಕ್ಕಕ್ಕಿಲ್ಲ. ಮಾಡಿದ ಉಪಕಾರ, ಬೆಳೆಸಿದ ಋಣಕ್ಕೆ ದ್ರೋಹ ಬಗೆದು 200 ಕೋಟಿ ಉಳಿಸಿಕೊಂಡರೆ ಅದನ್ನು ಕೇಳುವವರಾದರೂ ಯಾರು? ಇದ್ದಷ್ಟು ದಿನ ಬಂದಷ್ಟು ಲಾಭ!





ಕರಂದ್ಲಾಜೆ ಗೆಲುವಿಗೆ ಕಾಂಗ್ರೆಸ್ ಕೊಡುಗೆ







ಜೆಡಿಎಸ್ ಮತ್ತು ಬಿಜೆಪಿ ನಡುವೆ ಒಳಒಪ್ಪಂದದ ವಾಸನೆ ಹೊಡೆಯುತ್ತಿರುವ ಹಾಗೆಯೇ ಕಾಂಗ್ರೆಸ್ ಮತ್ತು ಕೆಜೆಪಿ ಮಧ್ಯೆಯೂ ಏನೋ ಕೊಡುಕೊಳ್ಳುವಿಕೆಯಿದೆಯೆ? ಅಥವಾ ಇದು ಕಾಕತಾಳೀಯವೆ?

ಸದ್ಯ ರಾಜಾಜಿನಗರದಲ್ಲಿ ಕೆಜೆಪಿಯ ಪರ ಶೋಭಾ ಕರಂದ್ಲಾಜೆ ಎಬ್ಬಿಸಿರುವ ಸುಂಟರಗಾಳಿಗೆ ಮಂತ್ರಿ ಸುರೇಶ್‌ಕುಮಾರ್ ಥರಗುಡತೊಡಗಿದ್ದಾರೆ. ಪ್ರಮುಖ ಬಿಜೆಪಿ ಕಾರ್ಯಕರ್ತರನ್ನೂ ಬಿಡದೆ ಅಳಿದುಳಿದ ಜೆಡಿಎಸ್ ಮತ್ತು ಕಾಂಗ್ರೆಸ್ ಕಾರ್ಯಕರ್ತರನ್ನೆಲ್ಲ ಕರಂದ್ಲಾಜೆಯ ಭಟ್ಟಂಗಿಗಳು ಖರೀದಿಸಿಬಿಟ್ಟಿದ್ದಾರೆ. ಇಂಥಾದ್ದರಲ್ಲಿ ಕಾಂಗ್ರೆಸ್ ಎಂಥ ಗಟ್ಟಿಯ ಅಭ್ಯರ್ಥಿಯನ್ನು ಹಾಕಬೇಕು?

ಒಕ್ಕಲಿಗರಲ್ಲೇ ಆಗಿದ್ದರೆ ತಿಮ್ಮೇಗೌಡರಿದ್ದರು. ಲಿಂಗಾಯತರಿಗೆ ನೀಡಬೇಕೆಂದಿದ್ದರೆ ಆರಾಧ್ಯನಂಥ ಜನಾನುರಾಗಿ ಸಭ್ಯರಿದ್ದರು. ಇದೆಲ್ಲದರ ಹೊರತಾಗಿಯೂ ಈ ಬಾರಿ ಗೆಲ್ಲುವ ಎಲ್ಲಾ ಲಕ್ಷಣಗಳಿದ್ದದ್ದು ಕಳೆದ ಬಾರಿ ಸುರೇಶ್‌ಕುಮಾರ್ ವಿರುದ್ಧ ನಿಂತು ಸೋತಿದ್ದ ಜಿ. ಪದ್ಮಾವತಿಗೆ. ಅಂಥಾ ಬಿಜೆಪಿ ಅಲೆಯಿದ್ದಾಗಲೇ ಯಾವ ನಾಯಕ, ರೊಕ್ಕ, ಅಧಿಕಾರ ಯಾವುದೂ ಇಲ್ಲದೆ ಸರಿ ಸುಮಾರು 35 ಸಾವಿರದಷ್ಟು ಮತ ಪಡೆದ ಜಿ. ಪದ್ಮಾವತಿಗೆ ಇನ್ನ 14 ಸಾವಿರದಷ್ಟು ಹೆಚ್ಚು ಮತಗಳು ಬಿದ್ದಿದ್ದರೆ ಸುರೇಶ್‌ಕುಮಾರ್ ಗೆಲ್ಲುವುದೇ ಕಷ್ಟವಿತ್ತು.

ಒಂದಲ್ಲ ಮೂರು ಬಾರಿ ರಾಜಾಜಿನಗರದ ವಿವಿಧ ವಾರ್ಡುಗಳಿಂದ ಗೆದ್ದು ಕೌನ್ಸಿಲರ್ ಆಗಿದ್ದ ಪದ್ಮಾವತಿ ಸ್ಥಳೀಯವಾಗಿ ಪಕ್ಷ ಕಟ್ಟಿದಾಕೆ ಮತ್ತು ಬೀದಿಯಲ್ಲಿ ನಿಂತು ಸೆಣಸುವಾಕೆ. ಈ ಬಾರಿ ಶತಾಯಗತಾಯ ಗೆಲ್ಲಲು ಸಕಲ ಸಿದ್ಧತೆಗಳನ್ನೆಲ್ಲ ಮಾಡಿಕೊಂಡಿದ್ದ ಪದ್ಮಾವತಿಯ ಬೆನ್ನಿಗೆ ಯುವಕರ ಹಿಂಡೇ ಇತ್ತು. ಆದರೆ ಹೈಕಮಾಂಡ್ ಅವಿವೇಕವೋ ಎಂಬಂತೆ ಮಂಜುಳಾನಾಯ್ಡು ಎಂಬ ವೈಟ್‌ಕಾಲರ್ ನಾಯಕಿಗೆ ಕಾಂಗ್ರೆಸ್ ಟಿಕೆಟ್ ಕೊಡುವ ಹುನ್ನಾರ ನಡೆದಿದೆ.

ಮಂಜುಳಾನಾಯ್ಡು ಸ್ಥಳೀಯಳಲ್ಲ. ಬೆಂಗಳೂರು ಉತ್ತರದಿಂದ ವಲಸೆ ಬಂದು ಬೆಂಗಳೂರು ದಕ್ಷಿಣದ ರಾಜಾಜಿನಗರಕ್ಕೆ ಅಭ್ಯರ್ಥಿಯಾಗಲು ಯಾವುದೇ ಕಾರಣವಿಲ್ಲ. ಸ್ಥಳೀಯ ಕಾರ್ಯಕರ್ತರ ಪರಿಚಯವೇ ಇಲ್ಲ. ಜನರೊಡನೆ ಬೆರೆಯುವ ಜಾಯಮಾನವೂ ಇಲ್ಲ. ನಯಾಪೈಸೆ ಬಿಚ್ಚುವಷ್ಟು ಔದಾರ್ಯವಿಲ್ಲ. ಮಹಿಳಾ ಕಾಂಗ್ರೆಸ್ ಅಧ್ಯಕ್ಷೆಯಾಗಿ ಸಣ್ಣದೊಂದು ಪ್ರತಿಭಟನೆಯಾಗಲಿ, ಪತ್ರಿಕಾ ಹೇಳಿಕೆಯಾಗಲಿ ಕೊಟ್ಟದ್ದಿಲ್ಲ. ಬೆನ್ನಿಗೆ ನಾಲ್ಕು ಮಂದಿ ಬೆಂಬಲಿಗರಿಲ್ಲ. ಪ್ರಿಯಾಂಕಾ ಗಾಂಧಿಯಂತೆ ಬಾಬ್‌ಕಟ್ ಮಾಡಿಸಿಕೊಂಡು ಡಿಂಗ್‌ಡಾಂಗ್ ಡೈಲಾಗು ಹೊಡೆದ ಮಾತ್ರಕ್ಕೇ ಜನ ಓಟು ಹಾಕುವುದಿಲ್ಲ.

ಬಹುಶಃ ಶೋಭಾ ಕರಂದ್ಲಾಜೆ ಗೆಲ್ಲಲಿ ಎಂದೇ ಕಾಂಗ್ರೆಸ್ ಮಂಜುಳಾನಾಯ್ಡು ಥರದ ಬಿನ್ನಾಣಗಿತ್ತಿಯನ್ನು ಡಮ್ಮಿ ಅಭ್ಯರ್ಥಿಯಾಗಿ ಹಾಕಿದೆಯೇ?

ರಾಜಾಜಿನಗರದ ಮಟ್ಟಿಗೆ ಇಂಥದೊಂದು ಅನುಮಾನವಂತೂ ಇದ್ದೇ ಇದೆ.



ಇವತ್ತಲ್ಲಾ ನಾಳೆ ಈ ಎಲ್ಲಾ ಹಗರಣಗಳನ್ನು ಸಿಬಿಐ ತನಿಖೆಗೆತ್ತಿಕೊಂಡರೂ ಮುಂದೆ ಬಿಜೆಪಿಯೇ ಕೇಂದ್ರದಲ್ಲಿ ಅಧಿಕಾರಕ್ಕೆ ಬರುವುದರಿಂದ ಸುಲಭವಾಗಿ ಬಚಾವಾಗಲು ಸಾಧ್ಯ. ಚುನಾವಣೆ ನಂತರ ಜೆಡಿಎಸ್ ಮತ್ತು ಬಿಜೆಪಿ ಸೇರಿ ಸರ್ಕಾರ ರಚಿಸುವ ವಾಮಮಾರ್ಗದ ಸಾಧ್ಯತೆಯೂ ಇದೆಯಾದ್ದರಿಂದ ಇಂಥ ಯಾವುದೇ ಅವಕಾಶಗಳಿಲ್ಲದ ಕೆಜೆಪಿಗೆ ಹೋಗಿ ...ಾಭ ಸೊನ್ನೆಯೆ!

...ನ್, ಅಶೋಕ್ ಮತ್ತು ಅನಂತ್ ಸೇರಿಯೇ ನಡೆಸಿದ ಈ 'ವ್ಯವಹಾರ' ...ಲಾಭದಾಯಕವಾಗಿ ಕಂಡಿದ್ದಕ್ಕಿಂತಲೂ ದೊಡ್ಡದಾದ ಮತ್ತೊಂದು ...ತ್ತು. ಅದು ಯಡ್ಡಿ ಮತ್ತು ನಿರಾಣಿ ಮಧ್ಯದ ಐನೂರು ಕೋಟಿಯ ...ವಹಾರ. ಯಡ್ಡಿ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಗ್ಲೋಬಲ್ ...ರ್ಸ್ ಮೀಟ್‌ನ ಕೆಲ ಡೀಲುಗಳ ಕಮೀಷನ್ ಮತ್ತು ಚೀನಾದ ...ಲ್ಲಿ ಬೇನಾಮಿಯಾಗಿ ಖರೀದಿಸಿದ್ದ ಐಷಾರಾಮಿ ಹೊಟೇಲಿನ ಬಾಕಿ ...ಗೆ ಬರಬೇಕಿದ್ದ ಒಟ್ಟು 500 ಕೋಟಿಯಷ್ಟು ಮೊತ್ತವನ್ನು ನಿರಾಣಿ ...ಕೊಡಲೇಬೇಕಿತ್ತು.

...ಅಂದರೂ ಅದು ಲಂಚದ, ಲೆಕ್ಕಕ್ಕಿಲ್ಲದ, ಕೊಳ್ಳೇ ಹೊಡೆದ ಕಾಸು. ...ಮ್ಮೆ ಕೊಡದೇ ಹೋದರೂ ಯಡ್ಡಿಯಾಗಲಿ, ಅವರ ಮಕ್ಕಳಾಗಲಿ ...ನೇ ಮಾಡಲು ಸಾಧ್ಯ?

...ಹಾಟಿ ರೊಕ್ಕವನ್ನು ತಾನೇ ಗಿಟ್ಟಿಸಿಕೊಳ್ಳಬೇಕೆಂದರೆ ಕೆಜೆಪಿಗೆ ಹೋಗದೆ ...ಪಲ್ಲೇ ಇದ್ದು ಬಿಟ್ಟರೆ? ಇತ್ತ ದುಡ್ಡೂ ಸ್ವಾಹಾ ಯಡ್ಡಿಗೂ ನಾಮ! ...ಡ್ಡಿಯ ಜೊತೆಗಿದ್ದು ತಾನು ಕೆಜೆಪಿಯ ಹಂಗಿನಲ್ಲಿದ್ದರಷ್ಟೇ ಐನೂರು ...ಮನ್ನು ಹಿಂತಿರುಗಿಸಬೇಕು. ಧಿಕ್ಕರಿಸಿ ದೂರವಿದ್ದು ಬಿಟ್ಟರೆ ದುಡ್ಡೂ ...ತು ಅಧಿಕಾರವೂ ಕೈಗೆಟುಕಿದಷ್ಟು. ಇಂಥ ದ್ರೋಹ ಚಿಂತನೆಯನ್ನು ...ಾಕಿಯೇ ಯಡ್ಡಿಯ ಬೆನ್ನಿಗಿರಿಯುವ ಗುದಮಘಾತುಕಕ್ಕೆ ನಿರಾಣಿ ...ಗಿದ್ದಾನೆ. ಇದರ ಪರಿವೆಯೇ ಇಲ್ಲದ ಯಡಿಯೂರಪ್ಪ ನಿರಾಣಿಯನ್ನು ...ದೀ ಬಾಗಲಕೋಟೆ ಜಿಲ್ಲೆಯುದ್ದಕ್ಕೂ ಕೆಜೆಪಿಯ ಬಾವುಟ ಹಾರಿಸುವ ...ಕಂಡಿದ್ದಷ್ಟೆ ಬಂತು.

...ಹುಶಃ ಜಮಖಂಡಿ ಶಾಸಕ ಶ್ರೀಕಾಂತ್ ಕುಲಕರ್ಣಿ ಹಠಕ್ಕೆ ಬೀಳದೇ ...ದ್ದರೆ ನಿರಾಣಿಗಾಗಿ ಜಮಖಂಡಿಯನ್ನು ಬಿಟ್ಟುಕೊಡಲು ಶೆಟ್ಟರ್ ಎಲ್ಲಾ ...ಯನ್ನೂ ನಡೆಸಿದ್ದರು. ಶ್ರೀಕಾಂತ್ ಕುಲಕರ್ಣಿ ಹಳೆಯ ಆರೆಸ್ಸೆಸ್ ... ಜನಸಂಘದ ಕಾಲದಿಂದಲೂ ಕೇಸರಿ ರಾಜಕಾರಣದ ...ಣಿಯಲ್ಲಿದ್ದಾತ. ನಿರಾಣಿಯ ಬದ್ಧ ವೈರಿ ಗೋವಿಂದ ಕಾರಜೋಳರಿಗೂ ...ಪ್ತ. ಒಬ್ಬ ನಿರಾಣಿಗಾಗಿ ಜಮಖಂಡಿಯನ್ನೂ ಬ್ರಾಹ್ಮಣರ ಕುಲಕರ್ಣಿಯನ್ನೂ ...ಳ್ಳುವುದು ಬಿಜೆಪಿಯ ದೆಹಲಿ ವರಿಷ್ಠರಿಗೂ ಅಸಾಧ್ಯವೆನಿಸಿರಬೇಕು. ...ಮಖಂಡಿಯನ್ನು ಬಿಟ್ಟುಕೊಟ್ಟರಷ್ಟೇ ಬಿಜೆಪಿಯಲ್ಲಿ ಉಳಿಯುತ್ತೇನೆಂದು ...ವರಿಷ್ಠರ ಕಿವಿಗೆ ಹೂವಿಟ್ಟಿದ್ದ ನಿರಾಣಿ ಅಂತಿಮವಾಗಿ ಸಿಕ್ಕಿದ್ದೇ ಸೀರುಂಡೆ ...ತೆ ಬೀಳಗಿಗೇ ವಾಪಸ್ಸಾಗಿದ್ದಾನೆ. ಆದರೆ ಬೀಳಗಿಯಲ್ಲಿ ಮಾತ್ರ ಈ ...ವಿನೇ ಲಗಾಟ ಹೊಡೆದರೂ ನಿರಾಣಿ ಗೆಲ್ಲುವುದು ಕಷ್ಟವೆ. ಅದು ...ಷ್ಟೂ ಮುಖ್ಯಮಂತ್ರಿ ಶೆಟ್ಟರ್ ಒತ್ತಡಕ್ಕೆ ಬಿದ್ದು ತಾನು ಬಿಜೆಪಿ ಬಿಡಲ್ಲ, ...ಮಿಂದಲೇ ಸ್ಪರ್ಧಿಸುತ್ತೇನೆ ಇತ್ಯಾದಿಯಾಗಿ ನಿರಾಣಿ ಹಲುಬಿದ್ದಾನೆ. ...ಳಿಗೆಯಲ್ಲಿ ಜಮಖಂಡಿಗಾಗಿ ನಿರಾಣಿ ಯಾವ ಮಟ್ಟಕ್ಕಿಳಿಯುವುದಕ್ಕೂ ...ರೆ ಅಚ್ಚರಿಯೇನಲ್ಲ.

...ದೇ ಪರಿಸ್ಥಿತಿ ಯಡ್ಡಿಯ ಮತ್ತೊಬ್ಬ ಬಂಟ ಉಮೇಶ್ ಕತ್ತಿಯದು. ಬಿಜೆಪಿಗೆ ಕರೆತಂದು, ಗೆಲ್ಲಿಸಿ, ಮಂತ್ರಿ ಪದವಿಯನ್ನೂ ಕರುಣಿಸಿದ ಯಡ್ಡಿ ಬಗ್ಗೆ ಕತ್ತಿಗಿದ್ದ ನಿಯತ್ತು ಕೊಡಬೇಕಿದ್ದ 200 ಕೋಟಿ ರೂಪಾಯಿಗಳಷ್ಟು ರೊಕ್ಕದ ಮುಂದೆ ಮಣ್ಣು ಪಾಲಾಗಿತ್ತು. ಹುಕ್ಕೇರಿಯ ಹಿರಣ್ಯಕೇಶಿ ಸಕ್ಕರೆ ಕಾರ್ಖಾನೆ ಮತ್ತು ಬಾಗೇವಾಡಿಯ ವಿಶ್ವನಾಥ್ ಶುಗರ್ಸ್ ಕಂಪೆನಿಗಳೆರಡೂ ಕತ್ತಿಯ ಎರಡು ಕಣ್ಣುಗಳಿದ್ದಂತೆ. ಈ ಎರಡೂ ಸಕ್ಕರೆ ಕಾರ್ಖಾನೆಗಳನ್ನು ಅವನತಿಯ ಅಂಚಿಗೆ ತಂದಿಟ್ಟ ಕತ್ತಿಯ



...ಹಾರದ ಮೊತ್ತವೇ ನೂರು ಕೋಟಿಗೂ ಅಧಿಕ ಪ್ರಮಾಣದ್ದು. ಈ ...ಮೂ ಸೇರಿದಂತೆ ಕೃಷಿ ಇಲಾಖೆಯ ದರೋಡೆಯಲ್ಲಿ ಯಡ್ಡಿಗೆ ಸೇರಬೇಕಿದ್ದ ... ಕೋಟಿ ರೂಪಾಯಿಗಳ ಪಾಲಿನ್ನೂ ಕತ್ತಿ ಬಳಿಯೇ ಉಳಿದುಬಿಟ್ಟಿದೆ.

...ಜೆಪಿಗೆ ಹೋದರೆ ಆ 200 ಕೋಟಿ ಪೂರ್ತಿಯನ್ನು ಯಡ್ಡಿಗೆ ...ಲೇಬೇಕು. ಅದೇ ಬಿಜೆಪಿಯಲ್ಲಿ ಉಳಿದು ಬಿಟ್ಟರೆ?

...ಯಡ್ಡಿಗೆ ಕೊಡಬೇಕಿದ್ದ ಕೊಳ್ಳೆಯ ಪಾಲೂ ಉಳಿದಂತಾಯ್ತು, ಕೆಜೆಪಿಯ ...ನಾವಣಾ ವೆಚ್ಚವಾಗಿ ಸಲ್ಲಿಸಬೇಕಿದ್ದ ತನ್ನ ಲೆಕ್ಕದ ಬಾಬತ್ತನ್ನೂ ...ಕೊಂಡಂತಾಯ್ತು ಮತ್ತು ಇವತ್ತಲ್ಲ ನಾಳೆ ಕೇಂದ್ರದಲ್ಲಿ ಅಧಿಕಾರಕ್ಕೆ ಬರುವ ...ಮ ಆಸರೆಯೂ ಸಿಕ್ಕಂತಾಯ್ತು.

...ದು ಉಮೇಶ್ ಕತ್ತಿಯ ದೋಖಾಬುದ್ಧಿ. ಏನೇ ಆದರೂ ಹುಕ್ಕೇರಿಯಲ್ಲಿ ..., ಸೋಲಿಸಬಲ್ಲ ಮತ್ತೊಬ್ಬ ಗಂಡು ಹುಟ್ಟಿಲ್ಲ, ಇನ್ನು ಯಡ್ಡಿ ಕೆಜೆಪಿಯಿಂದ ...ನ್ನೇ ತನ್ನ ವಿರುದ್ಧ ಕಣಕ್ಕಿಳಿಸಿದರೂ ಹುಕ್ಕೇರಿಯ ಮಟ್ಟಿಗದು ಲೆಕ್ಕಕ್ಕಿಲ್ಲ. ...ದ ಉಪಕಾರ, ಬೆಳೆಸಿದ ಋಣಕ್ಕೆ ದ್ರೋಹ ಬಗೆದು 200 ಕೋಟಿ ...ಕೊಂಡರೆ ಅದನ್ನು ಕೇಳುವವನಾದರೂ ಯಾರು? ಇದ್ದಷ್ಟು ದಿನ ಬಂದಷ್ಟು ...

...ಯಡ್ಡಿಗಿದು ಆಗಬೇಕಾದ ಮರ್ಗತಿಯೆ!

● ಡಾ. ಸೋಮನಾಥ್

ಚುನಾವಣೆಗೆ ರಾಹುಲ್ ಸೂತ್ರ



ರಾಹುಲ್ ಗಾಂಧಿ ಕಾಂಗ್ರೆಸ ಉಪಾಧ್ಯಕ್ಷರಾಗಿ ಬಡ್ತಿ ಪಡೆದ ನಂತರ ಅವರ ಪಾಲಿಗೆ ಕರ್ನಾಟಕದ ಅಸೆಂಬ್ಲಿ ಚುನಾವಣೆ ಒಂದು ಅಗ್ನಿಪರೀಕ್ಷೆಯಾಗಿದೆ. ಕರ್ನಾಟಕದಲ್ಲಿ ಕಾಂಗ್ರೆ ಪಕ್ಷವನ್ನು ಅಧಿಕಾರಕ್ಕೆ ತಂದು ತನ್ನ ಬಡ್ತಿಯನ್ನು ಸಮರ್ಥಿಸಿಕೊಳ್ಳಲು ರಾಹುಲ್ ಗಾಂಧಿ ತೆರೆಮರೆಯಲ್ಲಿ ಎಲ್ಲಾ ರೀತಿಯ ಸಿದ್ಧತೆಗಳನ್ನು ನಡೆಸುತ್ತಿದ್ದಾರೆ. ಈ ಹಿಂದೆ ರಾಹುಲ್ ಗಾಂಧಿ ಉಸ್ತುವಾರಿಯಲ್ಲಿ ಪಂಜಾಬ್, ಗುಜರಾತ್, ಬಿಹಾರ ಮತ್ತು ಉತ್ತರ ಪ್ರದೇಶ ಚುನಾವಣೆಯನ್ನು ನಡೆಸಿದಾಗ ಅಲ್ಲಿ ಕಾಂಗ್ರೆ ಪಕ್ಷ ಧೂಳೀಪಟವಾಗಿತ್ತು. ಆದರಿಂದಾಗಿ ರಾಹುಲ್ ಗಾಂಧಿಯ ವರ್ಚಸ್ಸಿಗೆ ಭಾರಿ ಕುಂದಾಗಿತ್ತು. ಹೀಗಾಗಿ ಕರ್ನಾಟಕದಲ್ಲಿ ಕಾಂಗ್ರೆ ಪಕ್ಷವನ್ನು ಅಧಿಕಾರಕ್ಕೆ ತಂದು ರಾಹುಲ್ ಗಾಂಧಿಯ ವರ್ಚಸ್ಸನ್ನು ವೃದ್ಧಿಸಲು ಕಾಂಗ್ರೆ ನಾಯಕರು ಎಲ್ಲ ರೀತಿಯ ಸೂತ್ರಗಳನ್ನು ಅಳವಡಿಸುತ್ತಿದ್ದಾರೆ.

ಕಳೆದ ಹಲವು ಅಸೆಂಬ್ಲಿ ಚುನಾವಣೆಯಲ್ಲಿ ರಾಹುಲ್ ಗಾಂಧಿ ತನ್ನದೇ ಆದ ಶೈಲಿಯನ್ನು ಅನುಸರಿಸಿದ್ದರು. ಉತ್ತರ ಭಾರತದ ನಾಲ್ಕು ರಾಜ್ಯಗಳಲ್ಲಿ ಕಾಂಗ್ರೆ ಅಭ್ಯರ್ಥಿಗಳ ಪಟ್ಟಿಯನ್ನು ರಾಹುಲ್ ಗಾಂಧಿ ಒಂದು ತಿಂಗಳ ಹಿಂದೆಯೇ ಘೋಷಿಸಿ ಹೊಸ ಶೈಲಿ ಆರಂಭಿಸಿದ್ದರು. ಅಭ್ಯರ್ಥಿಗಳಿಗೆ ಅಸೆಂಬ್ಲಿ ಕ್ಷೇತ್ರಗಳನ್ನು ತಿರುಗಿ ಕೆಲಸ ಮಾಡಲು ಅವಕಾಶ ಸಿಗಲಿ ಎಂಬ ಉದ್ದೇಶ ರಾಹುಲ್ ಗಾಂಧಿಯದ್ದಾಗಿತ್ತು. ಆದರೆ ಹಾಗೆ ಮಾಡುವ ಮುಖಾಂತರ ಬಂಡಾಯ ಅಭ್ಯರ್ಥಿಗಳು ಬೇರೆ ಪಕ್ಷಕ್ಕೆ ಜಂಪ್ ಮಾಡಿದರು. ಅಷ್ಟೇ ಅಲ್ಲ, ಅಧಿಕೃತ ಅಭ್ಯರ್ಥಿಗಳ ಮೇಲೆ ಒಂದೊಂದು ತಿಂಗಳು ಕಾರ್ಯಕರ್ತರನ್ನು ಸಾಕುವ ಹೆಚ್ಚಿನ ಆರ್ಥಿಕ ಹೊರೆ ಬಿದ್ದಿತು.

ಹೀಗೆ ಒಂದು ತಿಂಗಳ ಮೊದಲೇ ಅಭ್ಯರ್ಥಿಯನ್ನು ಘೋಷಿಸುವುದರಿಂದ ಯಾವುದೇ ಲಾಭ ಆಗುವುದಿಲ್ಲ ಎಂದು ಕಾಂಗ್ರೆ ಮುಖಂಡರಾದ ಎ.ಕೆ.ಆಂಟೋನಿ ಮತ್ತು ಇತರರು ರಾಹುಲ್‌ಗೆ ಮನವರಿಕೆ ಮಾಡಿಕೊಟ್ಟಿದ್ದರು. ಈ ಕಾರಣಕ್ಕಾಗಿಯೇ ಕರ್ನಾಟಕದ ಅಸೆಂಬ್ಲಿ ಚುನಾವಣೆಯ ಈ ಸಂದರ್ಭದಲ್ಲಿ ಕಾಂಗ್ರೆ ಹೈಕಮಾಂಡ್ 224 ಕ್ಷೇತ್ರಗಳ ಪೈಕಿ 200 ಕ್ಷೇತ್ರಗಳ ಅಭ್ಯರ್ಥಿಗಳ ಹೆಸರುಗಳನ್ನು ಅಂತಿಮಗೊಳಿಸಿದ್ದರೂ ಅದನ್ನು ಬಹಿರಂಗಪಡಿಸಿಲ್ಲ. ಅಂದರೆ ಒಂದು ಕಡೆ ಕೊನೇ ಕ್ಷಣದಲ್ಲಿ ತಮ್ಮ ಅಭ್ಯರ್ಥಿಗಳ ಪಟ್ಟಿಯನ್ನು ಘೋಷಿಸುವುದರಿಂದ ಬಂಡಾಯವನ್ನು ತಡೆದಂತಾಗುತ್ತದೆ, ಇನ್ನೊಂದು ಕಡೆ ಬಂಡಾಯ ಅಭ್ಯರ್ಥಿಗಳು ಇತರೆ ಪಕ್ಷಗಳಿಗೆ ಹಾರಿಹೋಗದಂತೆ ತಡೆಯುವಂತಾಗುತ್ತದೆ. ವಾಸ್ತವವಾಗಿ ಇದು ಕಾಂಗ್ರೆಸನಲ್ಲಿ ಅನಾದಿಕಾಲದಿಂದಲೂ ನಡೆದುಬರುತ್ತಿದ್ದ ಸಂಪ್ರದಾಯ. ಇಂತಹ ಸಂಪ್ರದಾಯವನ್ನು ಅನುಸರಿಸುವ ಮುಖಾಂತರ ರಾಹುಲ್ ಗಾಂಧಿ ಎಂಬ ಹೊಸ ತಲೆಮಾರಿನ ನಾಯಕ ಹಳೆತಲೆಮಾರಿನ ಸೂತ್ರಗಳಿಗೆ ಶರಣಾಗಿದ್ದಾರೆ ಎಂದು ಹೇಳಬಹುದು.

ರಾಹುಲ್ ಗಾಂಧಿ ಮಾಡಿರುವ ಒಂದು ಮುಖ್ಯ ಕೆಲಸ ಯಾವುದೆಂದರೆ ಕಾಂಗ್ರೆ ನಾಯಕರಿಗೆ ನೀಡುತ್ತಿದ್ದ 'ಕೋಟಾ'ಗಳು. ಈ ಹಿಂದೆ ಒಬ್ಬೊಬ್ಬ ನಾಯಕರೂ ತಮಗೆ ಇಷ್ಟಿಷ್ಟು ಸೀಟುಗಳನ್ನು 'ಕೋಟಾ' ಕೊಡಿ ಎಂದು ಹೇಳಿ, ಅವುಗಳನ್ನು ಪಡೆದು ತಮ್ಮ ಹಿಂಬಾಲಕರಿಗೆ ನೀಡಿ ಅವರು ಗೆಲ್ಲುವಂತೆ ನೋಡಿಕೊಳ್ಳುತ್ತೇವೆ ಎಂದು ಹೈಕಮಾಂಡಿಗೆ ಆಶ್ವಾಸನೆ ನೀಡುತ್ತಿದ್ದರು. ಆದರೆ ಈ ಬಾರಿ ಯಾವ ನಾಯಕನಿಗೂ ಇಂತಹ ಕೋಟಾ ಸೀಟುಗಳನ್ನು ಕಾಂಗ್ರೆ ಹೈಕಮಾಂಡ್ ನೀಡುತ್ತಿಲ್ಲ.

ಇತ್ತೀಚೆಗೆ 'ಆಕ್ಸ್‌ಫರ್ಡ್ ಒಕ್ಕಲಿಗ' ಎಸ್.ಎಂ. ಕೃಷ್ಣ "ನನಗೆ 55 ಸೀಟುಗಳನ್ನು ನೀಡಿ" ಎಂದು ಹೈಕಮಾಂಡ್‌ನ್ನು ಕೇಳಿದ್ದರಂತೆ. ಅಷ್ಟೇ ಅಲ್ಲ "ಮಂಡ್ಯ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ರಾಮನಗರ, ಹಾಸನ, ಮೈಸೂರು, ಚಿಕ್ಕಬಳ್ಳಾಪುರ ಇವೆಲ್ಲ ಕ್ಷೇತ್ರಗಳಲ್ಲಿ ನನ್ನ ಪ್ರಾಬಲ್ಯವಿದೆ, ನನ್ನ ಅನುಯಾಯಿಗಳಿದ್ದಾರೆ. ಅವರಿಗೆ ಟಿಕೆಟ್‌ಗಳು ಬೇಕು" ಎಂದು ಕೃಷ್ಣ ಅರ್ಜಿ ಸಲ್ಲಿಸಿದ್ದರು. ಕೃಷ್ಣ ಪಟ್ಟಿ ಮಾಡಿದ್ದ ಜಿಲ್ಲೆಗಳಲ್ಲಿ ಒಟ್ಟು 95 ಅಸೆಂಬ್ಲಿ ಕ್ಷೇತ್ರಗಳು ಬರುತ್ತವೆ. ಈ 95ರಲ್ಲಿ 20 ಮೀಸಲಾತಿಗೆ ಹೋಗುತ್ತದೆ. ಉಳಿದ 75 ಸೀಟುಗಳಲ್ಲಿ 55ನ್ನು ಕೃಷ್ಣರಿಗೆ ನೀಡಿದರೆ ಸಾಮಾಜಿಕ ನ್ಯಾಯ ದೊರೆತಂತೆ ಆಗುವುದಿಲ್ಲ ಎಂದು ರಾಹುಲ್ ಗಾಂಧಿ ವ್ಯಾಖ್ಯಾನಿಸಿದರಂತೆ.

ರಾಜ್ಯ ನಾಯಕರಿಗೆ ನೀಡುತ್ತಿದ್ದ ಕೋಟಾ ಸೀಟುಗಳನ್ನು ರಾಹುಲ್ ಗಾಂಧಿ ರದ್ದುಗೊಳಿಸಿದ್ದಾರೆ. ಈ ಕಾರಣಕ್ಕಾಗಿ ಕರ್ನಾಟಕ ಕಾಂಗ್ರೆಸ ಹಿರಿಯ ನಾಯಕರಿಗೆ ಈ ಬಾರಿ ತಮ್ಮ ಅನುಯಾಯಿಗಳಿಗೆ ಟಿಕೆಟ್ ಕೊಡಿಸಲು ಸುಲಭವಾಗುತ್ತಿಲ್ಲ. ಇದರಿಂದ ಹಿರಿಯ ನಾಯಕರಿಗೆ ಬೇಸರವಾಗಿದ್ದರೂ ಕಾರ್ಯಕರ್ತರು ಮಾತ್ರ ಇದನ್ನು ತುಂಬು ಹೃದಯದಿಂದ ಸ್ವಾಗತಿಸಿದ್ದಾರೆ.

ಕಳೆದ ಬಾರಿಯ ಚುನಾವಣೆಯಲ್ಲಿ ಕಾಂಗ್ರೆ ಪಕ್ಷ ಸೋಲಲು ಈ ಕೋಟಾ ಸೀಟು ಹಂಚಿಕೆಯೇ ಮುಖ್ಯ ಕಾರಣ ಎಂಬ ಅಭಿಪ್ರಾಯಕ್ಕೆ ಬಂದಿರುವ ರಾಹುಲ್ ಗಾಂಧಿ ಈ ಬಾರಿ ಕಾರ್ಯಕರ್ತರ ಮಟ್ಟದಿಂದ ಅಭ್ಯರ್ಥಿ ಆಯ್ಕೆಯ ಪ್ರಕ್ರಿಯೆಗೆ ಚಾಲನೆ ನೀಡಿ ಕಾಂಗ್ರೆ ಪಕ್ಷದೊಳಗೆ ಪ್ರಜಾಪ್ರಭುತ್ವಕ್ಕೆ ಚಾಲನೆ ನೀಡಿದ್ದಾರೆ.

ಈ ಬಾರಿಯ ಕಾಂಗ್ರೆ ಅಭ್ಯರ್ಥಿಗಳ ಆಯ್ಕೆಯ ಪ್ರಕ್ರಿಯೆಯನ್ನು ನೋಡಿದರೆ ನಿಮಗೆ ಕಾಂಗ್ರೆ ಪಕ್ಷದಲ್ಲಿ ಆಂತರಿಕ ಪ್ರಜಾಪ್ರಭುತ್ವ ಹೇಗೆ ಚಾಲ್ತಿಯಲ್ಲಿದೆ ಎಂಬ ಅಂಶ ಅರಿವಾಗುತ್ತದೆ.

ಉದಾಹರಣೆಗೆ ಪ್ರತಿ ಅಸೆಂಬ್ಲಿ ಕ್ಷೇತ್ರದಲ್ಲಿ ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳನ್ನು ಒಂದು ತಿಂಗಳ ಹಿಂದೆಯೇ ಕೇಳಲಾಗಿತ್ತು. ಸರಿಸುಮಾರಾಗಿ ಪ್ರತಿ ಅಸೆಂಬ್ಲಿ ಕ್ಷೇತ್ರದಿಂದ ತಲಾ ಹತ್ತು ಅಭ್ಯರ್ಥಿಗಳು ಅರ್ಜಿಯನ್ನು ಗುಜರಾಯಿಸಿದ್ದರು. ಅಂದರೆ ರಾಜ್ಯದ 224 ಅಸೆಂಬ್ಲಿ ಕ್ಷೇತ್ರಗಳಿಂದ ಕಾಂಗ್ರೆಗೆ ಸುಮಾರು 2240 ಅರ್ಜಿಗಳು ಬಂದಿದ್ದವು.

ಈ 2240 ಅಭ್ಯರ್ಥಿಗಳ ಪಟ್ಟಿಯನ್ನು ಪರಿಶೀಲಿಸಲು ಕರ್ನಾಟಕದ ಉಸ್ತುವಾರಿ ಹೊಂದಿರುವ ಮಧುಸೂದನ್ ಮಿಸ್ತ್ರಿಯವರ ಅಧ್ಯಕ್ಷತೆಯಲ್ಲಿ 60 ಸದಸ್ಯರಿರುವ ಚುನಾವಣಾ ಸಮಿತಿಯನ್ನು ಹೈಕಮಾಂಡ್ ರಚಿಸಿತ್ತು. ಈ ಸಮಿತಿಯ ಕೆಲಸ ಪ್ರತಿ ಕ್ಷೇತ್ರದ ಹತ್ತು ಅಭ್ಯರ್ಥಿಗಳ ಪಟ್ಟಿಯನ್ನು ಮೂರಕ್ಕೆ ಇಳಿಸುವುದು. ಅಂದರೆ ಮಿಸ್ತ್ರಿ ನಾಯಕತ್ವದ ಚುನಾವಣಾ ಸಮಿತಿ 2240 ಅಭ್ಯರ್ಥಿಗಳ ಅರ್ಜಿಗಳನ್ನು ಪರಿಶೀಲಿಸಿ ಅದನ್ನು 600ಕ್ಕೆ ಇಳಿಸಿ ಹೈಕಮಾಂಡಿಗೆ ರವಾನಿಸಿತ್ತು.

ಈ 600 ರ ಪಟ್ಟಿಯನ್ನು ಪರಿಶೀಲಿಸಿ ಪ್ರತಿ ಅಸೆಂಬ್ಲಿ ಕ್ಷೇತ್ರದಿಂದ ಬಂದಿರುವ ಮೂವರು ಸದಸ್ಯರ ಹೆಸರಲ್ಲಿ ಒಂದನ್ನು ಆಯ್ಕೆ ಮಾಡುವ ಜವಾಬ್ದಾರಿಯನ್ನು ಐದು ಜನ ಸದಸ್ಯರಿರುವ ಗೋವಾದ ಮಾಜಿ ಮುಖ್ಯಮಂತ್ರಿ ಫೆಲೆರೋ ಅವರಿಗೆ ನೀಡಲಾಗಿತ್ತು. ಈ ಐದು ಜನ ಕಮಿಟಿಯಲ್ಲಿ ಪರಮೇಶ್ವರ್, ಸಿದ್ಧರಾಮಯ್ಯ, ಅಜಿತ್ ಸಿಂಗ್ ಮತ್ತು ಕೇಂದ್ರ ಸರ್ಕಾರದ ಕ್ರೀಡಾ ಸಚಿವ ಅಜಯ್ ಮಾಕನ್ ಇದ್ದರು. 600 ಸದಸ್ಯರ ಪಟ್ಟಿಯಲ್ಲಿ ಗೋವಾ ಮಾಜಿ ಮುಖ್ಯಮಂತ್ರಿ ನಾಯಕತ್ವದ ಈ ಕಮಿಟಿ 300ಕ್ಕೆ ಇಳಿಸಿತ್ತು.

224 ಕ್ಷೇತ್ರಗಳಿಗೆ ಸ್ಪರ್ಧಿಸಲು ಕೊನೆಯ ಹಂತದಲ್ಲಿ ಈಗ ಕಾಂಗ್ರೆ ಹೈಕಮಾಂಡ್ ಬಳಿ 300 ಜನರ ಪಟ್ಟಿ ರೆಡಿ ಇದೆ. ಈ 300 ಜನರ ಪಟ್ಟಿಯನ್ನು 224ಕ್ಕೆ ಇಳಿಸುವಂತಹ ಅತ್ಯಂತ ಕ್ಲಿಷ್ಟಕರ ಮತ್ತು ಮಹತ್ತರವಾದ ಜವಾಬ್ದಾರಿಯನ್ನು ನಿರ್ವಹಿಸಿದವರೆಂದರೆ ಎ.ಕೆ. ಆಂಟೋನಿ, ಅಂಬಿಕಾ ಸೋನಿ ಮತ್ತು ವಯಲಾಲ್ ರವಿ ಎಂಬ ಮೂರು ಸದಸ್ಯರ ಸಮಿತಿ. ಆಂಟೋನಿ ನಾಯಕತ್ವದ ಈ ಸಮಿತಿ ಕೊನೆಗೆ 300 ಜನರ ಪಟ್ಟಿಯನ್ನು 250ಕ್ಕೆ ಇಳಿಸಿ ಹೈಕಮಾಂಡಿಗೆ ನೀಡಿದೆ.

ಅಂದರೆ 224 ಸ್ಥಾನಗಳಿಗೆ ಈಗ 250 ಆಕಾಂಕ್ಷಿಗಳಿದ್ದಾರೆ. 25 ಜನ ಹೆಚ್ಚಿನ ಅಭ್ಯರ್ಥಿಗಳನ್ನು ಕಾಂಗ್ರೆ ಹೈ ಕಮಾಂಡ್ ತೆಗೆದುಹಾಕಬೇಕಾಗಿದೆ. ಇದರರ್ಥ ಕೇವಲ 25 ಕ್ಷೇತ್ರಗಳಿಗೆ ಮಾತ್ರ ಎರಡೆರಡು ಅಭ್ಯರ್ಥಿಗಳ ಹೆಸರು ಕಾಂಗ್ರೆ ಹೈ ಕಮಾಂಡ್ ಬಳಿ ಇದೆ. ಉಳಿದಂತೆ ಇನ್ನೂರು ಕ್ಷೇತ್ರಗಳಿಗೆ ಈಗಾಗಲೇ ಕಾಂಗ್ರೆ ಹೈಕಮಾಂಡ್ ತನ್ನ ಅಭ್ಯರ್ಥಿಯನ್ನು ಆಯ್ಕೆ ಮಾಡಿ ಆಗಿದೆ.

ಈ ಇಪ್ಪತ್ತೈದು ಹೆಚ್ಚುವರಿ ಅಭ್ಯರ್ಥಿಗಳು ಯಾರು? ಅವರಿಗೆ ಟಿಕೆಟ್ ಕೊಡದಿದ್ದರೆ ಪಕ್ಷಕ್ಕೆ ಯಾವ ರೀತಿಯ ತೊಂದರೆ ಆಗಬಹುದು? ಈ ಇಪ್ಪತ್ತೈದು ಜನ ಆಕಾಂಕ್ಷಿಗಳಲ್ಲಿ ಎಷ್ಟು ಜನ ಟಿಕೆಟ್ ಸಿಗದಿದ್ದ ಕಾರಣಕ್ಕೆ ಬೇರೆ ಪಕ್ಷಕ್ಕೆ ಹಾರಬಹುದು? ಎಂಬಿತ್ಯಾದಿ ವಿಷಯಗಳ ಬಗ್ಗೆ ಈಗ ಹೈಕಮಾಂಡ್ ಅಂತಿಮವಾಗಿ ಚರ್ಚೆ ನಡೆಸುತ್ತಿದೆ.

ಈ ಪಟ್ಟಿಯಲ್ಲಿ ಮಹಿಳೆಯರಿಗೆ ಪ್ರಾಮುಖ್ಯತೆ ನೀಡಿಲ್ಲ ಎಂದು ಸ್ವತಃ ಕಾಂಗ್ರೆ ಅಧ್ಯಕ್ಷೆ ಸೋನಿಯಾ ಗಾಂಧಿ ಆಕ್ಷೇಪಿಸಿದರಂತೆ. ಹಾಗೆಯೇ ಯುವಕರಿಗೆ ನಿರೀಕ್ಷಿಸಿದಷ್ಟು ಸ್ಥಾನ ಸಿಕ್ಕಿಲ್ಲ ಎಂದು ಕಾಂಗ್ರೆಸ ಯುವ ಮಹಾರಾಜ ರಾಹುಲ್ ಗಾಂಧಿ ತನ್ನ ಅಸಮಾಧಾನವನ್ನು ಪ್ರದರ್ಶಿಸಿದರಂತೆ. ಹೀಗಾಗಿ ಈ ಇಪ್ಪತ್ತೈದು ಕ್ಷೇತ್ರಗಳಲ್ಲಿ ಎಷ್ಟು ಮಹಿಳೆಯರಿಗೆ ಮತ್ತು ಎಷ್ಟು ಯುವಕರಿಗೆ ಸೀಟು ಸಿಗುತ್ತದೆ ಎಂಬ ಕುತೂಹಲ ಮಾತ್ರ ಈಗ ಬಾಕಿ ಉಳಿದಿದೆ.


ಕಾಂಗ್ರೆ ಬಗ್ಗೆ ಮೊದಲಿನಿಂದಲೂ ಚಾಲ್ತಿಯಲ್ಲಿರುವ ತಮಾಷೆಯ ಮಾತೆಂದರೆ 'ಆ ಪಕ್ಷದಲ್ಲಿ ಕಾರ್ಯಕರ್ತರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಮುಖ್ಯಮಂತ್ರಿ ಆಕಾಂಕ್ಷಿಗಳು ಇದ್ದಾರೆ' ಎಂಬುದು. ಬಹುಶಃ ಈ ಕಾರಣಕ್ಕಾಗಿ ಹಳೆ ತಲೆಮಾರಿನ ನಾಯಕರು ಅಥವಾ ಮುಖ್ಯಮಂತ್ರಿ ಆಕಾಂಕ್ಷಿಗಳು ಚುನಾವಣೆಯಲ್ಲಿ ಸ್ಪರ್ಧಿಸುವುದು ಬೇಡ ಎಂಬುದು ರಾಹುಲ್ ಗಾಂಧಿಯವರ ಅಭಿಪ್ರಾಯವಂತೆ. ಯಾಕೆಂದರೆ ಮುಖ್ಯಮಂತ್ರಿ ಆಕಾಂಕ್ಷಿಗಳೆಲ್ಲರೂ ಚುನಾವಣೆಯಲ್ಲಿ ಸ್ಪರ್ಧಿಸಿದರೆ ಕಾಂಗ್ರೆ ಕಾರ್ಯಕರ್ತರಿಗೆ ರಾಂಗ್ ಸಿಗ್ನಲ್ ಹೋಗುತ್ತದೆ. ಹಾಗೆಯೇ ಪ್ರತಿ ಮುಖ್ಯಮಂತ್ರಿ ಆಕಾಂಕ್ಷಿಗಳನ್ನು ಸೋಲಿಸಲು ಮತ್ತೊಬ್ಬ ಮುಖ್ಯಮಂತ್ರಿ ಆಕಾಂಕ್ಷಿ ತೆರೆಮರೆಯಲ್ಲಿ ಕಸರತ್ತು ನಡೆಸುತ್ತಾರೆ. ಇದರಿಂದಾಗಿ ಪಕ್ಷಕ್ಕೆ ತೊಂದರೆಯಾಗುತ್ತದೆ ಎಂದು ರಾಹುಲ್ ಗಾಂಧಿ ಸ್ಪಷ್ಟವಾಗಿ ಹೇಳಿದ್ದಾರಂತೆ.

ಬಹುಶಃ ಈ ಕಾರಣದಿಂದಾಗಿ ಈ ಬಾರಿಯ ಚುನಾವಣೆಯಲ್ಲಿ ಎಸ್.ಎಂ.ಕೃಷ್ಣ, ಮಲ್ಲಿಕಾರ್ಜುನ ಖರ್ಗೆ, ಧರ್ಮಸಿಂಗ್, ವೀರಪ್ಪ ಮೊಯ್ಲಿ, ಆಸ್ಕರ್ ಫರ್ನಾಂಡಿಸ್, ಜಾಫರ್ ಷರೀಫ್ ಮೊದಲಾದ ಹಿರಿಯ ನಾಯಕರುಗಳು ಸ್ಪರ್ಧಿಸುವ ಸಾಧ್ಯತೆ ಕಡಿಮೆ ಇದೆ.

ಅಂದರೆ ಕಾಂಗ್ರೆ ಅಧ್ಯಕ್ಷ ಪರಮೇಶ್ವರ್ ಮತ್ತು ಪ್ರತಿಪಕ್ಷದ ನಾಯಕ ಸಿದ್ಧರಾಮಯ್ಯನವರ ನಾಯಕತ್ವದಲ್ಲಿ ಕಾಂಗ್ರೆ ಚುನಾವಣೆಯನ್ನು ಎದುರಿಸಲಿದೆ. ಯಾವುದೇ ಕಾರಣಕ್ಕೂ ಚುನಾವಣೆಯ ಮೊದಲು ಮುಖ್ಯಮಂತ್ರಿ ಯಾರು ಎಂಬುದನ್ನು ಕಾಂಗ್ರೆ ಹೈಕಮಾಂಡ್ ಘೋಷಣೆ ಮಾಡುವುದಿಲ್ಲ. ಇದು ಸದ್ಯಕ್ಕೆ ರಾಹುಲ್ ಗಾಂಧಿ ನೇತೃತ್ವದಲ್ಲಿ ನಡೆಯುತ್ತಿರುವ ಕಾಂಗ್ರೆ ಚುನಾವಣಾ ತಂತ್ರಗಳು.

ಈ ಎಲ್ಲ ತಂತ್ರಗಳನ್ನು ಗಮನಿಸಿದರೆ ಕಳೆದ ಬಾರಿಯ ಚುನಾವಣೆಯ ಸೋಲನ್ನು ಕಾಂಗ್ರೆ ಪಕ್ಷ ಗಂಭೀರವಾಗಿ ಸ್ವೀಕರಿಸಿ ಅದರಿಂದ ಅನೇಕ ಪಾಠಗಳನ್ನು ಕಲಿತಿದೆ ಎಂದು ಹೇಳಬಹುದು. ಜೊತೆಗೆ ಹೊಸ ತಲೆಮಾರಿನ ಯುವ ನಾಯಕ ರಾಹುಲ್ ಗಾಂಧಿ ಸಂಪೂರ್ಣ ಜವಾಬ್ದಾರಿಯನ್ನು ಹೊತ್ತಿರುವುದರಿಂದ ಮತ್ತು ಹಳೆಯ ತಲೆಮಾರಿನ ನಾಯಕರಾದ ಎ.ಕೆ. ಆಂಟೋನಿ ಮೊದಲಾದವರು ಕಾಲಕಾಲಕ್ಕೆ ಸಲಹೆ ಮತ್ತು ಮಾರ್ಗದರ್ಶನ ನೀಡುತ್ತಿರುವುದರಿಂದ ಕರ್ನಾಟಕದ ಕಾಂಗ್ರೆ ಪಕ್ಷ ಹಿಂದೆಂದಿಗಿಂತಲೂ ಹೆಚ್ಚು ಆತ್ಮವಿಶ್ವಾಸದಿಂದ ಚುನಾವಣೆಗೆ ತಯಾರಿ ಆಗಿದೆ. ಈ ಚುನಾವಣೆಯ ಸೋಲುಗೆಲುವು ರಾಹುಲ್ ಗಾಂಧಿಯ ವರ್ಚಸ್ಸಿನ ಮೇಲೆ ನೇರವಾದ ಪರಿಣಾಮ ಬೀರುವುದರಿಂದ ಅವರಿಗೂ ಕರ್ನಾಟಕದ ಗೆಲುವು ಅನಿವಾರ್ಯವಾಗಿದೆ.


● ಶೆಟ್ಟಿ



ಬಿ.ಬಿ.ಚಿಮ್ಮನ ಕಟ್ಟಿ



ಸಿದ್ದುನ್ಯಾಮೇಗೌಡ


ಎಸ್.ಆರ್.ಪಾಟೀಲ್


ಎಂ.ಬಿ.ಸೌದಾಗರ್


ಜೆ.ಟಿ.ಪಾಟೀಲ್


ಎಚ್.ವೈ.ಮೇಟಿ


ಅಜಯ್‌ಕುಮಾರ್ ಸರನಾಯಕ್

ಬಾಗಲಕೋಟೆ ಜಿಲ್ಲೆ: ಚೆಡ್ಡಿಗಳಿಗೆ ನಡುಕ

ಚುನಾವಣೆ ಸಮೀಪಿಸುತ್ತಿದ್ದಂತೆ ಬಿಜೆಪಿಯ 'ದೇಶ ಭಕ್ತರು' ದಿನಂಪ್ರತಿ ಪತ್ರಿಕೆಗಳಲ್ಲಿ ಅಡಿಗಲ್ಲು, ಗುದ್ದಲಿಪೂಜೆ, ವಾರ್ಷಿಕೋತ್ಸವ ಇತ್ಯಾದಿಗಳಲ್ಲಿ ಬ್ಯುಜಿ ಆಗಿದ್ದರೆ ಕಾಂಗ್ರೆಸ್‌ನವರು ಟಿಕೆಟ್ ಯಾರಿಗೆ ಎಂದು ದೆಹಲಿಯಲ್ಲಿ ಬಿಡಾರ ಹೂಡಿದ್ದಾರೆ.

ಬಾದಾಮಿ

ಬಾದಾಮಿ ಮತಕ್ಷೇತ್ರವನ್ನು ಪ್ರತಿನಿಧಿಸುತ್ತಿರುವ ಬಿಜೆಪಿಯ ಅಪ್ಪು ಪಟ್ಟಣಶೆಟ್ಟಿ ಎರಡು ಬಾರಿ ಶಾಸಕನಾದವರು. ಜಗದೀಶ್ ಶೆಟ್ಟರ್ ಚುಂಗು ಹಿಡಿದೆ ಚೆಡ್ಡಿಪಾಳೆ ಸೇರಿದ್ದ ಪಟ್ಟಣಶೆಟ್ಟಿ ತನ್ನ ಅಧಿಕಾರಾವಧಿಯನ್ನು ಕಾಂಟ್ರಾಕ್ಟು, ಉಸುಕಿನ ವ್ಯವಹಾರದ, ಟ್ರಾನ್ಸ್‌ಫರ್ ಇತ್ಯಾದಿಯಲ್ಲೇ ಕಳೆದವರು. ಯಡ್ಡಿ ವಿರುದ್ಧ ರೆಡ್ಡಿಗಳು ಬಂಡಾಯ ಎದ್ದಾಗ ರೆಡ್ಡಿಗಳೊಂದಿಗೂ, ಅದೇ ಯಡ್ಡಿ ಜಗದೀಶ್ ಶೆಟ್ಟರ್ ವಿರುದ್ಧ ತೊಡೆ ತಟ್ಟಿದಾಗ ಯಡ್ಡಿ ಜೊತೆಗೂ ಇದ್ದು ಸಾಕಷ್ಟು 'ಗಳಿಸಿದ' ಕುಖ್ಯಾತಿ ಈ ಪಟ್ಟಣಶೆಟ್ಟಿಯದ್ದು.

ಮೊನ್ನೆ ನಡೆದ ಸ್ಥಳೀಯ ನಗರಸಭೆ ಚುನಾವಣೆಯಲ್ಲಿ ಪಟ್ಟಣಶೆಟ್ಟಿಯ ಸ್ವಂತ ಊರಾದ ಬಾದಾಮಿಯಲ್ಲಿ ದೊಡ್ಡ ಶಾಕ್ ಆಯಿತು. ಇವರ ಸಂಬಂಧಿಯಾದ ಮಹಾಂತೇಶ ಮಮದಾಪೂರನೆಂಬ ಯುವಕ ಜೆಡಿಎಸ್ ಸೇರಿದ ಕೆಲವೇ ದಿನಗಳಲ್ಲಿ ಬಾದಾಮಿ ಪುರಸಭೆಯನ್ನು ತನ್ನ ತೆಕ್ಕೆಗೆ ತೆಗೆದುಕೊಂಡು ಪಟ್ಟಣಶೆಟ್ಟಿಗೆ ಭರ್ಜರಿ ಟಾಂಗ್ ನೀಡಿದ್ದಾರೆ. ಅದೇ ಹೊತ್ತಿಗೆ ಜಗದೀಶ್ ಶೆಟ್ಟರ್‌ರ ಅಜ್ಜಿಯ ಊರು ಕೇರೂರ್ ಕಾಂಗ್ರೆಸ್ ಪಾಲಾಗಿದೆ. ಇದರ ಅರ್ಥ ಇಷ್ಟೇ: ಬರುವ ಚುನಾವಣೆಯಲ್ಲಿ ಜೆಡಿಎಸ್-ಕಾಂಗ್ರೆಸ್ ಹಣಾಹಣಿಯಲ್ಲಿ ಬಿಜೆಪಿಯ ಶೆಟ್ಟಿ ಠೇವಣಿಗೆ ಪರದಾಡಬೇಕಿದೆ.

ಹುನಗುಂದ

ಹುನಗುಂದದ ಶಾಸಕ ದೊಡ್ಡನಗೌಡ ಪಾಟೀಲ ಮೂಲತಃ ಕುಷ್ಟಗಿ ತಾಲ್ಲೂಕಿನವರು. ಈತ ಎರಡು ಬಾರಿ ಗೆದ್ದಿದ್ದರೂ ತನ್ನ ಅಧಿಕಾರಾವಧಿಯನ್ನು ಜನಪರವಾಗಲ್ಲದೆ ತನ್ನ ಗ್ರಾನೈಟ್ ವ್ಯವಹಾರದಲ್ಲೇ ಕಳೆದವನು.

ಈಗ ಕಾಂಗ್ರೆಸ್‌ನ ವಿಜಯಾನಂದ ಕಾಶಪ್ಪನವರ್ ಬಿಜೆಪಿಯ ದೊಡ್ಡನಗೌಡ ಪಾಟೀಲರಿಗೆ ಸವಾಲಾಗಿದ್ದಾರೆ. ಲಿಂಗಾಯತ ಪಂಚಮಸಾಲಿಗಳ ಮೇಲೆ ಸಂಪೂರ್ಣ ಹಿಡಿತ ಹೊಂದುವುದರಲ್ಲಿ ಕಾಶಪ್ಪನವರ್ ಸಫಲರಾಗಿದ್ದಾರೆ. ಜೊತೆಗೆ ಮುಸ್ಲಿಂ ಹಾಗು ಇತರೆ ಕಾಂಗ್ರೆಸ್ ಮತಗಳನ್ನು ಒಂದೆಡೆ ಕಲೆ ಹಾಕುವಲ್ಲಿ ಯಶಸ್ವಿಯಾಗಿದ್ದಾರೆ. ಹುನಗುಂದ-ಇಳಕಲ್ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಕಾಂಗ್ರೆಸ್ ಜಯಭೇರಿ ಬಾರಿಸುವ ಮೂಲಕ ಕಾಶಪ್ಪನವರ್ ತಮ್ಮ ತಾಕತ್ತನ್ನು ಪ್ರದರ್ಶಿಸಿದ್ದಾರೆ.

ಈ ಬಾರಿಯ ಚುನಾವಣೆಯಲ್ಲಿ ಹುನಗುಂದದಲ್ಲಿ ಬಿಜೆಪಿಯ ಕಮಲ ಕೆಸರಲ್ಲಿ ಲೀನವಾಗುವುದರಲ್ಲಿ ದುಸರಾ ಮಾತೇ ಇಲ್ಲ ಅನ್ನಬಹುದು.

ಬೀಳಗಿ

2008ರಲ್ಲಿ ಹತ್ತಾರು ಕೋಟಿ ಖರ್ಚು ಮಾಡಿದರೂ ಕಾಂಗ್ರೆಸ್‌ನ ರೆಡ್ಡಿ ಜನಾಂಗದ ಅಜಯಕುಮಾರ್ ಸರನಾಯಕನ ವಿರುದ್ಧ ಕೇವಲ ಎರಡೂವರೆ ಸಾವಿರ ಮತಗಳ ಅಂತರದಲ್ಲಿ ಮಂತ್ರಿ ಮುರುಗೇಶ್ ನಿರಾಣಿ ಗೆದ್ದುಬಂದಿದ್ದರು. ಆದರೆ ಈ ಬಾರಿ ಅವರ ಸ್ವಜಾತಿ ಪಂಚಮಸಾಲಿ ಲಿಂಗಾಯತರು ನಿರಾಣಿಗೆ ಅರ್ಧಚಂದ್ರ ತೋರಿಸುವುದು ಖಾತ್ರಿಯಾಗಿದೆ.

ಆದ್ದರಿಂದ ನಿರಾಣಿ ಒಮ್ಮೆ ಕೆಜೆಪಿಯತ್ತ ಮಗದೊಮ್ಮೆ ಬಿಜೆಪಿಯತ್ತ ನೋಡುತ್ತ ಗೊಂದಲದ ಗೂಡಾಗಿದ್ದಾರೆ.

ಮಂತ್ರಿ ಆಗಿದ್ದಾಗ ಕಂಡವರು ಭೂಮಿ ಕಬಳಿಸಿದ್ದ, ತನ್ನ ವಿರೋಧಿಗಳನ್ನು ಹತ್ತಿಕ್ಕಲು ಗೂಂಡಾ ಪ್ರವೃತ್ತಿ ಅನುಸರಿಸಿದ್ದ ತನ್ನ ಸಕ್ಕರೆ ಕಾರ್ಖಾನೆಯ ವಿರುದ್ಧ ಹೋರಾಟ ಮಾಡಿದ ರೈತರನ್ನು ಜೈಲಿಗೆ ಕಳಿಸಿದ ಅಪಕೀರ್ತಿ ನಿರಾಣಿಗಿದೆ. ನಿರಾಣಿ ರೈತರಿಗೆ ನೀಡಬೇಕಾದ ಮೂರು ವರ್ಷದ ಕಬ್ಬಿನ ಬಿಲ್ ನೀಡಿಲ್ಲ, ಊರಿಗೆ ಅಂಟಿಕೊಂಡೆ ಇರುವ ನಿರಾಣಿ ಶುಗರ್ಸ್‌ನ ತ್ಯಾಜ್ಯ ಪ್ರತಿ ಮನೆ ಅಂಗಳದಲ್ಲಿ ಬಿದ್ದು ಇಡೀ ಮುಧೋಳ ಗಬ್ಬೆದ್ದುಹೋಗಿದೆ. ಇದರ ವಿರುದ್ಧ ಹೋರಾಟ ಮಾಡಿದವರ ಮೇಲೆ ಬಾಡಿಗೆ ಗೂಂಡಾಗಳನ್ನು ನಿರಾಣಿ ಛೂ ಬಿಟ್ಟಿದ್ದ.

ಈ ಹಿನ್ನೆಲೆಯಲ್ಲಿ ನಿರಾಣಿ ಈ ಬಾರಿ ಜೆಟಿ.ಪಾಟೀಲ್‌ನ 'ಕೈ' ಬಲದ ಮುಂದೆ ಮುದುಡಿಕೊಂಡಿದ್ದಾರೆ. ಆ ಕಾರಣಕ್ಕೇ ಈಗ ಬೀಳಗಿಯಿಂದ ಪಲಾಯನ ಮಾಡುವ ಯೋಚನೆಯಲ್ಲಿದಾರೆ.

ಮುಧೋಳ

ಮೀಸಲು ಕ್ಷೇತ್ರವಾದ ಮುಧೋಳದಲ್ಲಿ ದಲಿತ ಎಡಗೈ ಸಮುದಾಯದ ಮಹಿಳೆಯರೇ ಅತಿಹೆಚ್ಚಿನ ಸಂಖ್ಯೆಯಲ್ಲಿ ಮೈಸೂಬಿನ ದಂಧೆ ನಡೆಯುತ್ತಿರುವುದು ಒಂದು ವಿಪರ್ಯಾಸ. ಒಂದು ಸಮೀಕ್ಷೆಯ ಪ್ರಕಾರ ರಾಜ್ಯದಲ್ಲೇ ಅಸ್ಪೃಶ್ಯತೆ ಹೆಚ್ಚು ಆಚರಣೆಯಲ್ಲಿರುವುದು ಬಾಗಲಕೋಟೆ ಜಿಲ್ಲೆಯಲ್ಲಿ, ಅದೂಅಲ್ಲದೆ ಮುಧೋಳ ತಾಲ್ಲೂಕು ರಾಜ್ಯದಲ್ಲೇ ಅತಿ ಹೆಚ್ಚು ಎಚ್‌ಐವಿ ಸೋಂಕಿತರನ್ನು ಹೊಂದಿದೆ. ಆ ಕಾರಣಕ್ಕೆ ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ ಮುಧೋಳದ ಪಕ್ಕ ಇಂಗಳಗಿ ಗ್ರಾಮದಲ್ಲಿ ಹೆಚ್‌ಐವಿ ಸೋಂಕಿತ ಮನೆಯಲ್ಲಿ ಗ್ರಾಮವಾಸ್ತವ್ಯ ಮಾಡಿ ಇಡೀ ರಾಜ್ಯದ ಗಮನವನ್ನು ಸೆಳೆದಿದ್ದರು.

ಈ ಕ್ಷೇತ್ರವನ್ನು ದಲಿತ ಸಮುದಾಯದವರೇ ಆದ ಬಿಜೆಪಿಯ ಗೋವಿಂದ ಕಾರಜೋಳ ಪ್ರತಿನಿಧಿಸುತ್ತಿದ್ದಾರೆ. ಆದರೆ ಇವರು ಕ್ಷೇತ್ರದ ಉದ್ಧಾರಕ್ಕೆ ಮಾಡಿದ್ದು ಕಡಿಮೆಯೇ. ಮೊನ್ನೆ ನಡೆದ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಕಾಂಗ್ರೆಸ್ ಜಯಭೇರಿ ಬಾರಿಸಿರುವುದು ಕಾರಜೋಳರ ಅದಕ್ಷತೆಯನ್ನು ಎತ್ತಿತೋರಿಸಿತ್ತು.

ಈ ಬಾರಿ ಕಾಂಗ್ರೆಸ್‌ನಿಂದ ಆರ್.ಬಿ.ತಿಮ್ಮಾಪುರ ಸ್ಪರ್ಧಿಸುವುದು ಗ್ಯಾರಂಟಿ ಆಗಿದೆ. ಕ್ಷೇತ್ರದಲ್ಲಿ ತಿಮ್ಮಾಪುರ ಅವರ ಅಭ್ಭರ್ಟ ಎಷ್ಟಿದೆ ಎಂದರೆ ಕೊನೆ ಗಳಿಗೆಯಲ್ಲಿ ಗೋವಿಂದ ಕಾರಜೋಳ ಬಿಜಾಪುರದ ನಾಗಠಾಣಕ್ಕೆ ಹಾರುವ ಸಾಧ್ಯತೆ ಇದೆ. ಆಕಸ್ಮಾತ್ ಕಾರಜೋಳ ಮುಧೋಳದಿಂದಲೇ ಸ್ಪರ್ಧಿಸಿದರೆ ಅವರ ಸ್ಥಿತಿ 'ಗೋವಿಂದಾ, ಗೋವಿಂದಾ' ಆಗುವುದರ ಬಗ್ಗೆ ಅನುಮಾನಗಳು ಉಳಿದಿಲ್ಲ.

ಬಾಗಲಕೋಟೆ

ಬಿಜೆಪಿಯ ಶಾಸಕ ವೀರಣ್ಣ ಚರಂತಿಮಠ ಬಸವೇಶ್ವರ ವಿದ್ಯಾವರ್ಧಕ ಸಂಘದ ಚೇರ್ಮನ್ ಆಗಿರುವುದರಿಂದ ಆ ಸಂಸ್ಥೆ ತಮ್ಮ ಅಪ್ಪನ ಆಸ್ತಿ ಎಂದೇ ಭಾವಿಸಿದ್ದಾನೆ. ಹೊಗಳುಭಟ್ಟರನ್ನು ತನ್ನ ಸುತ್ತ ಜಮಾಯಿಸಿಕೊಳ್ಳುವ ಚರಂತಿಮಠ ಸಂಘ ಪರಿವಾರದ ಭಂಟ. ದಲಿತರ ಮತ್ತು ಮುಸ್ಲಿಮರ ಪರಮವೈರಿ.

ತನ್ನ ಸಂಘಕ್ಕೆ ಅನುಕೂಲವಾಗಲೆಂದೇ ನವನಗರಕ್ಕೆ ಸಂಪರ್ಕ ಬರದಂತೆ ಮಹಾರುದ್ರಪ್ಪನ ಹಳ್ಳ-ಕಾರಿ ಹಳ್ಳದ ಸೇತುವೆ ಏರಿಸಿ ನವನಗರ-ಬಾಗಲಕೋಟೆಯ ಮುಖ್ಯ ಬಾಜಾರ್ ಎಕ್ಕುಟ್ಟಿಹೋಗುವಂತೆ ಮಾಡಿದ್ದಾನೆ. ಅದರಿಂದ ಬಂದ 'ಕಮೀಷನ್' ಹಣದಲ್ಲಿ ತನಗೊಂದು ಬೃಹತ್ ಬಂಗಲೆಯನ್ನು ಕುಮಾರೇಶ್ವರ ಆಸ್ಪತ್ರೆ ಎದುರಿಗೆ ಕಟ್ಟಿಸಿಕೊಳ್ಳುತ್ತಿದ್ದಾನೆ.

ತಾನು ಎರಡು ಬಾರಿ ಚುನಾವಣೆಗಳಲ್ಲಿ ಗೆಲ್ಲಲು ನೆರವಾಗಿದ್ದ ಪ್ರಕಾಶ್ ತಪಶೆಟ್ಟಿ, ಲಕ್ಷ್ಮೀನಾರಾಯಣ ಕಾಸಟ್ಟ, ವಾಲಿ ಲಿಂಗಪ್ಪ ಕುಮಾರ ಯಳ್ಳಿಗುತ್ತಿ, ವಿಜಯಕುಮಾರ್ ಅಂಗಡಿ ತರಹದ ಜನರನ್ನು ಈಗ ಚರಂತಿಮಠ ದೂರ ಮಾಡಿದ್ದಾನೆ. ಇವರೆಲ್ಲ ಈ ಬಾರಿ ಕಾಂಗ್ರೆಸ್ ಅಂಗಳದಲ್ಲಿ ನಿಂತು ಚರಂತಿಮಠನಿಗೆ ಸೆಡ್ಡು ಹೊಡೆಯುತ್ತಿದ್ದಾರೆ. ಸಹಜವಾಗಿಯೇ ಇದು ಚರಂತಿಮಠನಲ್ಲಿ ನಡುಕ ಹುಟ್ಟಿಸಿದೆ.

ಜಮಖಂಡಿ

ಈ ಕ್ಷೇತ್ರದಿಂದ ಸಂಘ ಪರಿವಾರದ ಬ್ರಾಹ್ಮಣ ಶ್ರೀಕಾಂತ ಕುಲಕರ್ಣಿ ಕಳೆದ ಬಾರಿ ಆಯ್ಕೆಯಾಗಿದ್ದ. ಆರೆಸ್ಸೆಸ್‌ನಲ್ಲಿ ಚೆಡ್ಡಿ ತೊಟ್ಟು ಲಾಠಿ ತಿರುವುತ್ತಿದ್ದ ಕುಲಕರ್ಣಿಗೆ ಪೇಜಾವರ ಸ್ವಾಮಿ ಟಿಕೆಟ್ ಕೊಡಿಸಿದ್ದರು. ಆಗ ಬಿಜೆಪಿ ಪರ ಬೀಸುತ್ತಿದ್ದ ರಾಜಕೀಯ ಗಾಳಿ ಮತ್ತು ಕಾಂಗ್ರೆಸ್‌ನ ಸಿದ್ದು ನ್ಯಾಮಗೌಡ ಹೆಸರು ಕೆಡಿಸಿಕೊಂಡಿದ್ದರಿಂದ ಈ ಕುಲಕರ್ಣಿ ಗೆದ್ದು ಬಂದಿದ್ದ ಆ ಗೆಲುವಿಗೆ ಸಿದ್ದು ಸವದಿಯೂ ನೆರವು ನೀಡಿದ್ದ.

ಆದರೆ ಈ ಬಾರಿ ಸಿದ್ದು ಸವದಿ ಕುಲಕರ್ಣಿಯ ವಿರುದ್ಧ ತಿರುಗಿ ಬಿದ್ದಿದ್ದಾರೆ. ಜೊತೆಗೆ ಮುರುಗೇಶ್ ನಿರಾಣಿ ಈ ಕ್ಷೇತ್ರಕ್ಕೆ ವಲಸಿಸುವ ಸಾಧ್ಯತೆ ಇದೆ. ಇನ್ನು ಕಾಂಗೆಸ್ ಅಭ್ಯರ್ಥಿಯಾಗಿ ರಾಮಣ್ಣ ಕಲುತಿ ನಿಂತರೆ ಗಾಣಿಗರು ಮತ್ತು ಪಂಚಮಸಾಲಿಗರು ಜೊತೆಗೂಡಿ ಕಲುತಿಯ ಕೈ ಮೇಲೇಳಬಹುದು.

ಆದರೆ ಕಾಂಗ್ರೆಸ್ ಟಿಕೆಟ್‌ಗಾಗಿ ಸಿದ್ದು ನ್ಯಾಮಗೌಡ ಪ್ರಯತ್ನಿಸುತ್ತಿದ್ದಾರೆ. ಈ ನ್ಯಾಮಗೌಡ ಕೂಡ ರೈತರ ಬಿಲ್ ಪಾವತಿಸದೆ ಧೋಕಾ ಮಾಡಿರುವ ಮನುಷ್ಯ. ಈತನಿಗೇನಾದರೂ ಕಾಂಗ್ರೆಸ್ ಟಿಕೆಟ್ ಕೊಟ್ಟರೂ ಕೇವಲ ನಾಲ್ಕಾರು ಸಾವಿರ ಮತಗಳಿರುವ ಬ್ರಾಹ್ಮಣರ ಕುಲಕರ್ಣಿ ಅಚಾನಕ್ಕಾಗಿ ಗೆದ್ದು ಬರಬಹುದಾದಂತಹ ಸ್ಥಿತಿ ಇಲ್ಲಿದೆ.


● ಮೇಘರಾಜ್

ಉಡುಪಿಯ ಬಿಜೆಪಿ ಶಾಸಕರ ನವರಸಭರಿತ ಜೀವನ ವೃತ್ತಾಂತವು

ಪತ್ರಿಕೆಯ ಕಳೆದ ವಾರದ ಸಂಚಿಕೆಯಲ್ಲಿ ಪಾರ್ವತೀಶ ಬರೆದಿರುವ, ಉಡುಪಿಯ ಬಿಜೆಪಿ ಶಾಸಕ ರಘುಪತಿ ಭಟ್ಟರ ಜೀವನ ವೃತ್ತಾಂತದಲ್ಲಿ ಮಲ್ಪೆ ಸಮುದ್ರ ತೀರದ ಸೈಂಟ್ ಮೇರಿ ದ್ವೀಪದ ರೇವ್ ಪಾರ್ಟಿಯ ಪ್ರಸ್ತಾಪ ಬಿಟ್ಟು ಹೋಗಿರುವುದಕ್ಕೆ ನನಗೆ ಶ್ಯಾನೆ ಬೇಸರವಾಗಿದೆ.

ಈ ರೇವ್ ಪಾರ್ಟಿ ಸುದ್ದಿ ಶಾಸಕರ ರಂಗುರಂಗಿನ ಬದುಕಿನ ಪ್ರಮುಖ ಅಧ್ಯಾಯಗಳಲ್ಲಿ ಒಂದಾಗಿದೆ. ಉಡುಪಿ ಸಮೀಪದ ಸೈಂಟ್ ಮೇರಿ ದ್ವೀಪ ನಂದಗೋಕುಲವನ್ನು ನೆನಪಿಸುವಷ್ಟು ನಯನಮನೋಹರವಾಗಿದ್ದು ಕಳೆದ ವರ್ಷ ಫೆಬ್ರವರಿ ತಿಂಗಳಲ್ಲಿ ಉಡುಪಿ ಶಾಸಕರ ಉಮೇದಿನಿಂದ ನಡೆದ ರೇವ್ ಪಾರ್ಟಿ ಎಂಬ ಸಂತೋಷಕೂಟವು ಕೃಷ್ಣನ ರಾಸಲೀಲೆಯನ್ನೇ ನೆನಪಿಸುವಂತಿತ್ತು, ಇದೀಗ, ಎಂಟುನೂರು ವರ್ಷಗಳ ಹಿಂದೆ ಕೃಷ್ಣನ ವಿಗ್ರಹವನ್ನು ವಯಾ ಮಲ್ಪೆ ಉಡುಪಿಗೆ ತಂದ ಮಧ್ವಾಚಾರ್ಯರ ಬೃಹತ್ ಪ್ರತಿಮೆಯೊಂದನ್ನು ಮಲ್ಪೆ ತೀರದಲ್ಲಿ ಸ್ಥಾಪಿಸುವ ಸಿದ್ಧತೆ ನಡೆದಿದ್ದು ಸದ್ರಿ ಶಾಸಕರೇ ಅದರ ನೇತೃತ್ವವನ್ನು ವಹಿಸಿಕೊಂಡಿದ್ದಾರೆ. ಹೀಗೆ ಉಡುಪಿಯ ಶಾಸಕರ ವ್ಯಕ್ತಿತ್ವವು ಶೃಂಗಾರ ಮತ್ತು ಭಕ್ತಿಗಳ ಅಪೂರ್ವ ಸಂಗಮವಾಗಿದೆ. ಅನರಲ್ಲಿ ಭಯ, ಭೀಭತ್ಸ ಮುಂತಾದವುಗಳು ಸೇರಿಕೊಂಡಿರುವುದು ಕೇವಲ ಆಕಸ್ಮಿಕ.

ರಘುಪತಿ ಭಟ್ಟರಂತಹವರು ಶಾಸಕರಾಗಿರುವ ಉಡುಪಿ ಕ್ಷೇತ್ರ ನಿಜಕ್ಕೂ ಧನ್ಯ! ಕ್ಷೇತ್ರಕ್ಕೆ ಅವರು ಮಾಡಿರುವ ಉಪಕಾರಗಳನ್ನು ಕೃತಜ್ಞತಾಪೂರ್ವಕ ನೆನಪಿಸಿಕೊಳ್ಳಲು, ನಿನ್ನೆ ಅಂದರೆ ಎರಡನೆಯ ತಾರೀಕು, ಮಂಗಳವಾರ ಸಂಜೆ, ಉಡುಪಿಯ 'ಪ್ರಜಾಪ್ರಭುತ್ವ ಸಂರಕ್ಷಣಾ ವೇದಿಕೆ'ಯ ವತಿಯಿಂದ ಬೃಹತ್ ಸಮಾವೇಶವೊಂದು ನಡೆಯಿತು. ಆ ಸಭೆಯಲ್ಲಿ ಉಡುಪಿ ಶಾಸಕರ ಬಗೆಗಿನ ಸಿಡಿ ನಕಲಿ ಎಂದೂ, ಇಡೀ ಪ್ರಕರಣವನ್ನು ಶಾಸಕರ ತೇಜೋವಧೆ ಮಾಡಲೆಂದೇ ಸೃಷ್ಟಿಸಲಾಗಿದೆ ಎಂದೂ ಆಪಾದಿಸಲಾಯಿತು.



ಆ ಸಿಡಿ ನಕಲಿಯಾಗಿದ್ದರೆ ಖಂಡಿತವಾಗಿಯೂ ಶಾಸಕರಿಗೆ ಅನ್ಯಾಯವಾಗಿದೆ. ಆದರೆ ಬಿಜೆಪಿಯ ಕಾರ್ಯಕರ್ತರಿಂದ ಕರಾವಳಿಯಲ್ಲಿ ಹಲವರಿಗೆ ಈ ಬಗೆಯ ಅನ್ಯಾಯವಾಗಿದೆ ಮಾತ್ರವಲ್ಲ, ಅವರ ಮೇಲೆ ದೈಹಿಕ ಹಿಂಸೆಯೂ ನಡೆದಿದೆ. ಸಾರ್ವಜನಿಕ ಸ್ಥಳಗಳಲ್ಲಿ ಗಂಡು ಹೆಣ್ಣು, ಅವರು ವಿಭಿನ್ನ ಕೋಮುಗಳಿಗೆ ಸೇರಿದವರಾದರೆ, ಒಟ್ಟಿಗೆ ಕಾಣಿಸಿಕೊಳ್ಳುವುದೇ ಒಂದು ಅಪರಾಧವೆಂಬಂತೆ ಅವರನ್ನು ಹಿಡಿದು ಥಳಿಸಿ ಪೊಲೀಸರಿಗೆ ಒಪ್ಪಿಸುವ ಪ್ರಸಂಗಗಳೂ ನಡೆದಿದೆ. ಪೊಲೀಸರು ಹೀಗೆ ಸಿಕ್ಕಿಬಿದ್ದವರ ಹೆತ್ತವರನ್ನು ಠಾಣೆಗೆ ಕರೆಸಿ 'ಬುದ್ಧಿವಾದ' ಹೇಳಿದ್ದೂ ಇದೆ.

ಮೊನ್ನೆ ಉಡುಪಿಯ ಸಭೆಯಲ್ಲಿ ಊರಿನ ಮಾನ, ಶಾಸಕರ ಮಾನಗಳ ಬಗ್ಗೆ ಕಾಳಜಿ ವಹಿಸಿ ಮಾತನಾಡಿದ ಯಾರಿಗೂ ಈ ಅಮಾಯಕರ ಮಾನವೂ ಅಷ್ಟೇ ಮುಖ್ಯವೆನ್ನಿಸಲಿಲ್ಲ. ಇಂತಹವರು ಈಗ ಪ್ರಜಾಪ್ರಭುತ್ವವನ್ನು ರಕ್ಷಿಸುವ ನೆವದಲ್ಲಿ ಉಡುಪಿಯ ಶಾಸಕರನ್ನು ಸಮರ್ಥಿಸುತ್ತಿದ್ದಾರೆ. ಆ ಸಭೆಯಲ್ಲಿ ಪೇಜಾವರ ಶ್ರೀಗಳವರೂ ಉಪಸ್ಥಿತರಿದ್ದರು. ಶ್ರೀಗಳು ಮಾಮೂಲಿನಂತೆ ತಾನು ಯಾವುದೇ ಪಕ್ಷ ಪಂಗಡಗಳಿಗೆ ಸೀಮಿತವಾಗಿರುವವನಲ್ಲ ಎಂದು ಹೇಳುತ್ತಲೇ ಉಡುಪಿಯ ಶಾಸಕರನ್ನು ವಹಿಸಿಕೊಂಡು ಮಾತನಾಡಿದರು. ಹಿಂದ, ಇದೇ ವರಸೆಯಲ್ಲಿ ಅವರು ಯಡಿಯೂರಪ್ಪನವರ ಪರವಾಗಿಯೂ ಹೇಳಿಕೆ ಕೊಟ್ಟದ್ದುಂಟು. ಶ್ರೀಗಳು ಮುಸ್ಲಿಮರು,ಕ್ರೈಸ್ತರು ಮುಂತಾದ 'ಅನ್ಯಮತೀಯ'ರನ್ನು ಹೊರತುಪಡಿಸಿ ಬೇರೆ ಯಾರಲ್ಲಿಯೂ ಕೆಟ್ಟದ್ದನ್ನು ಕಾಣಲಾರದ ಸಜ್ಜನರು. ಹಾಗಾಗಿ, ಮೊನ್ನೆ ಅವರಿಗೆ ಉಡುಪಿ ಶಾಸಕರ ಬಗ್ಗೆ ಸಹಾನುಭೂತಿ ವ್ಯಕ್ತಪಡಿಸುವಾಗ ಕರಾವಳಿಯಲ್ಲಿ ಬಿಜೆಪಿ ನಡೆಸಿದ ನೈತಿಕ ಪೊಲೀಸುಗಿರಿಯ ಯಾವ ಪ್ರಕರಣವೂ ನೆನಪಾಗಲೇ ಇಲ್ಲ.

ಶ್ರೀಗಳು ಮಾತ್ರವಲ್ಲ, ಆ ಸಭೆಯಲ್ಲಿ ಭಾಗವಹಿಸಿದ ಎಲ್ಲರೂ ಬಿಜೆಪಿ ಬೆಂಬಲಿಗರೇ. ಆದರೆ ಯಾರಿಗೂ ಅದನ್ನು ಹೇಳಿಕೊಳ್ಳುವ ಧೈರ್ಯವಿರಲಿಲ್ಲ. ಬಿಜೆಪಿ ತಲುಪಿರುವ ಈ ಸ್ಥಿತಿಗೆ ನಾವು ಉಡುಪಿಯ ಶಾಸಕರಿಗೆ ಕೃತಜ್ಞರಾಗಿರಬೇಕು!

● ಜಿ.ರಾಜಶೇಖರ್

ತೇರದಾಳ: ಉಮಾಶ್ರೀ ನಿರಾಳ, ಸವದಿಗೆ ತಳಮಳ



ದಿಟ್ಟ ಉಮಾಶ್ರೀ ಇಟ್ಟ ಗಟ್ಟಿ ಹೆಜ್ಜೆ

ಬದುಕಿನ ಹಲವಾರು ಸವಾಲುಗಳನ್ನು ಎದುರಿಸಿ ಗೆದ್ದಿರುವ, ನಾಟಕ ಮತ್ತು ಸಿನಿಮಾ ರಂಗಗಳಲ್ಲಿ ತನ್ನ ಛಾಪನ್ನು ಮೂಡಿಸಿರುವ, ತನ್ನ ಪ್ರತಿಭೆಯಿಂದಲೇ ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಪ್ರಶಸ್ತಿಗಳನ್ನು ಪಡೆದಿರುವ, ಸಾಮಾನ್ಯ ಜನರ ಮತ್ತು ವಿಮರ್ಶಕರ ಪ್ರಶಂಸೆಯನ್ನು ಗಳಿಸಿರುವ, ಸ್ವಾವಲಂಬಿ ಮತ್ತು ಸ್ವಾಭಿಮಾನಿ ಮಹಿಳೆಯಾದ ಉಮಾಶ್ರೀ ಅವರ ಹೊರತಾಗಿ ಬೇರೆ ಯಾರೂ ಇಂತಹ ಹುಂಬ ಧೈರ್ಯ ಮಾಡುತ್ತಿರಲಿಲ್ಲವೇನೋ.

2008ರ ವಿಧಾನ ಸಭಾ ಚುನಾವಣೆಯ ಸಂದರ್ಭದಲ್ಲಿ ಅಂದಿನ ಬಿಜೆಪಿಯ ದಂಡನಾಯಕ ಯಡಿಯೂರಪ್ಪನ ಪರಮಾಪ್ತ, ಲಿಂಗಾಯತ ಸಮುದಾಯದ ಪ್ರಬಲ ನಾಯಕ, ಅಷ್ಟುಹೊತ್ತಿಗಾಗಲೆ ಐದು ವರ್ಷ ಶಾಸಕನಾಗಿದ್ದು ತನ್ನ ರಾಜಕೀಯ ಬೇರುಗಳನ್ನು ಆಳವಾಗಿ ಬಿಟ್ಟಿದ್ದ ಸಿದ್ದು ಸವದಿಯ ವಿರುದ್ಧ ಕಾಂಗ್ರೆಸ್ ಪಕ್ಷದಿಂದ ಅಚಾನಕ್ಕಾಗಿ 'ಬಿ ಫಾರ್ಮ್' ಪಡೆದು ಸ್ಪರ್ಧಿಸುವ ದಿಟ್ಟತನವನ್ನು ಉಮಾಶ್ರೀ ಅಲ್ಲದೆ ಬೇರೆ ಯಾರೂ ತೋರಿಸುತ್ತಿರಲಿಲ್ಲವೇನೋ. ಆದರೆ ಉಮಾಶ್ರೀ ಸಾಮಾನ್ಯ ಮಹಿಳೆಯಲ್ಲ, ಆದ್ದರಿಂದ ಕಾಂಗ್ರೆಸ್ ಪಕ್ಷ ತನಗೆ ಕೊಟ್ಟ ಸವಾಲನ್ನು ಕಿಂಚಿತ್ತೂ ಹಿಂಜರಿಕೆ ಇಲ್ಲದೆ ಉಮಾಶ್ರೀ ಸ್ವೀಕರಿಸಿದರು.

ಆಗ ಪ್ರಾಯಶಃ ಉಮಾಶ್ರೀ ಅವರಿಗೆ ತೇರದಾಳ ಮತಕ್ಷೇತ್ರದ ಆಳವಾದ ಪರಿಚಯವಿರಲಿಲ್ಲ, ಇನ್ನು ಈ ಮತಕ್ಷೇತ್ರ ವ್ಯಾಪ್ತಿಯ ಊರುಗಳ ಬಗ್ಗೆಯಂತೂ ಏನೇನೂ ಗೊತ್ತಿರಲಿಲ್ಲ, ಆದರೂ ಅಸಾಧಾರಣ ಮಹಿಳೆಯಾದ ಉಮಾಶ್ರೀ ತನ್ನ ವೈಯಕ್ತಿಕ ಮತ್ತು ವೃತ್ತಿಬದುಕಿನಲ್ಲಿ ಎದುರಾದ ಸವಾಲುಗಳನ್ನು ಹೇಗೆ ಎದುರಿಸಿ ಗೆದ್ದರೋ ಹಾಗೆಯೇ ತನ್ನ ರಾಜಕೀಯ ಬದುಕಿನಲ್ಲಿನ ಈ ಸವಾಲನ್ನೂ ಎದುರಿಸಿ ಗೆಲ್ಲಲು ನಿರ್ಧರಿಸಿದರು. ಈ ಕ್ಷೇತ್ರದಲ್ಲಿ ತನ್ನ ಬೆಂಬಲಕ್ಕೆ ನಿಂತವರೊಂದಿಗೆ ಮತಕ್ಷೇತ್ರದ ಹಳ್ಳಿ, ಪಟ್ಟಣಗಳ ಮನೆ-ಮನೆಗೂ ಸುತ್ತಿದರು. ಇಲ್ಲಿನ ಜನ ತನ್ನನ್ನು ಸೋಲಿಸಿದ್ದರೂ ಬೆಂಗಳೂರಿಗೆ ಹಿಂದಿರುಗದೆ ಇಲ್ಲೇ ಕೆಲಸ ಮಾಡುತ್ತಾ ಇಲ್ಲಿನ ಜನರ ಮನ ಗೆದ್ದರು. ಸಾಮಾನ್ಯರ ಮನೆಮನೆಗೂ ಹೋಗಿ ಅವರ ದುಃಖದ ಸಮಯದಲ್ಲಿ, ಸಂತೋಷದ ಗಳಿಗೆಯಲ್ಲಿ ಭಾಗಿಯಾದರು. ಎಷ್ಟರಮಟ್ಟಿಗೆ ಎಂದರೆ ಇವತ್ತು ಉಮಾಶ್ರೀ ಹೊರಗಿನವರು ಎಂದು ಅವರ ವಿರೋಧಿಗಳೂ ಅಪಪ್ರಚಾರ ಮಾಡುವ ಸ್ಥಿತಿಯಲ್ಲಿಲ್ಲ.

ಸೂಕ್ಷ್ಮ ಸಂವೇದನೆಯ, ಜನಪರ ಕಾಳಜಿಯ, ದಮನಿತ ಸಮುದಾಯಗಳ ಸಂಕಷ್ಟಗಳನ್ನು ಅರಿತಿರುವ ಉಮಾಶ್ರೀ ಅವರ ವಿರುದ್ಧ ಸ್ಪರ್ಧಿಸುತ್ತಿರುವವರು ಒರಟು ಸ್ವಭಾವದ ಸಿದ್ದು ಸವದಿ.

ತೇರದಾಳ ಮತಕ್ಷೇತ್ರದ ಜನರ ಮುಂದಿರುವ ಆಯ್ಕೆ ಸರಳವಾದದ್ದು. ಆದ್ದರಿಂದ ಉಮಾಶ್ರೀ ಅವರ ಗೆಲುವು ಕೂಡ ಸ್ಪಷ್ಟವಾದದ್ದು!



ಸಿದ್ದು ಸವದಿ

ಹತ್ತು ವರ್ಷಗಳ ಕಾಲ ಶಾಸಕನಾಗಿ ಅಧಿಕಾರ ಅನುಭವಿಸಿದ, ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪನ ವಲಯದೊಂದಿಗೆ ಗುರುತಿಸಿಕೊಂಡು ಸರ್ಕಾರದ ಮುಖ್ಯ ಸಚೇತಕನಾಗಿ ಗೂಟದ ಕಾರಿನ ಸುಖವನ್ನು ಅನುಭವಿಸಿದ, ತನ್ನ ಸ್ವಜಾತಿ ಪಟಾಲಮ್ಮನ್ನು ಕಟ್ಟಿಕೊಂಡು ಮೆರೆದ 'ಸಂಸ್ಕೃತ '(?) ಭಾಷಾ ಪ್ರವೀಣ (ಬಾಕ್ಸ್ ನೋಡಿ) ತೇರದಾಳದ ಬಿಜೆಪಿ ಶಾಸಕ ಸಿದ್ದು ಸವದಿಯನ್ನು ಚುನಾವಣೆಗೂ ಮುನ್ನವೇ ಸೋಲಿನ ಭೀತಿ ಕಾಡಲಾರಂಭಿಸಿದೆ. ಉಮಾಶ್ರೀ ಎಂಬ ದಿಟ್ಟ ಮಹಿಳೆ ಸಿದ್ದು ಸವದಿಗೆ ನಡುಕ ಹುಟ್ಟಿಸಿದ್ದಾರೆ.

ತನ್ನ 'ಆಚಾರ', 'ವಿಚಾರ'ಗಳನ್ನೆಲ್ಲ ಜನ ಸಹಿಸಿಕೊಂಡದ್ದನ್ನೇ ಸಮ್ಮತಿ ಎಂದು ಅರ್ಥ ಮಾಡಿಕೊಂಡಿದ್ದ ಸಿದ್ದು ಸವದಿಗೆ ಮೊನ್ನೆ ನಡೆದ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಮರ್ಮಾಘಾತವೇ ಆಗಿದೆ. ಕಳೆದ ಸಾರಿಯ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಈ ಮತಕ್ಷೇತ್ರದ ಬಹುಪಾಲು ಕಡೆಗಳಲ್ಲಿ ಬಿಜೆಪಿ ತನ್ನ ಪ್ರಾಬಲ್ಯವನ್ನು ಮೆರೆದಿತ್ತು. ಅದಕ್ಕೆ ಹೋಲಿಸಿದರೆ ಕಾಂಗ್ರೆಸ್ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವಲ್ಲೂ ವಿಫಲವಾಗಿತ್ತು. ಅಂದು ಇಲ್ಲಿ ಬಿಜೆಪಿಯ ಕಮಲ ಅರಳಿದ್ದು ಕಾಂಗ್ರೆಸ್ ಅಭ್ಯರ್ಥಿ ಉಮಾಶ್ರೀ ಅವರಿಗೆ ಮತಪೆಟ್ಟಿಗೆಯಲ್ಲಿ ಶಾಪವಾಗಿ ಪರಿಣಮಿಸಿತ್ತು.

ಕಳೆದ ಬಾರಿ ಚುನಾವಣೆಗೆ ಬರೀ 20 ದಿನಗಳಿರುವಾಗ ಕಾಂಗ್ರೆಸ್ ಪಕ್ಷ ಉಮಾಶ್ರೀ ಅವರಿಗೆ ಟಿಕೆಟ್ ಕೊಟ್ಟು ತೇರದಾಳ ಮತಕ್ಷೇತ್ರಕ್ಕೆ ಕಳುಹಿಸಿತ್ತು. ಏಕಾಏಕಿ ಉಮಾಶ್ರೀ ಎಂಟ್ರಿ ಕೊಟ್ಟಾಗ ಸ್ಥಳೀಯ ಕಾಂಗ್ರೆಸ್ ನಾಯಕರು ದಂಗು ಬಡಿದುಹೋಗಿದ್ದರು. ಬೆಂಗಳೂರಿನಿಂದ ಏಕಾಂಗಿಯಾಗಿ ಬಂದು ಸವದಿಯಂತಹ ಪ್ರಬಲ ಲಿಂಗಾಯತ ನಾಯಕನ ವಿರುದ್ಧ ಉಮಾಶ್ರೀ ತೊಡೆತಟ್ಟಿದಾಗ ಸ್ಥಳೀಯ ಟಿಕೆಟ್ ಆಕಾಂಕ್ಷಿಗಳಾದ ಡಾ. ಪಿ.ಆರ್. ಅವರಾದಿ, ಡಾ. ಎಂ.ಎಸ್. ದಾನಿಗೊಂಡ, ಡಾ. ಎ.ಆರ್. ಬೆಳಗಲಿ ಮಲ್ಲು ಬಾನಕಾರ, ಬಸಪ್ಪ ಉರಭಿನ್ನವರ ಮುಂತಾದವರು ತಮ್ಮ ರಾಜಕೀಯ ಭವಿಷ್ಯಕ್ಕಾಗಿ ಉಮಾಶ್ರೀಯನ್ನು ಸೋಲಿಸಲೇಬೇಕೆಂದು ಪಣತೊಟ್ಟು ಸವದಿಗೆ ಬೆಂಬಲಿಸಿದ್ದರು. ಇಂತಹ ವಿರೋಧಿಗಳ ನಡುವೆ ಮತ್ತು ಅಲ್ಪಾವಧಿಯ ಬಿಕ್ಕಟ್ಟಿನ ಪರಿಸ್ಥಿತಿಯಲ್ಲೂ ಉಮಾಶ್ರೀ ತೀವ್ರ ಪೈಪೋಟಿ ನೀಡಿದ್ದರು. ಅಂದು ಅವರು ಸವದಿ ವಿರುದ್ಧ ಸುಮಾರು ಇಪ್ಪತ್ತು ಸಾವಿರ ಮತಗಳ ಅಂತರದಲ್ಲಿ ಸೋತಿದ್ದರು.

ಉಮಾಶ್ರೀ ಯಶಸ್ಸು

ಅವತ್ತು ಉಮಾಶ್ರೀ ಅವರನ್ನು ತೇರದಾಳದ ಮತದಾರರು ಸೋಲಿಸಿದ್ದರೂ ಆಕೆ ಧೃತಿಗೆಡಲಿಲ್ಲ, ಮತದಾರರ ಕೈಬಿಡಲಿಲ್ಲ, ಬದಲಾಗಿ ಅವರು ಕಳೆದ ಐದು ವರ್ಷಗಳ ಕಾಲ ಯಾವುದೇ ಅಧಿಕಾರ ಇಲ್ಲದಿದ್ದರೂ ಮತಕ್ಷೇತ್ರದ ತುಂಬ ಸುತ್ತಾಡಿ ಮಕಾಡೆ ಮಲಗಿದ್ದ ಕಾಂಗ್ರೆಸ್ ಪಕ್ಷವನ್ನು ಎಬ್ಬಿಸಿ ನಿಲ್ಲಿಸುವಲ್ಲಿ ಯಶಸ್ವಿಯಾಗಿದ್ದಾರೆ. ಅವರ ಪರಿಶ್ರಮದ ಪರಿಣಾಮವೆಂಬಂತೆ ಮೊನ್ನಿನ ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಬಿಜೆಪಿ ಹೀನಾಯವಾಗಿ ಸೋಲು ಅನುಭವಿಸಿತಲ್ಲದೆ ಕಾಂಗ್ರೆಸ್ ತನ್ನ ಪ್ರಾಬಲ್ಯವನ್ನು ಬಿಚ್ಚಿಸಿಕೊಂಡು ಗೆಲುವಿನ ನಗೆ ಬೀರಿದೆ.

ಮಹಾಲಿಂಗಪುರ ಮುನ್ಸಿಪಾಲಿಟಿಯ 23 ಕ್ಷೇತ್ರಗಳಲ್ಲಿ ಕಳೆದ ಸಾರಿ 20 ಕ್ಷೇತ್ರ ಗೆದ್ದಿದ್ದ ಬಿಜೆಪಿ ಈ ಸಾರಿ ಬರೀ 12 ಸ್ಥಾನಗಳನ್ನು ಮಾತ್ರ ಗೆದ್ದಿದೆ. ಅಂತು ಇಲ್ಲಿ ಒಂದೇ ಒಂದು ಸ್ಥಾನ ಗೆದ್ದಿದ್ದ ಕಾಂಗ್ರೆಸ್ ಈ ಸಾರಿ 10 ಸೀಟುಗಳನ್ನು ಬಾಚಿಕೊಂಡಿದೆ. ಈ ಹಿಂದೆ ಸವದಿಯ ಮನೆ ಇರುವ ಬನಹಟ್ಟಿ-ರಬಕವಿ ನಗರಸಭೆಯ 31 ವಾರ್ಡ್‌ಗಳ ಪೈಕಿ 24 ವಾರ್ಡ್‌ಗಳು ಬಿಜೆಪಿ ಪಾಲಾಗಿದ್ದವು. ಆದರೆ ಈ ಸಾರಿ ಬಿಜೆಪಿ ಸ್ಥಾನ ಗಳಿಕೆ 13 ಕ್ಕೆ ಇಳಿದಿದೆ.

ಅಂದು ಐದು ಸೀಟುಗಳನ್ನು ಗೆದ್ದಿದ್ದ ಕಾಂಗ್ರೆಸ್ ಈಗ 17 ಸೀಟು ಗೆದ್ದಿದೆ. ಇದೆಲ್ಲ ಆದದ್ದು ಉಮಾಶ್ರೀ ಅವರ ಪರಿಶ್ರಮದಿಂದ ಎಂಬುದರ ಬಗ್ಗೆ ಯಾರಲ್ಲೂ ಅನುಮಾನವಿಲ್ಲ, ಇದೇ ಕಾರಣಕ್ಕೆ ಕಾಂಗ್ರೆಸ್ ಹೈಕಮಾಂಡಿಗೆ ಕೆಪಿಸಿಸಿ ಅಧ್ಯಕ್ಷ ಮತ್ತು ವಿರೋಧಿ ಪಕ್ಷದ ನಾಯಕ ಸಿದ್ದರಾಮಯ್ಯನವರು ಆರಂಭದಲ್ಲಿ ಸಲ್ಲಿಸಿದ ಸಂಭವನೀಯ ಅಭ್ಯರ್ಥಿಗಳ ಪಟ್ಟಿಯಲ್ಲಿ ಇದ್ದ ಏಕೈಕ ಮಹಿಳೆಯ ಹೆಸರು ಇದೇ ಉಮಾಶ್ರೀ ಅವರದ್ದು!

ಹೀಗೆ ಕಳೆದ ಐದು ವರ್ಷಗಳಲ್ಲಿ ಈ ಕ್ಷೇತ್ರದಲ್ಲಿ ಇತ್ತ ಉಮಾಶ್ರೀ ಅವರ ವರ್ಚಸ್ಸು ಏರುತ್ತಿದ್ದಾಗ ಅತ್ತ ಸವದಿಯ ಪ್ರವರ ಕುಗ್ಗುತ್ತಾ ಹೋಯಿತು. ತೇರದಾಳವನ್ನು ತಾಲ್ಲೂಕು ಮಾಡುತ್ತೇನೆಂದು ಜನರಿಗೆ ಭರವಸೆ ನೀಡಿದ್ದ ಸವದಿ ತನ್ನ ಮನೆ ಇರುವ ಬನಹಟ್ಟಿ ನಗರವನ್ನು ತಾಲೂಕನ್ನಾಗಿಸಿದರು. ಇದರಿಂದಾಗಿ ತೇರದಾಳದ ಜನರು ಸವದಿ ವಿರುದ್ಧ ತಿರುಗಿ ಬಿದ್ದರು. ಯಾವ ಮಟ್ಟಿಗೆಂದರೆ ಮೊನ್ನಿನ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಯಾವ ಪಕ್ಷದ ಒಬ್ಬನೇ ಒಬ್ಬ ಅಭ್ಯರ್ಥಿ ಕೂಡ ನಾಮಪತ್ರ ಸಲ್ಲಿಸದೇ ಚುನಾವಣೆಯನ್ನೇ ಬಹಿಷ್ಕರಿಸಿದರು.

ತಿರುಗಿಬಿದ್ದ ಸವದಿ ಬೆಂಬಲಿಗರು

ಕಳೆದ ವಿಧಾನಸಭಾ ಚುನಾವಣೆಯಲ್ಲೇ ಸವದಿ ಗೆಲ್ಲುವುದು ಕಷ್ಟವಾಗಿತ್ತು, ಉಮಾಶ್ರೀ ಪರ ಎದ್ದಿದ್ದ ಅಲೆಯನ್ನು ನೋಡಿ ಗಾಬರಿಗೊಂಡಿದ್ದ ಸವದಿ ಅವರ ಹಿಂಬಾಲಕರು ಅವರನ್ನು ಸೋಲಿಸಲು ಆರಿಸಿಕೊಂಡದ್ದು ವೈಯಕ್ತಿಕ ತೇಜೋವಧೆ ಹಾಗು ಅಪಪ್ರಚಾರವನ್ನು. ಮೂಲತಃ ಅಮಾಯಕ ನೇಕಾರರೇ ಹೆಚ್ಚಾಗಿರುವ ಈ ಮತಕ್ಷೇತ್ರದಲ್ಲಿ ಗಾಳಿಸುದ್ದಿಗಳು ಬೇಗನೆ ಮನೆ ಮನೆ ತಲುಪಿಬಿಡುತ್ತವೆ. ಇದನ್ನೇ ಬಂಡವಾಳ ಮಾಡಿಕೊಂಡ ಬಿಜೆಪಿ ಉಮಾಶ್ರೀ ಅವರ ಬಗ್ಗೆ ಇಲ್ಲದ್ದನ್ನೆಲ್ಲ ಅಪಪ್ರಚಾರ ಮಾಡಿತು. 'ಉಮಾಶ್ರೀ ಬೆಂಗಳೂರಿನವಳು. ಆಕೆ ಗೆದ್ದರೆ ಇಲ್ಲಿರುವುದಿಲ್ಲ, ಬೆಂಗಳೂರಿಗೆ ಹೋಗುತ್ತಾಳೆ. ಆಕೆ ಚಿತ್ರ ನಟಿಯಾಗಿರುವುದರಿಂದ ಶೂಟಿಂಗ್‌ಗಾಗಿ ಊರೂರು ತಿರುಗುತ್ತಾಳೆ. ಆಕೆ ಇದ್ದಲ್ಲಿಗೆ ಜನ ತಮ್ಮ ಕೆಲಸಕ್ಕೆ ಆಕೆಯನ್ನು ಹುಡುಕಿಕೊಂಡು ಹೋಗಬೇಕಾಗುತ್ತದೆ' ಎಂಬುದರಿಂದ ಹಿಡಿದು ಬೆಂಗಳೂರು ಮೂಲದ ಯಾವುದೋ ಪತ್ರಿಕೆಯಲ್ಲಿ ಉಮಾಶ್ರೀ ಅವರ ವೈಯಕ್ತಿಕ ಬದುಕಿನ ಬಗ್ಗೆಯೂ ಅಸಹ್ಯವಾಗಿ ಬರೆಸಿ ಆ ಪತ್ರಿಕೆಯ ಪ್ರತಿಗಳನ್ನು ಕ್ಷೇತ್ರದ ತುಂಬ ಹಂಚಿದ್ದರು.

ಆದರೆ ಈಗ ಪರಿಸ್ಥಿತಿ ಬದಲಾಗಿದೆ. ಕಳೆದ ಬಾರಿ ಉಮಾಶ್ರೀ ಗೆದ್ದು ಬೆಂಗಳೂರಿಗೆ ಹೋಗುವುದಿರಲಿ, ಸೋತರೂ ಐದು ವರ್ಷಗಳ ಕಾಲ ಮತಕ್ಷೇತ್ರ ಬಿಟ್ಟು ಅವರು ಕದಲಲಿಲ್ಲ, ಬದಲಾಗಿ ಈ ಅವಧಿಯಲ್ಲಿ ಪ್ರತಿ ಹಳ್ಳಿಯ ಮನೆ-ಮನೆಗೂ ತಿರುಗಿ ಜನರ ವಿಶ್ವಾಸ ಗಳಿಸಿಕೊಳ್ಳುವುದರಲ್ಲಿ ಯಶಸ್ವಿಯಾಗಿದ್ದಾರೆ. ಒಂದೆಡೆ ಜನ ಉಮಾಶ್ರೀ ಅವರ ಬೆಂಬಲಕ್ಕೆ ನಿಲ್ಲಲಾರಂಭಿಸಿದ ಅವಧಿಯಲ್ಲೇ ಇನ್ನೊಂದೆಡೆ ಕಳೆದ ಬಾರಿ ಸವದಿಯ ಬೆನ್ನಿಗೆ ನಿಂತಿದ್ದ ಪ್ರಮುಖ ನಾಯಕರಲ್ಲಿ ಬಹುತೇಕರು ತಿರುಗಿ ಬಿದ್ದಿದ್ದಾರೆ. ತೇರದಾಳ ಮುನ್ಸಿಪಾಲಿಟಿಯ ಮಾಜಿ ಅಧ್ಯಕ್ಷ ಬಸವರಾಜ ಬಾಳಿಕಾಯಿ, ಸದಸ್ಯ ಶಂಕರ ಸೊರಗಾಂವಿ ತರಹದ ಪ್ರಮುಖ ನಾಯಕರು ಈಗ ಶತಾಯುಗತಾಯ ಸವದಿಯನ್ನು ಸೋಲಿಸಲೇಬೇಕು ಎಂದು ತೊಡೆ ತಟ್ಟಿ ನಿಂತಿದ್ದಾರೆ. ಜೊತೆಗೆ ಸವದಿಯ ಪರಮಾಪ್ತ ಬಳಗದ ಭಾಗವಾಗಿದ್ದ ಪರಶುರಾಮ ಕೊಕ್ಕನ್ನವರ, ಚಿದಾನಂದ ಹೊರಟ್ಟಿ, ಹೊರಟ್ಟಿಯ ಪತ್ನಿ ರಬಕವಿ ನಗರಸಭೆ ಮಾಜಿ ಅಧ್ಯಕ್ಷೆ ಅನುರಾಧಾ ಹೊರಟ್ಟಿ ಮುಂತಾದವರು ನಗರಸಭೆ ಚುನಾವಣೆಯನ್ನೂ ಗೆಲ್ಲಲಾಗದೇ ಮನೆ ಸೇರಿದ್ದಾರೆ. ಹೀಗೆ ಹೋದ ಬಾರಿ ಸವದಿ ಗೆಲುವಿಗೆ ಶ್ರಮಿಸಿದ್ದ ಪ್ರಮುಖ ಬೆಂಬಲಿಗರು ಈಗ ದೂರವಾಗಿದ್ದಾರೆ ಅಥವಾ ಮೂಲೆ ಗುಂಪಾಗಿದ್ದಾರೆ. ಇದು ಈ ಬಾರಿ ಸವದಿ ಸೋಲುವ ಸ್ಪಷ್ಟ ಸೂಚನೆಗಳನ್ನು ನೀಡುತ್ತಿವೆ.

ಕಾಂಗ್ರೆಸ್‌ನಲ್ಲಿ ತಣ್ಣಗಾದ ಭಿನ್ನಮತ

ಕಳೆದ ಬಾರಿ ಉಮಾಶ್ರೀ ಅವರ ಸೋಲಿಗೆ ನೆರವಾದ ಸ್ಥಳೀಯ ಕಾಂಗ್ರೆಸ್ ನಾಯಕರು ಈ ಸಾರಿಯೂ ಅವರಿಗೆ ಟಿಕೆಟ್ ತಪ್ಪಿಸಲು ಹೆಣಗಾಡಿದರು. ಆದರೆ ಅದ್ಯಾವುದೂ ಉಮಾಶ್ರೀ ಅವರ ಶ್ರಮ ಮತ್ತು ನಿಷ್ಠೆಯ ಮುಂದೆ ಸಫಲವಾಗಲಿಲ್ಲ. ತೇರದಾಳದಲ್ಲಿ ಇರುವ ಏಕೈಕ ಭರವಸೆಯ ಕಾಂಗ್ರೆಸ್ ನಾಯಕಿ ಉಮಾಶ್ರೀ ಎಂದು ಅರ್ಥಮಾಡಿಕೊಂಡಿರುವ ಸ್ಥಳೀಯ ನಾಯಕರು ರಾಜ್ಯದ ಹಿರಿಯರ ಉಪದೇಶದಂತೆ ಆಕೆಯ ಗೆಲುವಿಗೆ ಒಗ್ಗಟ್ಟಿನಿಂದ ಶ್ರಮಿಸಲು ಮುಂದಾಗಿದ್ದಾರೆ. ಸಹಜವಾಗಿಯೇ ಇದು ಉಮಾಶ್ರೀ ಅವರ ಸಂಭವನೀಯ ಗೆಲುವನ್ನು ಇನ್ನಷ್ಟು ಸರಳಗೊಳಿಸಿದೆ.

ನೇಕಾರರೇ ಬಹುಸಂಖ್ಯಾತರಾಗಿರುವ ತೇರದಾಳ ಮತಕ್ಷೇತ್ರದಲ್ಲಿ ಅದೇ ನೇಕಾರ ಸಮುದಾಯದವರಾದ ಉಮಾಶ್ರೀ ಅವರ ಪರ ಈ ಬಾರಿಯ ಅಲೆ ರಭಸವಾಗಿದೆ. ಆ ಅಲೆಯಲ್ಲಿ ಬಿಜೆಪಿಯ ಸಿದ್ದು ಸವದಿ ಕೊಚ್ಚಿಹೋಗುವುದರಲ್ಲಿ ಸಂಶಯವಿಲ್ಲ.

● ಮಹಾಲಿಂಗಪ್ಪ ಆಲಬಾಳ

ಸಿದ್ದು ಸವದಿ 'ಸಂಸ್ಕೃತಿ' ಎಂತಹದ್ದೆಂದರೆ...

ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಸಿದ್ದು ಸವದಿಯ ಬಿಜೆಪಿ ಹೀನಾಯವಾಗಿ ಹಿನ್ನಡೆ ಅನುಭವಿಸಿದ ನಂತರ 14.3.2013 ರಂದು ರವೀಂದ್ರ ಕಲ್ಬುರ್ಟಿ ಎಂಬುವವರ ತೋಟದಲ್ಲಿ ನಡೆದ ಬಿಜೆಪಿ ಕಾರ್ಯಕರ್ತರ ಚಿಂತನ-ಮಂಥನ ಸಭೆಯಲ್ಲಿ ಸವದಿ ಮಾಡಿದ 'ಸಂಸ್ಕೃತ'(?) ಭಾಷಣದ ಆಯ್ದ ತುಣುಕುಗಳನ್ನು ತೇರದಾಳ ಕ್ಷೇತ್ರದ ಮತದಾರರಿಗಾಗಿ ಇಲ್ಲಿ ನೀಡಿದ್ದೇವೆ:

"ಈ ಚುನಾವಣೆದಾಗ ಯಾರೇ ನಾಟಕ ಮಾಡಿದ್ರ ಅವನ್ನ ಒದ್ದ ಹೊರಗ ಹಾಕ್ರೀ.. ನಿಮಗ ಯಾರದೇ ಬಡ್ಯಾಪ ಇದ್ರ ಬಡೀರಿ... ನಾ ಆದನ ನಿಮ್ಮ ಹಿಂದ... ಅಧಿಕಾರ ನಡೆಸಬೇಕಂತ ಏನಿಲ್ಲ ನನಗ... ಯಾಂವ ಮಗಾರೀ ಅಂವ ಬಡ್ಯಾಂವ... ನಾವೇನ್ ಬಳಿ ತೊಟ್ಟಿಲ್ಲ... ನಾವು ತಾಯಿಹಾಲ ಕುಡದೀವ... ಒದ್ದ ಹಲ್ಲ ಮುರೀರಿ ಬಾಯಾಗಿನು... ಆ ಮಕ್ಕಳನ್ನ.... ಹಿಂದ ನಾ ಆದನ... ಚಪ್ಪಲ್ ಬಾಯ್ಯಾಗ್ ಇಟ್ಟ ಬಡಿಯೂನು... ನಾ ಇರ್ತನ ಅಂಜಬ್ಯಾಡ್ರೀ.... ನಾ ಮಾತ್ರ ಹಂಗ ಮಾಡಾಂವ್... ಯಾ ಮಗನಿಗೂ ಅಂಜಾಂಗಿಲ್ಲ... ನಾ ತಂದ ಅಧಿಕಾರಿಗಳಿದಾರ್... ನಮ್ಮ ಜೋಡಿ..... ಹೆದರಬ್ಯಾಡ್ರೀ.... ಸರಾಯಿ ಬೇಕಂದ್ರ ನಮ್ಮನ್ ಕೇಳ್ರೀ.... ನಮ್ದು ಕುಡೀರೀ.... ಅವು ಒಂದ್ ಬಡದ್ರ... ನೀವ್ ಹತ್ತ ಬಡಿರಿ... ನಾನು 40-45 ಮಂದಿ ಗ್ಯಾಂಗ್ ಮಾಡ್ತನ... ಒಂದಕ್ಕೆ.... ಹತ್ತು ಪಟ್ಟು ಸೇಡು ತೀರಿಸ್ಕೋತನ.... ನಾ.... ಜೈಲಿಗೆ ಹೋಗಾಕು ತಯಾರ ಆದನ.... ನಿಮ್ಮ ಹತ್ತಿರ ಬಂದರ ಒದೀರಿ... ನಾಟಕ ಮಾಡಬ್ಯಾಡ್ರೀ.... ನಮ್ಮ ಲಾಭ ತಿಂದ..... ಯಾರ್ಯಾರ್ ಏನೇನ್ ಮಾಡ್ಯಾರ ಗೊತ್ತೈತಿ ನನಗ......

ಚಾಮರಾಜ: ಬಿಜೆಪಿಗೆ ಗೇಟ್‌ಪಾಸ್

ಚಾಮರಾಜ ಕ್ಷೇತ್ರ ಮೈಸೂರಿನ ಒಂದಾನೊಂದು ಪ್ರತಿಷ್ಠಿತ ಕ್ಷೇತ್ರ. ಕುವೆಂಪುನಗರ, ಸರಸ್ವತಿಪುರಂ, ಕೆಜಿ ಕೊಪ್ಪಲ್, ವಿಜಯನಗರ ಮುಂತಾದ ಪ್ರಮುಖ ಏರಿಯಾಗಳನ್ನು ಒಳಗೊಂಡಿರುವ ಈ ಕ್ಷೇತ್ರವನ್ನು ಈ ಬಾರಿ ಜೆಡಿಎಸ್ ಅಥವಾ ಕಾಂಗ್ರೆಸ್ ಅಭ್ಯರ್ಥಿಗಳಲ್ಲಿ ಯಾರು ಪ್ರತಿನಿಧಿಸಲಿದ್ದಾರೆ ಎಂಬ ಪ್ರಶ್ನೆಗೆ ಇದಮಿತ್ಥಂ ಎಂಬ ಉತ್ತರವಿಲ್ಲ. ಹಾಲಿ ಶಾಸಕರಾಗಿದ್ದ ಶಂಕರಲಿಂಗೇಗೌಡ ಜೆಡಿಎಸ್ ತೆಕ್ಕೆಗೆ ಜಾರಿದ ನಂತರ ಬಿಜೆಪಿ ಪಕ್ಷವಂತೂ ಇಲ್ಲಿ ಠೇವಣಿ ಕಳೆದುಕೊಳ್ಳುವುದು ಕಾಯಂ ಎಂಬ ಮಾತು ಇಡೀ ಕ್ಷೇತ್ರದಾದ್ಯಂತ ಕೇಳಿಬರುತ್ತಿದೆ.

ಕಳೆದ ಚುನಾವಣೆಯಲ್ಲಿ ಬಿಜೆಪಿ ಪಕ್ಷದ ಅಭ್ಯರ್ಥಿಯಾಗಿ ಶಂಕರಲಿಂಗೇಗೌಡ ಸುಮಾರು ಹನ್ನೆರಡು ಸಾವಿರ ಮತಗಳ ಅಂತರದಿಂದ ಆರಿಸಿ ಬಂದಿದ್ದರು. ಅದೂ ಸಹ ಬಿಜೆಪಿಯ ಮತಗಳಲ್ಲ; ಬದಲಿಗೆ ಶಂಕರಲಿಂಗೇಗೌಡರ ವೈಯಕ್ತಿಕ ವರ್ಚಸ್ಸಿನ ಮತಗಳು. 1994, 1999, 2004 ಹಾಗೂ 2008ರ ಚುನಾವಣೆಗಳಲ್ಲಿ ಸತತ ನಾಲ್ಕು ಬಾರಿ, ಹತ್ತಾರು ಸಾವಿರ ಅಂತರದಲ್ಲಿ ಜಯಭೇರಿ ಬಾರಿಸಿರುವುದು ಶಂಕರಲಿಂಗೇಗೌಡರ ರಾಜಕೀಯ ತಾಕತ್ತನ್ನು ರುಜುವಾತುಪಡಿಸುತ್ತದೆ.

ಆದರೆ ಬಿಜೆಪಿ ಎಂಬ ಬ್ರಾಹ್ಮಣ ಜನತಾ ಪಕ್ಷದವರು ಶಂಕರಲಿಂಗೇಗೌಡನನ್ನು ಮೂಲೆಗುಂಪು ಮಾಡಿ, ಕಾಂಗ್ರೆಸ್‌ನಿಂದ ವಲಸೆ ಬಂದ ಬ್ರಾಹ್ಮಣ ರಾಜಕಾರಣಿ ಗಿಲೀಟು ರಾಮದಾಸನನ್ನು ತಲೆಮೇಲೆ ಹೊತ್ತು ಮೆರೆಸಿದರು. ಸದಾ ಕ್ಷೇತ್ರದ ಮತದಾರರ ಮಧ್ಯೆ ಇದ್ದುಕೊಂಡು, ಅವರ ಕಷ್ಟನಷ್ಟಗಳಿಗೆ ಸ್ಪಂದಿಸುತ್ತಾ, ಮತದಾರರ ಮನದಲ್ಲಿ ಗಟ್ಟಿಯಾಗಿ ನೆಲೆಸಿರುವ ಶಂಕರಲಿಂಗೇಗೌಡರಿಗೆ ಮಂತ್ರಿ ಸ್ಥಾನ ತಪ್ಪಿಸಿದ್ದು ಮಾತ್ರ ಬಿಜೆಪಿಯವರ ಜಾತಿ ರಾಜಕಾರಣಕ್ಕೆ ಹಿಡಿದ ಕನ್ನಡಿಯೆಂದರೆ ತಪ್ಪಾಗಲಾರದು.

ಇತ್ತೀಚಿನ ವರ್ಷಗಳಲ್ಲಿ ಶಂಕರಲಿಂಗೇಗೌಡರು ಬಿಜೆಪಿ ಭ್ರಷ್ಟಾಚಾರದ ಬಗ್ಗೆ ಬಹಿರಂಗವಾಗಿಯೇ ವಾಗ್ದಾಳಿ ನಡೆಸುತ್ತಿದ್ದುದು 3-4 ವರ್ಷಗಳಿಂದ ಟಿವಿ ಮಾಧ್ಯಮಗಳಿಗೆ ಉತ್ತಮ ಸರಕಾಗಿತ್ತು. "ತಾಕತ್ತಿದ್ದರೆ ಪಕ್ಷದ ನಾಯಕರು ನನ್ನ ವಿರುದ್ಧ ಶಿಸ್ತು ಕ್ರಮ ಜರುಗಿಸಲಿ" ಅಂತಾ ಶಂಕರಲಿಂಗೇಗೌಡರು ಅದೆಷ್ಟು ಸಲ ಸವಾಲ್ ಹಾಕಿದ್ದಾರೋ ಲೆಕ್ಕವಿಲ್ಲ. ಆದರೆ ಬಿಜೆಪಿ ಎಂಥಾ ಗತಿಗೆಟ್ಟ ಸ್ಥಿತಿಯಲ್ಲಿತ್ತೆಂದರೆ ಶಂಕರಲಿಂಗೇಗೌಡರನ್ನು ಕನಿಷ್ಠ ಮಾತಾಡಿಸುವ ಗೋಜಿಗೂ ಹೋಗಲಿಲ್ಲ. ಹಾಗೇನಾದರೂ ಬಿಜೆಪಿಯವರು ದೊಡ್ಡಮನಸ್ಸು ಮಾಡಿ ಗೌಡರನ್ನು ಉಚ್ಚಾಟಿಸಿದ್ದರೆ ರೊಟ್ಟಿ ಜಾರಿ ತುಪ್ಪಕ್ಕೆ ಬಿದ್ದಂತಾಗುತ್ತಿತ್ತು. ಗೌಡರು ಅಂದೇ, ಆ ಕ್ಷಣದಲ್ಲೇ ಜೆಡಿಎಸ್‌ಗೆ ಸೇರ್ಪಡೆಯಾಗುತ್ತಿದ್ದುದು ಗ್ಯಾರಂಟಿ.

ಈಗ ಮತ್ತೊಂದು ಚುನಾವಣೆ ಬಂದು ಕೊನೆಗೂ ಗೌಡರು ಜೆಡಿಎಸ್ ತೆಕ್ಕೆಗೆ ಜಾರಿದ್ದಾರೆ. ಆದರೆ ಇದರಿಂದ ವೈಯಕ್ತಿಕವಾಗಿ ಅವರಿಗೆ ಲಾಭವೂ ಇಲ್ಲ, ನಷ್ಟವೂ ಇಲ್ಲ. ಏಕೆಂದರೆ ಶಂಕರಲಿಂಗೇಗೌಡರ ರಾಜಕೀಯ ಶೈಲಿ ಇತರ ರಾಜಕಾರಣಿಗಳಿಗಿಂತ ಬಹಳ ಭಿನ್ನ. ಬೀದಿ ದೀಪ, ಬೀದಿ ಕೊಳಾಯಿ ರಿಪೇರಿ ಕೆಲಸದಿಂದ ಹಿಡಿದು ರೋಗಿಗಳಿಗೆ ಆಸ್ಪತ್ರೆ ಚಿಕಿತ್ಸೆ ಕೊಡಿಸುವತನಕ ತಾನೇ ಖುದ್ದು ಮತದಾರರ ಪರವಾಗಿ ನಿಂತು ಕೆಲಸ ಮಾಡುವಂಥ ರಾಜಕಾರಣಿ ಸಿದ್ದರಾಮಯ್ಯನನ್ನು ಬಿಟ್ಟರೆ ಎರಡನೆಯವರು ಶಂಕರಲಿಂಗೇಗೌಡ ಮಾತ್ರ. ಆದ್ದರಿಂದಲೇ ಮೈಸೂರಿನ ಪ್ರಜ್ಞಾವಂತರು ಈತನನ್ನು "ರೈಟ್ ಪರ್ಸನ್ ಇನ್ ರಾಂಗ್ ಪಾರ್ಟಿ" ಅಂತಾರೆ. ಆದರೆ ಗೌಡರ ಆಗಮನದಿಂದ ಜೆಡಿಎಸ್ ಒಂದು ಸೀಟು ಹೆಚ್ಚಿಸಿಕೊಳ್ಳುವ ಸಾಧ್ಯತೆ ಕಾಣುತ್ತಿದೆ. ಅದೇ ಸಂದರ್ಭದಲ್ಲಿ ಬಿಜೆಪಿ ಒಂದು ಸೀಟನ್ನು ಈಗಾಗಲೇ ಕಳೆದುಕೊಂಡಂತಾಗಿದೆ.


ಬ್ರಾಹ್ಮಣ ಮನಸ್ಥಿತಿಯ ಹಾಗೂ ಬಿಜೆಪಿ ಪರ ಒಲವಿರುವ ಕೆಲ ಪತ್ರಕರ್ತರು ಶಂಕರಲಿಂಗೇಗೌಡರ ಕೆಲವು ಸಣ್ಣಪುಟ್ಟ ದೌರ್ಬಲ್ಯಗಳನ್ನು ಹೈಲೈಟ್ ಮಾಡಿ, ಆತನನ್ನು ಒಂದು ತಮಾಷೆಯ ವಸ್ತುವಾಗಿಸಲು ಸಾಕಷ್ಟು ಶ್ರಮಿಸಿದ್ದಾರೆ. ಆದರೆ ಶಂಕರಲಿಂಗೇಗೌಡ ಕಚ್ಚೆ ಮತ್ತು ಕೈಗಳನ್ನು ಕೆಡಿಸಿಕೊಂಡಿರುವ ರಾಜಕಾರಣಿಯಲ್ಲ ಎಂಬುದು ಆತನ ರಾಜಕೀಯ ವಿರೋಧಿಗಳು ಕೂಡ ಒಪ್ಪುವ ಮಾತು. ಇಂದಿನ ಹೊಲಸು ರಾಜಕಾರಣಿಗಳಿಗೆ ಅಥವಾ ಗಿಲೀಟು ರಾಮದಾಸನಿಗೆ ಹೋಲಿಸಿದರೆ ಕೆಲ ಸಣ್ಣಪುಟ್ಟ ದೌರ್ಬಲ್ಯಗಳ ಹೊರತಾಗಿಯೂ ಈತ ಸಾವಿರ ಪಟ್ಟು ಮೇಲು ಎಂದು ಯಾವುದೇ ಅನುಮಾನವಿಲ್ಲದೆ ಹೇಳಬಹುದು.

ಅಧಿಕಾರದ ಕನಸಿನ ಗುಂಗಿನಲ್ಲಿರುವ ಕಾಂಗ್ರೆಸ್ ಪಕ್ಷ ಇನ್ನೂ ತನ್ನ ಅಭ್ಯರ್ಥಿಯನ್ನೇ ಆಯ್ಕೆ ಮಾಡಿಕೊಂಡಿಲ್ಲ. ಸದ್ಯಕ್ಕೆ ಟಿಕೆಟ್ ಪೈಪೋಟಿಯಲ್ಲಿ ವಾಸು ಎಂಬಾತನ ಹೆಸರು ಕೇಳಿಬರುತ್ತಿದೆ. ಈತ ಯಾರು? ಈತನ ರಾಜಕೀಯ ಯಾವ ನಮೂನೆಯದು? ಇಷ್ಟು ದಿನ ಈತ ಕಡಿದು ಕಟ್ಟೆ ಹಾಕಿರುವುದಾದರೂ ಏನು ಅಂತಾ ಕೆದಕುತ್ತಾ ಹೋದರೆ ಕೆಲವು ಕುತೂಹಲಕರ ಮಾಹಿತಿಗಳು ಹೊರಬೀಳುತ್ತವೆ.

ವಾಸು ಎಂಬ ಈ ಆಸಾಮಿ ವಿದ್ಯಾವಿಕಾಸ ಎಜುಕೇಷನ್ ಟ್ರಸ್ಟ್‌ನ ಅಧಿಪತಿ. ಈ ಸಂಸ್ಥೆಯಡಿ ಇಂಜಿನಿಯರಿಂಗ್ ಕಾಲೇಜು ಒಳಗೊಂಡಂತೆ ಹಲವಾರು ಶಾಲಾಕಾಲೇಜುಗಳಿವೆ. ಇಷ್ಟಕ್ಕೂ ಈ ಸಂಸ್ಥೆ ಈತನ ಸ್ವಂತದ್ದಲ್ಲ; ಕೇಂದ್ರದಲ್ಲಿ ಮಂತ್ರಿಯಾಗಿರುವ ಪ್ರಭಾವಿ ರಾಜಕಾರಣಿಯೊಬ್ಬರಿಗೆ ಸೇರಿದ್ದೆಂದೂ. ಈತ ಅವರ ಬೇನಾಮಿ ಆಸ್ತಿಪಾಸ್ತಿಗಳನ್ನು ಕಾಯುವುದನ್ನೇ ತನ್ನ ಮುಖ್ಯ ಕಾಯಕ ಮಾಡಿಕೊಂಡು ತಾನೂ ಚೆನ್ನಾಗಿ ತಿಂದುಂಡು ದುಂಡಗಾಗಿದ್ದಾನೆಂದೂ ಮೈಸೂರಿನಾದ್ಯಂತ ಸುದ್ದಿ ಹರಡಿದೆ. ಸಂಬಂಧಿಸಿದ ಇಲಾಖೆಗಳು ಅಗತ್ಯ ಬಿದ್ದರೆ ಈ ಬಗ್ಗೆ ಒಂದು ತನಿಖೆ ಕೈಗೊಂಡರೆ ಒಳ್ಳೆಯದು.

ಹಾಗೆ ನೋಡಿದರೆ ಕಾಂಗ್ರೆಸ್ ಪಕ್ಷಕ್ಕೆ ಎಂದಿಗೂ ಕ್ಯಾಂಡಿಡೇಟುಗಳ ಕೊರತೆಯಿಲ್ಲ, ಕೊರತೆಯಿರುವುದು ಕಾರ್ಯಕರ್ತರಿಗೆ ಮಾತ್ರ. ಹೀಗಾಗಿ ಆಕಾಂಕ್ಷಿಗಳ ಪಟ್ಟಿ ದೊಡ್ಡದಿದೆ. ಪ್ರಜ್ಞಾವಂತ ನಾಗರಿಕ ವೇದಿಕೆಯ ಎಂ.ಲಕ್ಷ್ಮಣ ಎಂಬುವವರು ಬಹಳ ವರ್ಷಗಳಿಂದ ಕಾಂಗ್ರೆಸ್ ಜೊತೆ ಗುರುತಿಸಿಕೊಂಡವರು. ಅದರ ಜೊತೆಗೆ ಮಾಹಿತಿ ಹಕ್ಕು ಕಾರ್ಯಕರ್ತನಾಗಿ ಭ್ರಷ್ಟಾಚಾರದ ವಿರುದ್ಧ ನಾಗರಿಕ ಸೌಲಭ್ಯಗಳಿಗಾಗಿ ಸರ್ಕಾರದ ವಿರುದ್ಧ ಪ್ರತಿಭಟಿಸುತ್ತಲೇ ಬಂದವರು. ಮಾಜಿ ಸಚಿವ ಎಚ್.ವಿಶ್ವನಾಥ್‌ಗೆ ಆಪ್ತರೆಂದು ಗುರುತಿಸಿಕೊಂಡಿದ್ದಾರೆ.

ಇನ್ನು ಸಿದ್ದರಾಮಯ್ಯನವರ ನೀತಿ ನಿಲುವುಗಳನ್ನು ಅನುಕರಿಸುವ ಕೆಲವಾರು ಮಂದಿ ಈ ಕ್ಷೇತ್ರದ ಟಿಕೆಟ್ ಆಕಾಂಕ್ಷಿಗಳಾಗಿದ್ದಾರೆ. ಸಿದ್ದರಾಮಯ್ಯ ಆಪ್ತ ವಲಯದಲ್ಲಿ ಗುರುತಿಸಿಕೊಂಡಿರುವ ಪ್ರದ್ಯುಮ್ನ ಆಲನಹಳ್ಳಿ ಹೆಸರೂ ಕೇಳಿಬರುತ್ತಿದೆ. ಪ್ರಗತಿಪರ ವಿಚಾರಧಾರೆಯನ್ನು ಹೊಂದಿರುವ ಈ ಯುವಕ ಸಾಹಿತಿ ಶ್ರೀಕೃಷ್ಣ ಆಲನಹಳ್ಳಿಯವರ ಮಗ. ಯುವ ಕಾಂಗ್ರೆಸ್‌ನ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿರುವ ಡಿ.ಎಸ್. ಪ್ರದೀಪ್, ಮಾಜಿ ಮೇಯರ್ ಧ್ರುವಕುಮಾರ್, ಸಿ.ಬಸವೇಗೌಡ, ದಿ.ಮಾದೇಗೌಡ ಮುಂತಾದವರ ಉದ್ದನೆಯ ಪಟ್ಟಿಯೇ ಇದೆ.



ಜನಸಾಮಾನ್ಯರ ಪಾಲಿಗೆ ನಾಟ್ ರೀಚೆಬಲ್ ರಾಜಕಾರಣಿ ಎನಿಸಿಕೊಂಡಿರುವ ವಾಸು ತರಹದ ವ್ಯಕ್ತಿಗಳನ್ನು ಹೊರತುಪಡಿಸಿ ಜನರ ನಡುವೆ ಸಕ್ರಿಯವಾಗಿರುವಂಥವರನ್ನು ಕಣಕ್ಕಿಳಿಸಿದರೆ ಕಾಂಗ್ರೆಸ್‌ಗೆ ಅದೃಷ್ಟ ಕುಲಾಯಿಸಬಹುದು. ಆದರೆ ಹೈಕಮಾಂಡ್‌ನ ತೀರ್ಮಾನ ಹೈ ಲೆವೆಲ್‌ನಲ್ಲಿರುತ್ತದೋ? ಲೋ ಲೆವೆಲ್‌ನಲ್ಲಿರುತ್ತದೋ ಕಾದು ನೋಡಬೇಕು.

ಇನ್ನು ಬಿಜೆಪಿ ಪಕ್ಷದ ಸ್ಥಿತಿಯಂತೂ ಇನ್ನೂ ಹೀನಾಯ. ಬಿಜೆಪಿ ಭ್ರಷ್ಟರ ವಿರುದ್ಧ ಶಂಕರಲಿಂಗೇಗೌಡ ಬಂಡಾಯವೆದ್ದಾಗ ಬಿಜೆಪಿಯವರು ಎಂದಿನಂತೆ ಒಡೆದು ಆಳುವ ತಂತ್ರವನ್ನು ಅಳವಡಿಸಿದ್ದರು. ಆದರೆ ಅವರು ಒಡೆದದ್ದು ಶಂಕರಲಿಂಗೇಗೌಡರ ಮನೆಯನ್ನು. ಬಡ್ಡಿ ದಂಧೆ, ರಿಯಲ್ ಎಸ್ಟೇಟ್‌ಗಳ ಬಗ್ಗೆ ಒಲವು ತೋರಿದ್ದ ಗೌಡರ ಮಗನಿಗೆ ಫಿಟ್ಟಿಂಗ್ ಇಟ್ಟು, ಆತನನ್ನು ಟಿವಿ ಕ್ಯಾಮೆರಾ ಮುಂದೆ ತಂದು ನಿಲ್ಲಿಸಿ ಅಪ್ಪನ ವಿರುದ್ಧ ಮಾತಾಡುವಂತೆ ಮಾಡಿದ್ದರು. ಈ ಕುಲಪುತ್ರನೇ ನಂದೀಶ್ ಪ್ರೀತಮ್. ಹಾಲಿ ಬಿಜೆಪಿ ಕಾರ್ಪೋರೇಟರ್. ಈತನಿಗೆ ಸಿಎಂ ಶೆಟ್ಟರ್ ಆಶೀರ್ವಾದ ಬಲ ಇದೆಯಂತೆ. ಈತನ ಜೊತೆ ಕೇಸರಿ ಬಣದ ಮತ್ತೊಬ್ಬ ಆಕಾಂಕ್ಷಿಯೆಂದರೆ ಮೂಡಾ ಚೇರ್ಮನ್ ನಾಗೇಂದ್ರ. ತನ್ನ ಅಧಿಕಾರ ಬಲವಿರುವುದರಿಂದ ರಿಯಲ್ ಎಸ್ಟೇಟ್ ಲಿಂಕ್ ಜೋರಾಗಿರುವ ವ್ಯಕ್ತಿ. ಹೀಗಾಗಿ ಬಿಜೆಪಿಯ ರಿಯಲ್ ಎಸ್ಟೇಟ್ ಡಾನ್, ಉಪಮುಖ್ಯಮಂತ್ರಿ ಆರ್.ಅಶೋಕ್ ಜೊತೆ ಉತ್ತಮ ಬಾಂಧವ್ಯ. ಈ ಇಬ್ಬರ ಜೊತೆ ಬಿಜೆಪಿ ಹಿಂದುಳಿದ ಮೋರ್ಚಾದ ಅಧ್ಯಕ್ಷನಾಗಿರುವ ಮಲ್ಲಪ್ಪ ಗೌಡ ಎಂಬ ಕುರುಬ ಜನಾಂಗದ ವ್ಯಕ್ತಿಯೂ ಟಿಕೆಟ್ ಸಿಕ್ಕರೆ ಒಂದು ಕೈ ನೋಡೇಬಿಡೋಣ ಎಂಬ ಹುಮ್ಮಸ್ಸಿನಲ್ಲಿದ್ದಾರಂತೆ.

ಆದರೆ ಬಿಜೆಪಿಗಳ ಪಾಪದ ಕೊಡ ತುಂಬಿರುವುದರಿಂದ ಅದೇನೇ ಗಿಮಿಕ್ ಮಾಡಿದರೂ ಈ ಬಾರಿ ಮಕಾಡೆ ಮಲಗುವುದಂತೂ ಗ್ಯಾರಂಟಿಯಾಗಿ ಹೋಗಿದೆ. ನಿನ್ನೆ ಮೊನ್ನೆಯಷ್ಟೆ ನಡೆದ ನಗರಸಭಾ ಚುನಾವಣೆಯ ಫಲಿತಾಂಶ ಇದಕ್ಕೆ ಸ್ಪಷ್ಟ ದಿಕ್ಸೂಚಿಯಾಗಿದೆ. ಚಾಮರಾಜ ಕ್ಷೇತ್ರದ ವ್ಯಾಪ್ತಿಯಲ್ಲಿ ಒಟ್ಟು 22 ವಾರ್ಡುಗಳಿವೆ. ಈ ಪೈಕಿ ಜೆಡಿಎಸ್ 11ರಲ್ಲಿ, ಕಾಂಗ್ರೆಸ್ 8 ರಲ್ಲಿ ಜಯಗಳಿಸಿದ್ದರೆ ಬಿಜೆಪಿ ಗೆದ್ದಿದ್ದು ಕೇವಲ ಒಂದೇ ವಾರ್ಡ್‌ನಲ್ಲಿ. ಮತಗಳಿಕೆಯಲ್ಲಿ ಬಿಜೆಪಿಗಾಗಿರುವ ದುರ್ಗತಿ ನೋಡಿ. ಕಳೆದ ಅಸೆಂಬ್ಲಿ ಚುನಾವಣೆಯಲ್ಲಿ 44,543 ಮತ ಗಳಿಸಿದ್ದ ಬಿಜೆಪಿ ಇದೇ ವ್ಯಾಪ್ತಿಯ 22 ವಾರ್ಡುಗಳಲ್ಲಿ ಪಡೆದಿರುವ ಮತಗಳು 16,995! ಅಂದರೆ ಸುಮಾರು ಮೂರನೇ ಒಂದು ಭಾಗ ಮಾತ್ರ. ಇದು ಸ್ಥಳೀಯ ಚುನಾವಣೆಯಾದ್ದರಿಂದ ಅಭ್ಯರ್ಥಿಗಳ ವೈಯಕ್ತಿಕ ಸಾಮರ್ಥ್ಯದ ಮತಗಳ ಸಂಖ್ಯೆಯೇ ಅಧಿಕ. ಇನ್ನೂ ಬಿಜೆಪಿ ಹೆಸರು ಹೇಳಿಕೊಂಡು ಹೊರಟರೆ ಅಷ್ಟು ಮತಗಳೂ ಬೀಳುವುದಿಲ್ಲ ಎಂಬುದು ಸ್ಪಷ್ಟ. ಈ ನಗರಸಭಾ ಚುನಾವಣೆಯಲ್ಲಿ ಜೆಡಿಎಸ್ ಮತ್ತು ಕಾಂಗ್ರೆಸ್‌ಗಳು ಕ್ರಮವಾಗಿ 38,360 ಹಾಗೂ 38,299 ಮತಗಳನ್ನು ಗಳಿಸಿದ್ದು ಸಮಬಲದ ಪೈಪೋಟಿ ನಡೆಸಿವೆ.

ಇನ್ನು ಕೆಜೆಪಿ - 2433, ಬಿಎಸ್‌ಆರ್-1585 ಮತಗಳನ್ನಷ್ಟೆ ಪಡೆದು ನಗಣ್ಯವೆನಿಸಿಕೊಂಡಿದ್ದರೆ, ಪಕ್ಷೇತರ ಅಭ್ಯರ್ಥಿಗಳು 15,219 ಮತಗಳನ್ನು ಬಾಚಿದ್ದಾರೆ. ಈ ಎಲ್ಲಕ್ಕಿಂತ ಪ್ರಮುಖವಾದ ಅಂಶ ಮುಸ್ಲಿಂ ಮತಗಳನ್ನು ತನ್ನತ್ತ ಸೆಳೆಯಲು ಯಶಸ್ವಿಯಾಗುತ್ತಿರುವ ಎಸ್‌ಡಿಪಿಐ ಪಕ್ಷದ್ದು. 10 ಸಾವಿರಕ್ಕೂ ಹೆಚ್ಚು ಮತಗಳನ್ನು ಪಡೆದಿರುವ ಈ ಪಕ್ಷ ಕಾಂಗ್ರೆಸ್‌ನ ಪಾರಂಪರಿಕ ಮುಸ್ಲಿಂ ಮತ ಬ್ಯಾಂಕ್‌ಗೆ ಲಗ್ಗೆ ಹಾಕಿದೆ. ಪರಿಣಾಮವಾಗಿ ಕಾಂಗ್ರೆಸ್ ಅಭ್ಯರ್ಥಿ ಚುನಾವಣಾ ಕಣದಲ್ಲಿ ಮುಗ್ಗರಿಸಿದರೂ ಆಶ್ಚರ್ಯವಿಲ್ಲ.

ಮತ್ತೊಂದು ಕುತೂಹಲಕಾರಿ ವಿಷಯವೇನೆಂದರೆ ಬಿಎಸ್‌ಆರ್ ತ್ಯಜಿಸಿ ಬಂದ ದ್ವಾರಕಾನಾಥ್ ಅವರು ಎಸ್‌ಡಿಪಿಐನ ಸಂಭವನೀಯ ಅಭ್ಯರ್ಥಿ ಪಟ್ಟಿಯಲ್ಲಿದ್ದಾರೆ. ಆದರೆ ಇದೇ ಕ್ಷೇತ್ರದ ಅಭ್ಯರ್ಥಿಯೆಂದು ಹಿಂದಿನಿಂದಲೂ ಬಿಂಬಿತವಾಗಿರುವ ಪ್ರೊ. ಶಬೀರ್ ಅಹಮದ್ ಅವರ ಹೆಸರೂ ಕೇಳಿ ಬಂದಿರುವುದರಿಂದ ಮಾನ್ಯ ದ್ವಾರಕಾನಾಥ್ ಅವರ ರಾಜಕೀಯ ಭವಿಷ್ಯ ಒಂದೆರಡು ದಿನದಲ್ಲಿ ತೀರ್ಮಾನವಾಗಲಿದೆ.

ಕೃಷ್ಣರಾಜ ಕ್ಷೇತ್ರ - ರಾಮದಾಸ್ ಮಕಾಡೆ

ಹಾಲಿ ಸಚಿವ ರಾಮದಾಸ್‌ನ ಗಿಲೀಟು ಗಿಮಿಕ್ಕುಗಳು, ಭ್ರಷ್ಟಾಚಾರದ ಹಗರಣಗಳಿಂದ ಕುಖ್ಯಾತಿ ಗಳಿಸಿರುವ ಕ್ಷೇತ್ರವಿದು. ವಿಶ್ವವಿಖ್ಯಾತ ಅರಮನೆ ಹಾಗೂ ಹಲವು ಅಗ್ರಹಾರಗಳನ್ನು ಒಳಗೊಂಡಂತೆ ಇಡೀ ಹಳೇ ಮೈಸೂರು ನಗರ ಈ ಕ್ಷೇತ್ರದ ವ್ಯಾಪ್ತಿಗೆ ಬರುತ್ತದೆ.

ಇಲ್ಲಿ ಬಿಜೆಪಿಯಿಂದ ರಾಮದಾಸ್‌ನಿಗೆ ಟಿಕೆಟ್ ರಿಜರ್ವ್ ಆಗಿರುವಂತೆಯೇ ಆತನ ಸೋಲು ಕೂಡ ಕಟ್ಟಿಟ್ಟ ಬುತ್ತಿಯೆಂಬುದು ಕ್ಷೇತ್ರವನ್ನು ಒಂದು ಸುತ್ತು ಹಾಕಿದರೆ ಎಂಥಾ ಪಾಮರನಿಗೂ ಸುಲಭವಾಗಿ ಅರ್ಥವಾಗಿಬಿಡುತ್ತದೆ. ಈ ಬಗ್ಗೆ ಪತ್ರಿಕೆ ಹಲವಾರು ಬಾರಿ ಬರೆದಿರುವುದರಿಂದ ಇಲ್ಲಿ ಹೆಚ್ಚಿಗೆ ವಿವರಿಸುವ ಅಗತ್ಯವಿಲ್ಲ. ರಾಮದಾಸ ಸೃಷ್ಟಿಸಿರುವ ಹಗರಣಗಳೇ ಅಂತವು.

ಈ ಕ್ಷೇತ್ರದಲ್ಲಿ ಒಂದಷ್ಟು ಹೆಚ್ಚಿನ ಬ್ರಾಹ್ಮಣ ಮತದಾರರಿರುವುದರಿಂದ ತಾನು ಗೆದ್ದೇಗೆಲ್ಲುತ್ತೇನೆ ಎಂದು ಬೀಗುತ್ತಿದ್ದ ಈ ಮಂಗಿದಾಸನಿಗೆ ಮತ್ತೊಬ್ಬ ಬ್ರಾಹ್ಮಣ ಅಭ್ಯರ್ಥಿ ಕೆಜೆಪಿಯ ರಾಜೀವ್ ಎಂಬಾತ ಸರಿಯಾಗಿಯೇ ಸೆಡ್ಡು ಹೊಡೆದಿದ್ದಾನೆ. ಈ ರಾಜೀವ್ ಕೂಡ ರಿಯಲ್ ಎಸ್ಟೇಟ್ ಕುಳವೇ ಆಗಿದ್ದರೂ ಸಂಭಾವಿತ ವ್ಯಕ್ತಿಯೆಂದು ಗುರುತಿಸಿಕೊಂಡವರು. ನಂಬಿದವರಿಗೆ ಚೂರಿ ಹಾಕುವ ಜಾಯಮಾನದವರಲ್ಲ; ಈ ಒಂದೇ ಕಾರಣಕ್ಕೆ ಕೃಷ್ಣರಾಜದ ಬ್ರಾಹ್ಮಣ ಮತದಾರರು ಈ ಬಾರಿ ರಾಜೀವ್‌ನ ಕೈ ಹಿಡಿಯುವ ಸ್ಪಷ್ಟ ಲಕ್ಷಣಗಳು ಕಂಡುಬರುತ್ತಿವೆ.

ಉಳಿದಂತೆ ಕಾಂಗ್ರೆಸ್ ಅಭ್ಯರ್ಥಿಯಾಗಿರುವ ಸೋಮಶೇಖರ್ ಹಿಂದುಳಿದ ಕುರುಬ ಜನಾಂಗಕ್ಕೆ ಸೇರಿದವರು. ಸ್ವಭಾವತಃ ಮುಗ್ಧ ಹಾಗೂ ಸಿದ್ದರಾಮಯ್ಯರ ಕಟ್ಟಾ ಅನುಯಾಯಿ. ಈ ಹಿಂದೆ ಒಮ್ಮೆ ಎಂಎಲ್‌ಎ ಆಗಿದ್ದವರು ಹಾಗೂ ಜನರ ನಡುವೆ ಓಡಾಡಿ ಕೆಲಸ ಮಾಡುವ ಪ್ರವೃತ್ತಿಯ ಮನುಷ್ಯ. ಹೀಗಾಗಿ ದಲಿತರು, ಹಿಂದುಳಿದವರು ಹಾಗೂ ಅಲ್ಪಸಂಖ್ಯಾತರ ಮತಗಳು ಸೋಮಶೇಖರ್‌ಗೆ ಹರಿದು ಅವರು ಗೆಲ್ಲುವ ಸಾಧ್ಯತೆ ಹೆಚ್ಚಾಗಿ ಗೋಚರಿಸುತ್ತಿದೆ.

ಇಲ್ಲಿ ಜೆಡಿಎಸ್‌ನದು ಏನಿದ್ದರೂ ಪೋಷಕ ಪಾತ್ರವಿದ್ದಂತೆ. ಹಾಗಾಗಿ ಶ್ರೀನಿವಾಸ್‌ಪ್ರಸಾದ್ ಅವರ ಶಿಷ್ಯ ಹಾಗೂ ಸಂಬಂಧಿಕ ಗಡ್ಡವಾಸು ಎಂಬ ವ್ಯಕ್ತಿ ಕ್ಯಾಂಡಿಡೇಟು ಆಗುವ ಭರದಲ್ಲಿ ಓಡಾಡುತ್ತಿದ್ದಾನೆ. ಈತ ಶಾಸಕನಾಗಿ ಗೆಲ್ಲುವವರೆಗೂ ಗಡ್ಡ ಬೋಳಿಸುವುದಿಲ್ಲವೆಂದು ಶಪಥ ಮಾಡಿರುವುದನ್ನು ಬಿಟ್ಟರೆ, ಕ್ಷೇತ್ರದ ಮತದಾರರಿಗಾಗಿ ಮಾಡಿದ್ದೇನೂ ಇಲ್ಲ ಎಂಬುದು ಸ್ಥಳೀಯರ ಅಂಬೋಣ. ಅದೂಅಲ್ಲದೆ ದಲಿತರ ಮತಗಳನ್ನು ಒಡೆದು ತನ್ನ ಹಾದಿ ಸುಗಮ ಮಾಡಿಕೊಳ್ಳಲು ಈ ಕ್ಯಾಂಡಿಡೇಟ್‌ನ ಹಿಂದೆ ರಾಮದಾಸ್‌ನ ಚಿತಾವಣೆಯಿದೆಯೆಂಬ ಗುಸುಗುಸು ಸುದ್ದಿ ಕೂಡ ಇಲ್ಲಿ ಹರಡಿದೆ.

ಈ ಎಲ್ಲಾ ಕ್ಯಾಂಡಿಡೇಟುಗಳ ಜೊತೆಗೆ ಪ್ರದೀಪ್ ಕುಮಾರ್ ಎಂಬ ಲಿಂಗಾಯತ ಯುವ ಅಭ್ಯರ್ಥಿಯೊಬ್ಬ ಕಣಕ್ಕಿಳಿದು ಯಡ್ಯೂರಪ್ಪನ ಕೆಜೆಪಿ ಮತಗಳನ್ನು ಕಸಿಯುವ ಸಾಧ್ಯತೆ ನಿಚ್ಚಳವಾಗಿದೆ. ಈತ ಮಾಮೂಲಿ ಡಮ್ಮಿ ಕ್ಯಾಂಡಿಡೇಟಲ್ಲ; ಈ ಹಿಂದೆ ಕಾರ್ಪೋರೇಟರ್ ಆಗಿ ಗೆದ್ದಿದ್ದು ಬೆಸ್ಟ್ ಕಾರ್ಪೋರೇಟರ್ ಎಂಬ ಅವಾರ್ಡ್ ಪಡೆದಿದ್ದವನು. ಆತನ ಕೆಲಸದ ಛಾತಿಯೇ ಅಂಥಾದ್ದು. ಎಂಬಿಎ ಪದವೀಧರನಾಗಿರುವ 30ರ ಹರೆಯದ ಈ ಯುವಕ ರಾಜಕೀಯವಾಗಿ ಮೇಲೇಬರಬೇಕೆಂಬ ಭಾರೀ ಕನಸು ಇಟ್ಟುಕೊಂಡಿದ್ದು, ಅದಕ್ಕೆ ಸೂಕ್ತ ಬುನಾದಿಯನ್ನೂ ಹಾಕಿಕೊಂಡಿದ್ದಾನೆ. ಏನಿಲ್ಲವೆಂದರೂ ಹತ್ತು ಸಾವಿರ ಮತಗಳನ್ನು ಸೆಳೆಯುವ ಸಾಮರ್ಥ್ಯವಿರುವ ಈತನ ಕೈಚಳಕದಿಂದ ಕೆಜೆಪಿ ಅಭ್ಯರ್ಥಿ ರಾಜೀವ್‌ನ ಓಟಕ್ಕೆ ಅಡ್ಡಗಾಲು ಬೀಳುವುದು ಖಚಿತ.

ಕಳೆದ ನಗರಸಭಾ ಚುನಾವಣೆಯ ಮತಗಳ ಅಂಕಿಸಂಖ್ಯೆ ನೋಡಿ. ಒಟ್ಟು 23 ವಾರ್ಡ್‌ಗಳಿರುವ ಕ್ಷೇತ್ರದಲ್ಲಿ 38,162 ಮತ ಗಳಿಸಿ ಕಾಂಗ್ರೆಸ್ 9 ಸೀಟುಗಳನ್ನು ಗೆದ್ದಿದ್ದರೆ, ಬಿಜೆಪಿ 33,572 ಮತ ಪಡೆದು 8 ಸೀಟುಗಳನ್ನಷ್ಟೇ ಪಡೆದಿದೆ. ಇನ್ನುಳಿದವರ ಲೆಕ್ಕ ಇಲ್ಲಿ ಅಷ್ಟು ಮುಖ್ಯವಲ್ಲ. ಆದರೆ ಕಳೆದ ಬಾರಿ ರಾಮದಾಸ್ ಅರವತ್ತು ಸಾವಿರಕ್ಕೂ ಹೆಚ್ಚಿನ ಮತಗಳನ್ನು ಗಳಿಸಿದ್ದರೆಂಬುದನ್ನು ನಾವು ನೆನಪಿನಲ್ಲಿಟ್ಟರೆ ಬಿಜೆಪಿಯ ಇಂದಿನ ದುಸ್ಥಿತಿ ಸ್ಪಷ್ಟವಾಗಿ ಅರ್ಥವಾಗುತ್ತದೆ.

ಇಷ್ಟೆಲ್ಲಾ ಸಾಲದೆಂಬಂತೆ ಮೈಸೂರು ರಾಜಕೀಯದ ಮೇಲೆ ಗಟ್ಟಿ ಪ್ರಭಾವವನ್ನು ಹೊಂದಿರುವ ಸುತ್ತೂರು ಸ್ವಾಮಿಗಳು ಈ ಬಾರಿ ಮಂಗಿ ರಾಮದಾಸನನ್ನು ಸೋಲಿಸಲು ಮನಸ್ಸು ಮಾಡಿದ್ದಾರೆಂಬ ಸುದ್ದಿ ಮಠದ ಆವರಣದಿಂದಲೇ ಹೊರಬಿದ್ದಿದೆ. ಹೀಗಾಗಿ ರಾಮದಾಸ ಮಕಾಡೆ ಬಿದ್ದು ಮುಗ್ಧ ಸೋಮಶೇಖರ್ ಗದ್ದುಗೆ ಹಿಡಿಯುವ ಲಕ್ಷಣಗಳು ದಿನೇದಿನೇ ಸ್ಪಷ್ಟವಾಗುತ್ತಿವೆ.

ನರಸಿಂಹರಾಜ ಕ್ಷೇತ್ರ - ತನ್ವೀರ್‌ಸೇಠ್ ಕೋಟೆಯಲ್ಲಿ ಬಿರುಕು

ಎನ್‌ಆರ್ ಮೊಹಲ್ಲಾ, ನಜರ್‌ಬಾದ್, ಉದಯಗಿರಿ, ಕೆಸರೆ ಮುಂತಾದ ಪ್ರದೇಶಗಳನ್ನು ಒಳಗೊಂಡಿರುವ ಈ ಕ್ಷೇತ್ರ ಮುಸ್ಲಿಂ ಬಾಹುಳ್ಯವನ್ನು ಹೊಂದಿದೆ. ಬಹುಶಃ ಅದೇ ಕಾರಣಕ್ಕೆ ಕಾಂಗ್ರೆಸ್‌ನ ಅಜೀಜ್ ಸೇಠ್ ಜೀವನಪರ್ಯಂತ ಆಳಿದ ಈ ಕ್ಷೇತ್ರದಲ್ಲಿ ಆತನ ಮಗ ತನ್ವೀರ್ ಸೇಠ್ ಮೂರು ಬಾರಿ ಆರಿಸಿ ಬಂದಿದ್ದಾನೆ. ಈ ತನ್ವೀರ್ ಸೇಠ್ ಸತತ ಗೆದ್ದು ಬರಲು ಕಾರಣ ಬಹುಶಃ ಅಲ್ಲಿ ಪರ್ಯಾಯ ನಾಯಕತ್ವ ಇಲ್ಲದಿರುವುದು.

ಆದರೆ ಈ ಬಾರಿ ಎಸ್‌ಡಿಪಿಐ ಪಕ್ಷ ತನ್ನ ಕ್ಯಾಂಡಿಡೇಟನ್ನು ಹಾಕಲು ಎಲ್ಲಾ ಸಿದ್ಧತೆ ಮಾಡಿಕೊಂಡಿರುವುದರಿಂದ ತನ್ವೀರ್ ಪಾಳಯಕ್ಕೆ ಒಳಗೊಳಗೆ ನಡುಕ ಶುರುವಾಗಿದೆಯೆಂಬ ಪುಕಾರು ಕ್ಷೇತ್ರದಲ್ಲಿ ಹಬ್ಬಿದೆ. ಆದ್ದರಿಂದ ಹೇಗಾದರೂ ಮಾಡಿ ಎಸ್‌ಡಿಪಿಐನವರ ಜೊತೆ ರಾಜಿ ಸಂಧಾನ ಕುದುರಿಸಲು ವಿಫಲ ಪ್ರಯತ್ನ ನಡೆಸಿದ್ದಾನೆಂಬ ಸುದ್ದಿಯೂ ಇದೆ. ತನ್ವೀರ್ ಸೇಠ್‌ಗಿರುವ ಜನಸಂಪರ್ಕ ಹೆಚ್ಚಾಗಿ ಶ್ರೀಮಂತ ಮುಸ್ಲಿಮರ ನಡುವೆ. ಹಾಗಾಗಿ ಜನಸಾಮಾನ್ಯರ ನೋವು ನಲಿವುಗಳಿಗೆ ಸ್ಪಂದಿಸುವುದಿಲ್ಲ ಎಂಬ ಆರೋಪವನ್ನು ಎದುರಿಸುತ್ತಿದ್ದಾನೆ. ಸರಿಯಾಗಿ ಇದೇ ಸಂದರ್ಭದಲ್ಲಿ ಕೇಡರ್ ಬೇಸ್ಡ್ ಸಂಘಟನೆಯಾಗಿರುವ ಹಾಗೂ ಕಟ್ಟರ್ ಸಿದ್ಧಾಂತವನ್ನು ಹೊಂದಿರುವ ಎಸ್‌ಡಿಪಿಐ ಪಾರ್ಟಿ ಸಾಮಾನ್ಯ ಮುಸ್ಲಿಮರ ನಡುವೆ ತನ್ನ ನೆಲೆ ಸ್ಥಾಪಿಸಿಕೊಂಡಿದೆ. ಅಹಮದ್ ಮಾಜಿದ್ ಅಥವಾ ಎ.ಲತೀಫ್ ಎಂಬುವವರು ಇಲ್ಲಿ ಕಣಕ್ಕಿಳಿಯುವ ಸಾಧ್ಯತೆಯಿದೆ. ಹೀಗಾಗಿ ಈ ಬಾರಿ ತನ್ವೀರ್ ಸೇಠ್‌ನ ಓಟಕ್ಕೆ ಲಗಾಮು ಈಗಾಗಲೇ ಬಿದ್ದಿರುವುದು ಖಚಿತ.

ಇನ್ನು ಜೆಡಿಎಸ್‌ನಿಂದ ಎಂಎಲ್‌ಸಿ ಸಂದೇಶ್ ನಾಗರಾಜ್ ಅವರ ತಮ್ಮ ಸಂದೇಶ್ ಸ್ವಾಮಿ ಕಣಕ್ಕಿಳಿಯಲಿದ್ದಾರೆ. ಬಿಜೆಪಿ ಇಲ್ಲಿ ಲೆಕ್ಕಕ್ಕೇ ಇಲ್ಲ.

ಹೀಗಾಗಿ ಈ ಕ್ಷೇತ್ರದಲ್ಲಿ ಗೊಂದಲಮಯ ವಾತಾವರಣವೇರ್ಪಟ್ಟಿದ್ದು ಗೆಲ್ಲುವ ಅಭ್ಯರ್ಥಿಯನ್ನು ಈಗಲೇ ಊಹಿಸುವುದು ಕಷ್ಟದ ಮಾತು. ಮುಂದಿನ ಒಂದೆರಡು ವಾರಗಳಲ್ಲಿ ಇನ್ನಷ್ಟು ಸ್ಪಷ್ಟ ಚಿತ್ರಣ ಸಿಗಬಹುದೇನೋ?

ಒಟ್ಟಾರೆ ಮೈಸೂರು ನಗರದ ರಾಜಕೀಯದಲ್ಲಿ ಮತದಾರ ಪ್ರಭುಗಳಿಗೆ ಎಲ್ಲಿಲ್ಲದ ಮಹತ್ವ ಬಂದಿರುವುದಂತೂ ಸತ್ಯ. ತಮಗೆ ಹೇಳೋರು ಕೇಳೋರು ಯಾರೂ ಇಲ್ಲವೆಂದು ಮೆರೆಯುತ್ತಿದ್ದವರು ಎಲ್ಲ ಕ್ಷೇತ್ರಗಳಲ್ಲೂ ಏದುಸಿರು ಬಿಡುತ್ತಿರುವ ದೃಶ್ಯ ನಿಚ್ಚಳವಾಗಿ ಕಂಡುಬರುತ್ತಿದೆ.

● ದೊಡ್ಡಿಪಾಳ್ಯ ನರಸಿಂಹಮೂರ್ತಿ



ಮಂಡ್ಯ

ಮೇಲುಕೋಟೆ: ಮದಗಜಗಳ ಕಾಳಗ



ಪುಟ್ಟರಾಜು ಹಾಗೂ ಪುಟ್ಟಣ್ಣಯ್ಯ ಎಂಬ ಮದಗಜಗಳ ನಡುವಿನ ಗುದ್ದಾಟದ ಅಖಾಡವಾಗಿದೆ ಮೇಲುಕೋಟೆ ವಿಧಾನಸಭಾ ಕ್ಷೇತ್ರ. ಜೆಡಿಎಸ್‌ನ ಹಾಲಿ ಶಾಸಕ ಸಿ.ಎಸ್.ಪುಟ್ಟರಾಜು ಹ್ಯಾಟ್ರಿಕ್ ಗೆಲುವನ್ನು ಬಾರಿಸುವ ಹುಮ್ಮಸ್ಸಿನಲ್ಲಿದ್ದರೆ ಅವರ ಪ್ರತಿಸ್ಪರ್ಧಿಯಾಗಿರುವ ಸರ್ವೋದಯ ಕರ್ನಾಟಕ ಪಕ್ಷದ ರೈತನಾಯಕ ಕೆ.ಎಸ್.ಪುಟ್ಟಣ್ಣಯ್ಯ ಈ ಬಾರಿ ಗೆದ್ದೇಗೆಲ್ಲುತ್ತೇನೆ ಎಂದು ತೊಡೆ ತಟ್ಟುತ್ತಿದ್ದಾರೆ.

...ರಿಬ್ಬರನ್ನು ಹೊರತುಪಡಿಸಿದರೆ ಮೇಲುಕೋಟೆ ವಿಧಾನಸಭಾ ಕ್ಷೇತ್ರದಲ್ಲಿ ... ಪಕ್ಷಗಳು ಮತ್ತು ಸ್ಪರ್ಧಿಗಳು ಗೌಣ.

1994ರಲ್ಲಿ ಗೆದ್ದು ರೈತನಾಯಕನಾಗಿ ವಿಧಾನಸಭೆ ಪ್ರವೇಶಿಸಿದ್ದ ಕೆ.ಎಸ್.ಪುಟ್ಟಣ್ಣಯ್ಯ ಆನಂತರ ನಡೆದ ಮೂರು ಚುನಾವಣೆಗಳಲ್ಲಿ ಸತತವಾಗಿ ...ಂಡಿದ್ದಾರೆ. ಗೆಲುವಿಗಾಗಿ ಅವರು ಏನೇ ಹರಸಾಹಸ ಮಾಡಿದರೂ ಪುಟ್ಟಣ್ಣಯ್ಯನವರ ಕೈಯನ್ನು ಕ್ಷೇತ್ರದ ಮತದಾರ ಹಿಡಿಯುತ್ತಿಲ್ಲ. ಆದರೆ ಈ ...ತಾಯಗತಾಯ ಗೆಲುವು ಸಾಧಿಲೇಬೇಕೆಂದು ನಿರ್ಧರಿಸಿರುವ ಪುಟ್ಟಣ್ಣಯ್ಯ ...ರಾಜಕೀಯ ಪಕ್ಷಗಳ ಅಭ್ಯರ್ಥಿಗಳು ಹಾಕುವ ಎಲ್ಲಾ ರಾಜಕೀಯ ...ಗಳನ್ನು ತಾವೂ ಹಾಕುತ್ತಿದ್ದಾರೆ.


...ಲ್ಲೆಯ ಇತರೆ ಕ್ಷೇತ್ರಗಳಿಗಿಂತಲೂ ಮೇಲುಕೋಟೆ ಕ್ಷೇತ್ರದಲ್ಲಿ ಪಕ್ಷಾಂತರ ...ಎಗ್ಗಿಲ್ಲದೆ ಸಾಗಿದೆ. ದಿನನಿತ್ಯ ತಮ್ಮ ಪಕ್ಷಕ್ಕೆ ಕಾರ್ಯಕರ್ತರನ್ನು ಸೇರಿಸಿಕೊಳ್ಳುವ ...ವನ್ನು ಇಬ್ಬರೂ ನಾಯಕರು ಮಾಡುತ್ತಿದ್ದಾರೆ. ಕಾಂಗ್ರೆಸ್, ಜೆಡಿಎಸ್‌ನಂತಹ ರಾ...ೀಯ ಪಕ್ಷಗಳೇ ನಾಚುವಂತೆ ಪುಟ್ಟಣ್ಣಯ್ಯ ಸಭೆ, ಸ...ರಂಭಗಳನ್ನು ಆಯೋಜಿಸಿ ಅಬ್ಬರದ ಪ್ರಚಾರದಲ್ಲಿದ್ದರೆ, ಚು...ವಣಾ ತಂತ್ರಗಳನ್ನು ಕರಗತ ಮಾಡಿಕೊಂಡಿರುವ ...ರಾಜು ತಾನೇನು ಕಡಿಮೆಯಿಲ್ಲ ಎಂಬಂತೆ ಸಾಕಷ್ಟು ... ಎಬ್ಬಿಸಿದ್ದಾರೆ. ದುದ್ದ ಹೋಬಳಿ ವ್ಯಾಪ್ತಿಯಲ್ಲಿ ...ಣ್ಣಯ್ಯ ಪವರ್‌ಫುಲ್ ಎಂಬ ಮಾತುಗಳು ...ರುತ್ತಿದ್ದಂತೆ ಎಚ್ಚೆತ್ತ ಪುಟ್ಟರಾಜು ಜೆ.ಬಿ.ಶಿವಕುಮಾರ್, ...ಬಿ.ರಾಮುನಂತಹ ಮಾಜಿ ಶಾಸಕರ ದಂಡಿನೊಂದಿಗೆ ...ಣ್ಣಯ್ಯನವರನ್ನು ಎದುರಿಸಲು ಅತ್ತ ಸಾಕಷ್ಟು ಗಮನ ...ದ್ದಾರೆ.

...ಂದೆಡೆ ಶಾಸಕ ಪುಟ್ಟರಾಜು ಕುಟುಂಬ ಅಕ್ರಮ ...ರಿಕೆಯಲ್ಲಿ ತೊಡಗಿದೆ ಎಂದು ಆರೋಪಿಸುತ್ತಾ ...ಣ್ಣಯ್ಯ ಮತ್ತೆ ಶಾಸಕರಾಗಲು ಪ್ರಯತ್ನಿಸುತ್ತಿದ್ದಾರೆ. ...ಂದೆಡೆ ಎಸ್.ಎಂ.ಕೃಷ್ಣ ಮುಖ್ಯಮಂತ್ರಿಯಾಗಿದ್ದ ...ರ್ಭದಲ್ಲಿ ಕಾವೇರಿ ಚಳವಳಿಯ ಹಾದಿತಪ್ಪಿಸಿದವರು ...ಣ್ಣಯ್ಯ ಎಂದು ಪುಟ್ಟರಾಜು ಆರೋಪಿಸುತ್ತಿದ್ದಾರೆ.

ಈ ಬಾರಿ ಗೆಲ್ಲಲೇಬೇಕೆಂದು ಕಣಕ್ಕಿಳಿದಿರುವ ...ಟ್ಟಣ್ಣಯ್ಯ ಅದಕ್ಕಾಗಿ ಎಂತಹ ರಾಜಿಗಾದರೂ ...ಗಿದ್ದಾರೆ. ಯಡಿಯೂರಪ್ಪನ ಆಡಳಿತಾವಧಿಯಲ್ಲಿ ...ಶುಗರ್‌ನಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆದಿದ್ದರೂ ...ಣ್ಣಯ್ಯ ಯಡ್ಡಿಯನ್ನು ಸಮರ್ಥಿಸಿಕೊಂಡಿದ್ದರು. ಆ ...ಕ್ಕೇ ಈಗ ಯಡ್ಡಿ ಅವರ ವಿರುದ್ಧ ಕೆಜೆಪಿ ವತಿಯಿಂದ ...ರ್ಥಿಯನ್ನು ಹಾಕದೆ ಪುಟ್ಟಣ್ಣಯ್ಯನವರಿಗೆ 'ಫುಲ್ ...ೋರ್ಟ್' ಘೋಷಿಸಿದ್ದಾರೆ. ಮಾತ್ರವಲ್ಲ ಪುಟ್ಟಣ್ಣಯ್ಯನವರಿಗೆ ... ನೀಡಲು ತಮ್ಮ ಪಕ್ಷದ ಕಾರ್ಯಕರ್ತರಿಗೆ ...ಶಿಸಿದ್ದಾರೆ. ಈ ಕ್ಷೇತ್ರದಲ್ಲಿರುವ ಲಿಂಗಾಯತರ ...ಗಳನ್ನು ಪಡೆಯುವ ದುರಾಲೋಚನೆಯಿಂದಲೇ ಪುಟ್ಟಣ್ಣಯ್ಯ ಯಡ್ಡಿಯನ್ನು ...ಲಿಸಿದ್ದು ಪ್ರಜ್ಞಾವಂತ ಮತದಾರರಿಗೆ ಬೇಸರ ತರಿಸಿದೆ.

...ಲ್ಲಿರುವ ಪ್ರಸಿದ್ಧ ಧಾರ್ಮಿಕ ಕ್ಷೇತ್ರ ಆರತಿಉಕ್ಕಡ ದೇವಸ್ಥಾನವನ್ನು ನುಂಗುತ್ತಿದ್ದ ...ಗಣ್ಣರ ಹಿಡಿತದಿಂದ ತಪ್ಪಿಸಿ ಅದನ್ನು ಸರ್ಕಾರ ಮುಜರಾಯಿ ಇಲಾಖೆಯ ...ರ್ದಿಗೆ ಒಪ್ಪಿಸಿದಾಗ ಅದನ್ನು ತೀವ್ರವಾಗಿ ವಿರೋಧಿಸಿದ್ದವರು ಇದೇ ರೈತ ...ಸಕ ಪುಟ್ಟಣ್ಣಯ್ಯ. ಇದು ಕೂಡ ವ್ಯಾಪಕ ಟೀಕೆಗೆ ಒಳಗಾಗಿದೆ.

...ಕಾಂಗ್ರೆಸ್ ನಾಯಕ ಎಸ್.ಎಂ.ಕೃಷ್ಣರನ್ನು ಭೇಟಿ ಮಾಡಿದ ಪುಟ್ಟಣ್ಣಯ್ಯ ... ವಿರುದ್ಧ ಕಾಂಗ್ರೆಸ್‌ನಿಂದ ಯಾವ ಅಭ್ಯರ್ಥಿಯನ್ನೂ ನಿಲ್ಲಿಸದಂತೆ ಮನವಿ ...ಡಿಕೊಂಡಿದ್ದರು. ಆದರೆ ಅದಕ್ಕೆ ಕಾಂಗ್ರೆಸ್ ಒಪ್ಪಿಲ್ಲ. ಕಾಂಗ್ರೆಸ್‌ನಿಂದ ಎಲ್.ಡಿ.ರವಿ ...ವ ಸಾಧ್ಯತೆಗಳಿವೆ. ಅತ ನಿಂತರೆ ಪುಟ್ಟಣ್ಣಯ್ಯ ಪರ ಮತಗಳು ವಿಭಜನೆಗೊಂಡು ... ಶಾಸಕನಾಗುವ ಅವರ ಕನಸು ಭಗ್ನವಾಗಲಿದೆ.



ಕೆ.ಎಸ್. ಪುಟ್ಟಣ್ಣಯ್ಯ



ಸಿ.ಎಸ್. ಪುಟ್ಟರಾಜು

ನಾಗಮಂಗಲ: ಸಂಸದ ಚಲುವರಾಯಸ್ವಾಮಿಗೆ ಗೆಲುವು ದಕ್ಕೀತೇ?

"ಸಮ್ಮಿಶ್ರ ಸರ್ಕಾರದಲ್ಲಿ ಸಾರಿಗೆ, ಆರೋಗ್ಯ ಮಂತ್ರಿಯಾಗಿ ನಾಗಮಂಗಲ ಕ್ಷೇತ್ರಕ್ಕೆ ನೂರಾರು ಕೋಟಿ ರೂಪಾಯಿಗಳ ಅಭಿವೃದ್ಧಿ ಕಾಮಗಾರಿ ತಂದಿದ್ದೇನೆ. ನಾನಲ್ಲದೆ ಮತ್ಯಾರು ಇಲ್ಲಿಂದ ಗೆಲ್ಲುತ್ತಾರೆ" ಎಂಬ ಚಲುವರಾಯಸ್ವಾಮಿಯ 'ಅಹಂ'ಗೆ ಐದು ವರ್ಷಗಳ ಹಿಂದೆ ನಾಗಮಂಗಲದ ಮತದಾರರು ದೊಡ್ಡ ಪೆಟ್ಟು ನೀಡಿದ್ದರು. ಆನಂತರ ನಡೆದ ಸಂಸತ್ ಚುನಾವಣೆಯಲ್ಲಿ ಆತನನ್ನು ಗೆಲ್ಲಿಸಿ ದೆಹಲಿಗೆ ದೂಡಿದ್ದರು.

ರಾಜ್ಯ ರಾಜಕೀಯಕ್ಕೆ ಮರಳಬೇಕೆಂದು ನಿರ್ಧರಿಸಿರುವ ಸಂಸದ ಚಲುವರಾಯಸ್ವಾಮಿ ಈ ಬಾರಿ ಎಷ್ಟೇ ಕೋಟಿ ಖರ್ಚಾದರೂ ಸರಿಯೇ ನಾಗಮಂಗಲ ಕ್ಷೇತ್ರವನ್ನು ವಶಪಡಿಸಿಕೊಳ್ಳಲು ನಿರ್ಧರಿಸಿದ್ದಾರೆ. ಈ ಹಿಂದೆ ಎರಡು ಬಾರಿ ಶಾಸಕರಾಗಿದ್ದಾಗ 'ಜೆಡಿಎಸ್‌ನಲ್ಲಿ ಕುಮಾರಸ್ವಾಮಿ ನಂತರ ನಾನೇ ನಾಯಕ' ಎಂದು ಮೆರೆಯುತ್ತಿದ್ದ ಚಲುವರಾಯಸ್ವಾಮಿಗೆ ಜ್ಞಾನೋದಯವಾಗಿದ್ದು ಸೋಲಿನ ನಂತರವೇ. ಹಾಗಾಗಿ ಈ ಬಾರಿ ಅವರು 'ಅಹಂ'ಅನ್ನು ಬದಿಗಿಟ್ಟು ಚುನಾವಣೆ ಎದುರಿಸುತ್ತಿದ್ದಾರೆ.

ಆದರೆ ಚಲುವರಾಯಸ್ವಾಮಿಗೆ ಮತ್ತೆ ಸೋಲುಣಿಸಲು ಹಾಲಿ ಕಾಂಗ್ರೆಸ್ ಶಾಸಕ ಸುರೇಶ್ ಗೌಡ ನಿಂತಿದ್ದಾರೆ. ಐದು ವರ್ಷಗಳ ಹಿಂದೆ ಈ ಕ್ಷೇತ್ರದ ಜನತೆ ಸುರೇಶ್ ಗೌಡರಿಗೆ ಆಶೀರ್ವಾದ ಮಾಡಿದ್ದು ಚಲುವರಾಯಸ್ವಾಮಿಯ 'ಅಹಂ'ಅನ್ನು ಅಡಗಿಸಲು. ಕಳೆದ ಚುನಾವಣೆ ಸಂದರ್ಭದಲ್ಲಿ ಕ್ಷೇತ್ರದ ಜನರಿಗೆ ಭರವಸೆಗಳ ಹೊಳೆಯನ್ನು ಹರಿಸಿದ್ದ ಸುರೇಶ್ ಗೌಡ "ನಿಮಗೆ ಏನೇ ಸಮಸ್ಯೆ ಬಂದರೂ ನನ್ನ ಮೊಬೈಲ್‌ಗೆ ಯಾವ ಹೊತ್ತಿನಲ್ಲಾದರೂ ಫೋನ್ ಮಾಡಿ" ಎಂದು ತಮ್ಮ ಮೊಬೈಲ್ ನಂಬರ್‌ಅನ್ನು ಹಂಚಿದ್ದರು. ಆದರೆ ಚುನಾವಣೆಗಳು ನಡೆದು ಸುರೇಶ್ ಗೌಡ ಶಾಸಕರಾದ ನಂತರ ಪರಿಸ್ಥಿತಿ ಬದಲಾಯಿತು. ರಾತ್ರಿ ಹೊತ್ತಿನಲ್ಲಿ ಫೋನ್ ಮಾಡಿದರೂ ಸುರೇಶ್ ಗೌಡರ ಫೋನ್ ಸ್ವಿಚ್ ಆಫ್ ಆಗಿರುತ್ತಿತ್ತು. ಹೀಗಾಗಿ ಇಲ್ಲಿನ ಜನ ಅವರಿಗೆ 'ಸ್ವಿಚ್ ಆಫ್ ಸುರೇಶ್ ಗೌಡ' ಎಂಬ ಬಿರುದು ನೀಡಿಬಿಟ್ಟಿದ್ದಾರೆ.


ಅಷ್ಟೇ ಅಲ್ಲದೆ, ಕ್ಷೇತ್ರದ ಕಾಂಗ್ರೆಸ್ ಮುಖಂಡರು ಮತ್ತು ಜಿ.ಪಂ. ಸದಸ್ಯರು "ಸುರೇಶ್ ಗೌಡ ನಮ್ಮನ್ನು ಕಡೆಗಣಿಸಿದ್ದಾರೆ" ಎಂದು ಆರೋಪಿಸಿ ಒಂದೆರಡು ಬಾರಿ ಭಿನ್ನರ ಸಭೆ ನಡೆಸಿದ್ದಾರೆ. ಆದರೆ ಸುರೇಶ್ ಗೌಡ ಅವರನ್ನೆಲ್ಲ ಈಗ ಸಮಾಧಾನಪಡಿಸಿದ್ದಾರೆ. ಜೊತೆಗೆ ಪಟ್ಟಣ ಪಂಚಾಯತಿ ಚುನಾವಣೆಯಲ್ಲಿ ಕಾಂಗ್ರೆಸ್ ಬಹುಮತ ಸಾಧಿಸುವತ್ತ ನೋಡಿಕೊಂಡಿದ್ದಾರೆ. ಈ ಎಲ್ಲ ಕಾರಣಗಳಿಗೆ ಈ ಬಾರಿಯೂ ಗೆಲುವು ನನ್ನದು ಎಂಬ ಹುಮ್ಮಿನಲ್ಲಿದ್ದಾರೆ ಸುರೇಶ್ ಗೌಡ.


ಸುರೇಶ್ ಗೌಡರನ್ನು ಸೋಲಿಸಬೇಕೆಂದು ನಿರ್ಧರಿಸಿರುವ ಚಲುವರಾಯಸ್ವಾಮಿ ಎಲ್ಲಾ ರೀತಿಯ ತಂತ್ರಗಾರಿಕೆಯಲ್ಲಿ ತೊಡಗಿದ್ದಾರೆ. ನಾಗಮಂಗಲ ಕ್ಷೇತ್ರಕ್ಕೆ ಮದ್ದೂರಿನ ಕೊಪ್ಪ ಹೋಬಳಿ ಸೇರಿರುವುದರಿಂದ ಅಲ್ಲಿ ಮಾಜಿ ಶಾಸಕ ಡಿ.ಸಿ.ತಮ್ಮಣ್ಣರ ಮಾತು ನಡೆಯುತ್ತದೆ. ಇದನ್ನು ಅರಿತ ಚಲುವರಾಯಸ್ವಾಮಿ ಇತ್ತೀಚೆಗೆ ತಮ್ಮಣ್ಣ ಜೆಡಿಎಸ್ ಸೇರುವುದರಲ್ಲಿ ಕೈಜೋಡಿಸಿದ್ದಾರೆ. ಆ ಮೂಲಕ ತಮ್ಮ 'ಸಹೋದರಿ' ಕಲ್ಪನಾ ಸಿದ್ಧರಾಜುಗೆ ಕೈಕೊಟ್ಟಿದ್ದಾರೆ.

ಕಾಂಗ್ರೆಸ್ ಸೇರಿದ್ದ ಧರಣೇಂದ್ರಬಾಬುರನ್ನು ಬಿಜೆಪಿಯ ಅಭ್ಯರ್ಥಿಯಾಗಿಸಲು ಚೆಡ್ಡಿಗಳು ಮುಂದಾಗಿದ್ದಾರೆ. ಈ ಹಿಂದೆ ಬಿಜೆಪಿಯಿಂದ ಸ್ಪರ್ಧಿಸಿ 25 ಸಾವಿರ ಮತ ಪಡೆದಿದ್ದ ಧರಣೇಂದ್ರಬಾಬು ಕಳೆದ ಜಿ.ಪಂ ಚುನಾವಣೆ ವೇಳೆಗೆ ಕಾಂಗ್ರೆಸ್ ಸೇರಿ ತನ್ನ ಪತ್ನಿ ತ್ರಿವೇಣಿಯನ್ನು ಜಿ.ಪಂ ಸದಸ್ಯರನ್ನಾಗಿ ಮಾಡಿದ್ದರು. ಇಂತಹ ಧರಣೇಂದ್ರಬಾಬುವನ್ನು ಬಿಜೆಪಿಯಿಂದ ನಿಲ್ಲಿಸಲು ಪ್ರಯತ್ನಿಸಲಾಗುತ್ತಿದೆ. ಕೆಜೆಪಿಯಿಂದ ರಾಜ್ಯ ಪಡಿತರ ವಿತರಕರ ಸಂಘದ ಅಧ್ಯಕ್ಷ ಕೆ.ಕೃಷ್ಣಪ್ಪ ಸ್ಪರ್ಧಿಸುತ್ತಿದ್ದಾರೆ.

ಆದರೆ ಪೈಪೋಟಿ ಎಂಬುದು ಇರುವುದು ಸುರೇಶ್ ಗೌಡ ಮತ್ತು ಚಲುವರಾಯಸ್ವಾಮಿ ನಡುವೆ ಮಾತ್ರ.







ಕೃಷ್ಣ

ಶ್ರೀರಂಗಪಟ್ಟಣ: ಒಡಕಿನ ಲಾಭ ಪಡೆಯಲು ಬಾಬು ಹೊಂಚು

ಕಳೆದ 25 ವರ್ಷಗಳಿಂದ ಸಕ್ರಿಯ ರಾಜಕಾರಣದಲ್ಲಿರುವ ಬಂಡಿಸಿದ್ದೇಗೌಡರ ಕುಟುಂಬದ ಕುಡಿ, ಹಾಲಿ ಶಾಸಕ ರಮೇಶ್‌ಬಾಬು ಬಂಡಿಸಿದ್ದೇಗೌಡ ಶ್ರೀರಂಗಪಟ್ಟಣ ಮತಕ್ಷೇತ್ರದಿಂದ ಎರಡನೇ ಬಾರಿಗೆ ಜಾತ್ಯತೀತ ಜನತಾ ದಳದಿಂದ ಗೆದ್ದು ಶಾಸಕನಾಗಲು ಹೊರಟಿದ್ದಾರೆ. ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್‌ನ ಅಂಬರೀಶ್‌ರನ್ನು ಭಾರೀ ಅಂತರದಿಂದ ಕೆಡವಿದ್ದ ರಮೇಶ್‌ಬಾಬು "ಈ ಬಾರಿಯೂ ಅಂಬಿ ಸ್ಪರ್ಧಿಸಿದರೆ ನನಗೇನೂ ಭಯ-ಆತಂಕವಿಲ್ಲ" ಎಂದು ಹೇಳುತ್ತಿದ್ದರಾದರೂ ಕಳೆದ ಬಾರಿಯ ವಾತಾವರಣ ಕ್ಷೇತ್ರದಲ್ಲಿ ಈಗಿಲ್ಲ.

ಅಂಬರೀಶ್ ಈ ಬಾರಿ ಮಂಡ್ಯದಿಂದ ಸ್ಪರ್ಧಿಸುತ್ತಾರೆಂಬ ಹಿನ್ನೆಲೆಯಲ್ಲಿ ಕಾಂಗ್ರೆಸ್ ಟಿಕೆಟ್ ತನಗೇ ಎಂದು ಮಾಜಿ ಶಾಸಕಿ ಪಾರ್ವತಮ್ಮ ಶ್ರೀಕಂಠಯ್ಯರ ಪುತ್ರ ರವೀಂದ್ರ ಶ್ರೀಕಂಠಯ್ಯ ಈಗಾಗಲೇ ಶ್ರೀರಂಗಪಟ್ಟಣ ಕ್ಷೇತ್ರದಲ್ಲಿ ತಾಯಿಯೊಂದಿಗೆ ಪ್ರಚಾರ ಕಾರ್ಯ ಆರಂಭಿಸಿದ್ದಾರೆ. ಮಂಡ್ಯದಲ್ಲಿ ಅಂಬಿಗೆ ತೀವ್ರ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಕಾಂಗ್ರೆಸ್ ನಾಯಕರು ಶ್ರೀರಂಗಪಟ್ಟಣ ಕ್ಷೇತ್ರದಲ್ಲಿ ತನ್ನ ಅಧಿಕೃತ ಅಭ್ಯರ್ಥಿಯ ಹೆಸರನ್ನು ಇನ್ನೂ ಘೋಷಿಸಿಲ್ಲ. ಕಳೆದ ಚುನಾವಣೆಯಲ್ಲಿ ಅಂಬರೀಶ್‌ಗೆ ಕೊನೆಗಳಿಗೆಯಲ್ಲಿ ಟಿಕೆಟ್ ನೀಡಿದ್ದರಿಂದ ರವೀಂದ್ರ ಶ್ರೀಕಂಠಯ್ಯ ಸಿಟ್ಟಾಗಿದ್ದರು. ಈ ಬಾರಿಯೂ ಹಾಗೆ ಆದರೆ ಮತ್ತದೇ ಫಲಿತಾಂಶ ಪುನರಾವರ್ತನೆಯಾಗುವ ಸಾಧ್ಯತೆಗಳೇ ಅಧಿಕ.

ಇತ್ತೀಚೆಗೆ ನಡೆದ ಪುರಸಭೆ ಚುನಾವಣೆಯಲ್ಲಿ 23 ವಾರ್ಡ್‌ಗಳಿಗೆ ಅಂಬರೀಶ್ ಹಾಗೂ ರವೀಂದ್ರ ಶ್ರೀಕಂಠಯ್ಯ ಇಬ್ಬರೂ ಪ್ರತ್ಯೇಕವಾಗಿ 'ಬಿ' ಫಾರಂ ಹಂಚಿದ್ದರು. ಹಾಗಾಗಿ ಪುರಸಭೆಯಲ್ಲಿ ಎರಡೂ ಬಣಗಳು ಸಮಬಲದ ಗೆಲುವು ಸಾಧಿಸಿವೆ. ಪುರಸಭೆ ಚುನಾವಣೆಯಲ್ಲೇ ಅಂಬಿ-ರವೀಂದ್ರರ ಭಿನ್ನಮತವನ್ನು ಶಮನಗೊಳಿಸಲಾಗದ ಕಾಂಗ್ರೆಸ್‌ನ ರಾಜ್ಯ ನಾಯಕರು ಈಗ ಇವರಿಬ್ಬರ ನಡುವೆ ಆಯ್ಕೆ ಮಾಡಿಕೊಳ್ಳುವ ಕಷ್ಟದ ಪರಿಸ್ಥಿತಿಯಲ್ಲಿದ್ದಾರೆ.

ಅಂಬರೀಶ್ ನಿಂತರೆ ರವೀಂದ್ರ ಕೆಲಸ ಮಾಡುವುದು ಡೌಟು. ರವೀಂದ್ರ ನಿಂತರೆ ಅಂಬಿ ಬಣ ಕೈ ಕೊಡುತ್ತದೆ. ಇವರಿಬ್ಬರ ಒಡಕಿನ ಲಾಭವನ್ನು ಬಳಸಿಕೊಂಡು ಗೆಲ್ಲುವ ಅವಕಾಶಕ್ಕಾಗಿ ರಮೇಶ್‌ಬಾಬು ಹೊಂಚಿ ಕುಳಿತಿದ್ದಾರೆ.

ಸರ್ವೋದಯ ಕರ್ನಾಟಕ ಪಕ್ಷದಿಂದ ಐದು ಬಾರಿ ಸೋತಿರುವ ಕೆ.ಎಸ್.ನಂಜುಂಡೇಗೌಡ ಆರನೇ ಬಾರಿ ಕಣಕ್ಕಿಳಿಯಲಿದ್ದಾರೆ. ಜನಾನುರಾಗಿಯಾಗಿರುವ ರೈತನಾಯಕ ನಂಜುಂಡೇಗೌಡ ಸೂಕ್ತ ಅಭ್ಯರ್ಥಿಯಾದರೂ ಅವರಿಗೆ ಕಾಂಗ್ರೆಸ್, ಜೆಡಿಎಸ್ ಪಕ್ಷಗಳಂತೆ ಹಣ ಚೆಲ್ಲುವ ಕೆಪಾಸಿಟಿ ಇಲ್ಲ. ಹಣ-ಅಧಿಕಾರದ ಆಮಿಷಗಳೇ ಚುನಾವಣೆಯಲ್ಲಿ ಮೇಲುಗೈ ಸಾಧಿಸುವ ಸಂದರ್ಭದಲ್ಲಿ ನಂಜುಂಡೇಗೌಡ ಪರ ಅನುಕಂಪದ ಅಲೆ ಏಳಲು ಪವಾಡವೇ ಸಂಭವಿಸಬೇಕಿದೆ.

ಬಿಜೆಪಿಯಿಂದ ಬಲರಾಂ, ಉಮಾಶಂಕರ್, ತಾ.ಪಂ. ಮಾಜಿ ಅಧ್ಯಕ್ಷ ಶ್ರೀಧರ್ ಟಿಕೆಟ್ ಆಕಾಂಕ್ಷಿಗಳಾಗಿದ್ದಾರೆ. ಅವರಲ್ಲಿ ಯಾರಿಗೇ ಟಿಕೆಟ್ ಸಿಕ್ಕರೂ ನಾಲ್ಕನೇ ಸ್ಥಾನ ಗ್ಯಾರಂಟಿಯಾಗಿದೆ.

ಕೆ.ಆರ್.ಪೇಟೆ: ಕುಟುಂಬ ರಾಜಕಾರಣಕ್ಕೆ ಕೆಬಿಸಿ ಬಲಿ?

ಕೆ.ಆರ್.ಪೇಟೆ ವಿಧಾನಸಭಾ ಕ್ಷೇತ್ರದಿಂದ ಮಾಜಿ ಸ್ಪೀಕರ್ ಕೃಷ್ಣರಿಗೆ ಜಾತ್ಯತೀತ ಜನತಾ ದಳದ ಟಿಕೆಟ್ ಖಾತ್ರಿಯಾಗಿದೆ. ಜೆಡಿಎಸ್ ಟಿಕೆಟ್‌ಗೆ ಭಾರೀ ಪೈಪೋಟಿ ನೀಡಿದ್ದ ಮುಂಬೈ ಉದ್ಯಮಿ ಕೆ.ಸಿ.ನಾರಾಯಣಗೌಡ, ಮಾಜಿ ಶಾಸಕ ಪ್ರಕಾಶ್ ಮತ್ತಿತರರಿಗೆ ಈ ಬಾರಿ ಕೃಷ್ಣರ ಪರ ಕೆಲಸ ಮಾಡದೆ ಬೇರೆ ದಾರಿಯಿಲ್ಲದಂತಾಗಿದೆ.

ಕಾಂಗ್ರೆಸ್‌ನಿಂದ ಹಾಲಿ ಶಾಸಕ ಕೆ.ಬಿ.ಚಂದ್ರಶೇಖರ್‌ಗೆ ಟಿಕೆಟ್ ಸಿಗಲಿದೆ. ಕೆ.ಆರ್.ಪೇಟೆ ಕ್ಷೇತ್ರದ ವೈಶಿಷ್ಟ್ಯವೆಂದರೆ ಒಮ್ಮೆ ಇಲ್ಲಿ ಶಾಸಕರಾದವರು ಸತತ ಎರಡನೇ ಬಾರಿಗೆ ಗೆದ್ದ ಉದಾಹರಣೆಯೇ ಇಲ್ಲ. ಆದರೆ ಇದನ್ನು ಈ ಬಾರಿ ಮುರಿಯುತ್ತೇನೆಂದು ಹೊರಟಿರುವ ಕೆ.ಬಿ.ಚಂದ್ರಶೇಖರ್‌ಗೆ ಸ್ವಪಕ್ಷೀಯರೇ ಮುಳ್ಳಾಗುವ ಸಾಧ್ಯತೆಗಳು ದಟ್ಟವಾಗಿದೆ.

ಕೆ.ಆರ್.ಪೇಟೆ ಕ್ಷೇತ್ರದಲ್ಲಿ ನಡೆದಿರುವ ಬಹುತೇಕ ಕಾಮಗಾರಿಗಳನ್ನು ಚಂದ್ರಶೇಖರ್ ಬೇನಾಮಿಯಾಗಿ ತಮ್ಮ ಪುತ್ರ ಹಾಗೂ ಕುಟುಂಬದವರಿಗೆ ನೀಡಿ ಹೆಸರನ್ನು ಕೆಡಿಸಿಕೊಂಡಿದ್ದಾರೆ. ಶಾಸಕರ ಕುಟುಂಬ ರಾಜಕಾರಣದಿಂದ ಬೇಸತ್ತಿರುವ ಜನತೆ ಇತ್ತೀಚೆಗೆ ನಡೆದ ಪಟ್ಟಣ ಪಂಚಾಯತಿ ಚುನಾವಣೆಯಲ್ಲಿ ಅವರ ಸೋದರನನ್ನು ಸೋಲಿಸುವ ಮೂಲಕ ಸೇಡು ತೀರಿಸಿಕೊಂಡಿದ್ದಾರೆ. ಅಷ್ಟೇ ಅಲ್ಲ, ಈ ಬಾರಿ ಕೃಷ್ಣರಿಗೆ ಮತ್ತೆ ಅವಕಾಶ ನೀಡುವ ಸೂಚನೆಯನ್ನೂ ಮತದಾರರು ಕೊಟ್ಟಿದ್ದಾರೆ.

ಬಿಜೆಪಿಯಿಂದ ತಾಲ್ಲೂಕು ಬಿಜೆಪಿ ಅಧ್ಯಕ್ಷ ಶ್ರೀನಿವಾಸ್, ವರ್ತೂರು ಯುವಸೇನೆಯ ವಿಜಯಶೇಖರ್ ಆಕಾಂಕ್ಷಿಯಾಗಿದ್ದಾರೆ. ಕೆ.ಆರ್.ಪೇಟೆಯ ಬೂಕನಕೆರೆ ಮಾಜಿ ಸಿಎಂ ಯಡಿಯೂರಪ್ಪನವರ ಹುಟ್ಟೂರಾಗಿದ್ದು ಅವರ ತಂಗಿಯ ಮಗ ಅರವಿಂದ ಕೆಜೆಪಿ ಅಭ್ಯರ್ಥಿಯಾಗುವ ಸಾಧ್ಯತೆಗಳಿವೆ. ○



ರಮೇಶ್‌ಬಾಬು



ರವೀಂದ್ರ

ಚಾಮರಾಜನಗರ ಜಿಲ್ಲೆ: ಕಾಂಗ್ರೆಸ್ ವಿರುದ್ಧ ಕೆಜೆಪಿ ಕುರುಡು ಕಾಂಚಾಣ

ರಾಜ್ಯದ 14ನೇ ವಿಧಾನಸಭಾ ಚುನಾವಣೆಗೆ ಇತರೆಡೆ ಎಲ್ಲ ಪಕ್ಷಗಳು ಸಜ್ಜಾಗುತ್ತಿರುವ ಸಂದರ್ಭದಲ್ಲಿ ತಮಿಳುನಾಡಿಗೆ ಅಂಟಿಕೊಂಡಿರುವ ಹಿಂದುಳಿದ ಚಾಮರಾಜನಗರ ಜಿಲ್ಲೆಯಲ್ಲೂ ರಾಜಕೀಯ ಕಸರತ್ತುಗಳು ಮತ್ತು ಕರ್ಮಕಾಂಡಗಳು ಪ್ರಾರಂಭವಾಗಿವೆ.

ಜಿಲ್ಲೆಯಲ್ಲಿರುವ ನಾಲ್ಕು ಕ್ಷೇತ್ರಗಳ ಪೈಕಿ ಕೊಳ್ಳೇಗಾಲ ಮೀಸಲು ಕ್ಷೇತ್ರವಾಗಿದ್ದರೆ ಉಳಿದ ಮೂರು ಸಾಮಾನ್ಯ ಕ್ಷೇತ್ರಗಳಾಗಿವೆ. ಈ ನಾಲ್ಕೂ ಕ್ಷೇತ್ರಗಳಿಂದ ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಗೆದ್ದಿದ್ದರು. ಕೊಳ್ಳೇಗಾಲ ಕ್ಷೇತ್ರದಿಂದ ಧ್ರುವನಾರಾಯಣ, ಹನೂರು ಕ್ಷೇತ್ರದಿಂದ ಆರ್. ನರೇಂದ್ರ, ಚಾಮರಾಜನಗರ ಕ್ಷೇತ್ರದಿಂದ ಸಿ. ಪುಟ್ಟರಂಗಶೆಟ್ಟಿ, ಗುಂಡ್ಲುಪೇಟೆ ಕ್ಷೇತ್ರದಿಂದ ಹೆಚ್.ಎಸ್. ಮಹದೇವಪ್ರಸಾದ್ ಶಾಸಕರಾಗಿದ್ದರು. ಆದರೆ ಆದಾದನಂತರ ನಡೆದ ಲೋಕಸಭಾ ಚುನಾವಣೆಯಲ್ಲಿ ಕೊಳ್ಳೇಗಾಲ ಕ್ಷೇತ್ರದಿಂದ ಗೆದ್ದಿದ್ದ ಕಾಂಗ್ರೆಸ್ ಶಾಸಕ ಧ್ರುವನಾರಾಯಣ ಸಂಸದರಾಗಿ ಆಯ್ಕೆಗೊಂಡಿದ್ದರು. ಆಗ ನಡೆದ ಉಪಚುನಾವಣೆಯಲ್ಲಿ ಬಿಜೆಪಿಯ ಜಿ.ಎನ್. ನಂಜುಂಡಸ್ವಾಮಿ ಕೊಳ್ಳೇಗಾಲದಿಂದ ಗೆದ್ದು ಶಾಸಕರಾಗಿದ್ದರು.

ಗುಂಡ್ಲುಪೇಟೆ

ಕಳೆದ ನಾಲ್ಕು ಚುನಾವಣೆಗಳಲ್ಲಿ ವಿವಿಧ ಪಕ್ಷಗಳಿಂದ ಟಿಕೆಟ್ ಪಡೆದು ಸತತವಾಗಿ ಗೆದ್ದು ಶಾಸಕರಾಗಿ, ಸಚಿವರಾಗಿದ್ದ ಹೆಚ್.ಎಸ್. ಮಹದೇವಪ್ರಸಾದ್ ಈಗ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ. ಸಹಜವಾಗಿಯೇ ಅವರು ಈಗ 'ಕೈ' ಅಭ್ಯರ್ಥಿ. ಇವರ ವಿರುದ್ಧ ಕರ್ನಾಟಕ ಜನತಾ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧೆ ನೀಡಲು ಮುಂದಾಗಿರುವವರು ಹಂಗಳ ಹೋಬಳಿಯ ನಿರಂಜನ್‌ಕುಮಾರ್. ಈ ನಿರಂಜನ ಕುಮಾರನಿಗೆ ಕೆಜೆಪಿಯ ದಂಡನಾಯಕ ಯಡಿಯೂರಪ್ಪ, ಯಡ್ಡಿಯ ಆಪ್ತೆ ಶೋಭಾ ಕರಂದ್ಲಾಜೆ ಮತ್ತು ಕಾ.ಪು. ಸಿದ್ದಲಿಂಗಸ್ವಾಮಿ ಎಂಬ ಅಡಬಿಡಂಗಿಯ ಕೃಪಾಕಟಾಕ್ಷ ಇದ್ದೇ ಇದೆ.

ನಾಲ್ಕು ಬಾರಿ ಸತತವಾಗಿ ಗೆದ್ದಿರುವ ತಾನು ಈ ಬಾರಿಯೂ ಗೆದ್ದೇ ಗೆಲ್ಲುತ್ತೇನೆ ಎಂಬ ಹುಂಬತನವನ್ನು ಕಾಂಗ್ರೆಸ್‌ನ ಮಹದೇವಪ್ರಸಾದ್ ತೋರಿದರೆ ಅವರಿಗೆ ಅಪಾಯ ಕಟ್ಟಿಟ್ಟ ಬುತ್ತಿ. ಯಾಕೆಂದರೆ ಈ ಬಾರಿಯ ಸ್ಪರ್ಧೆಯಲ್ಲಿ ಕೆಜೆಪಿಯ ಝಣಝಣ ಕಾಂಚಾಣ ದೊಡ್ಡ ಪಾತ್ರ ವಹಿಸಲಿದೆ. ಅದು ಕ್ಷೇತ್ರದ ಸುಮಾರು 1.86 ಲಕ್ಷ ಮತದಾರರಲ್ಲಿ ಹೆಚ್ಚಿನವರನ್ನು ದಾರಿ ತಪ್ಪಿಸಬಹುದು. ಈ ಕ್ಷೇತ್ರದಲ್ಲಿ ಜೆಡಿಎಸ್ ಹಾಗೂ ಬಿಜೆಪಿ ಆಟಕ್ಕುಂಟು ಲೆಕ್ಕಕ್ಕಿಲ್ಲ.

ಚಾಮರಾಜನಗರ

ಈ ಜಿಲ್ಲಾ ಕೇಂದ್ರ ಕ್ಷೇತ್ರಕ್ಕೆ ಶಾಸಕರಾಗಿದ್ದ ಸಿ. ಪುಟ್ಟರಂಗಶೆಟ್ಟಿ ಮತ್ತೆ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಲಿದ್ದಾರೆ. ಆದರೆ ಈ ಬಾರಿ ಇವರ ಬದಲಿಗೆ ಮಾಜಿ ಶಾಸಕ ಸಿ. ಗುರುಸ್ವಾಮಿ ಅವರ ಪುತ್ರಿ, ಮತ್ತು ಹಾಲಿ ಜಿ.ಪಂ. ಅಧ್ಯಕ್ಷೆ ಆಗಿರುವ ನಾಗಶ್ರೀ ಪ್ರತಾಪ್‌ಗೆ ಲಿಂಗಾಯತರ ಕೋಟಾ ಹಾಗೂ ಮಹಿಳಾ ಆದ್ಯತೆ ಮೇಲೆ ಟಿಕೆಟ್ ನೀಡಬೇಕೆಂದು ಸಾಕಷ್ಟು ಕಾರ್ಯಕರ್ತರ ಒತ್ತಡ ಹೇರಿದ್ದರು. ಜೊತೆಗೆ, ಪುಟ್ಟರಂಗಶೆಟ್ಟಿ ಚಾಮರಾಜನಗರ ಕ್ಷೇತ್ರಕ್ಕೆ ಸೇರಿದವರಲ್ಲ, ಬದಲಾಗಿ ಅವರು ಕೊಳ್ಳೇಗಾಲ ಕ್ಷೇತ್ರಕ್ಕೆ ಸೇರುವ ಯಳಂದೂರ್‌ನವರು ಎಂಬ ಕಾರಣಗಳನ್ನೂ ಒಡ್ಡಿದ್ದರು.

ಹೋದ ಬಾರಿ ಜಿಲ್ಲೆಯಾದ್ಯಂತ ಹರಡಿರುವ ಉಪ್ಪಾರರ ಮತಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಪುಟ್ಟರಂಗಶೆಟ್ಟಿ ಅವರಿಗೆ ಕಾಂಗ್ರೆಸ್ ಟಿಕೆಟ್ ನೀಡಲಾಗಿತ್ತು. ಈ ಬಾರಿಯೂ ಇದೇ ಮಾನದಂಡವನ್ನು ಅನುಸರಿಸಿ ಅವರಿಗೆ ಮತ್ತೊಂದು ಅವಕಾಶ ಕಲ್ಪಿಸಲಾಗಿದೆ.

ಪುಟ್ಟರಂಗಶೆಟ್ಟಿಯ ವಿರುದ್ಧ ಯಡಿಯೂರಪ್ಪನವರ ಆಪ್ತ ಮತ್ತು ಮಾಜಿ ವಿಧಾನ ಪರಿಷತ್ ಸದಸ್ಯ ಪ್ರೊ.ಮಲ್ಲಿಕಾರ್ಜುನಪ್ಪ ಕೆಜೆಪಿಯಿಂದ ಸ್ಪರ್ಧಿಸಲಿದ್ದಾರೆ. ಜೆಡಿಎಸ್‌ನಿಂದ ಉಪ್ಪಾರರ ಮುಖಂಡ ಮಂಗಲದ ಶಿವಕುಮಾರ್ ಅಥವಾ ಮಾಜಿ ಸಚಿವ ಬೆಂಕಿ ಮಹದೇವು ಕಣಕ್ಕಿಳಿಯಲಿದ್ದಾರೆ. ಬಿಎಸ್‌ಆರ್ ಕಾಂಗ್ರೆಸ್‌ನಿಂದ ಲಿಂಗಾಯತ ಜನಾಂಗದ ಮಲ್ಲೇಶ್ ಸ್ಪರ್ಧಿಸಲಿದ್ದಾರೆ. ಎಂದಿನಂತೆ ಚಳವಳಿಗಾರ ವಾಟಾಳ್ ನಾಗರಾಜ್ ಇಲ್ಲಿಂದ ಸ್ಪರ್ಧಿಸಿದರೂ ಅವರು ಆಟಕ್ಕುಂಟು ಲೆಕ್ಕಕ್ಕಿಲ್ಲ.

ಇಲ್ಲಿ 1.80 ಲಕ್ಷ ಮತದಾರರಿದ್ದು ಉಪ್ಪಾರರ, ಎಸ್ಸಿ, ಎಸ್ಟಿ ಸಮುದಾಯದವರು ಈ ಕ್ಷೇತ್ರದಲ್ಲಿ ನಿರ್ಣಾಯಕ ಪಾತ್ರ ವಹಿಸಲಿದ್ದಾರೆ.

ಕೊಳ್ಳೇಗಾಲ

ಮೀಸಲು ಕ್ಷೇತ್ರವಾದ ಕೊಳ್ಳೇಗಾಲದಿಂದ ಬಿಜೆಪಿಯ ಶಾಸಕ ಜಿ.ಎನ್. ನಂಜುಂಡಸ್ವಾಮಿ ಮತ್ತೆ ಬಿಜೆಪಿಯಿಂದ ಸ್ಪರ್ಧಿಸಲಿದ್ದಾರೆ. ಅವರ ವಿರುದ್ಧ ಕಾಂಗ್ರೆಸ್‌ನಿಂದ ಸಿದ್ದರಾಮಯ್ಯನವರ ಶಿಷ್ಯ ಮತ್ತು ಮಾಜಿ ಶಾಸಕ ಎಸ್. ಜಯಣ್ಣ ಎದುರಾಳಿಯಾಗಿದ್ದಾರೆ. ಇವರಿಬ್ಬರಿಗೂ ಮಾಜಿ ಜೆಡಿಎಸ್ ಶಾಸಕ ಮತ್ತು ಹಾಲಿ ಕೆಜೆಪಿ ಅಭ್ಯರ್ಥಿ 'ನಾಯಿ ಮರಿ, ನಾಯಿ ಮರಿ' ಖ್ಯಾತಿಯ ಎಸ್. ಬಾಲರಾಜ್ ನೇರ ಸ್ಪರ್ಧೆ ನೀಡಲಿದ್ದಾರೆ.

ಇವರೆಲ್ಲರಲ್ಲದೆ, ಬಹುಜನ ಸಮಾಜ ಪಕ್ಷದ ನಾಯಕ ಎನ್.ಮಹೇಶ್ ಕೊನೆಯ ಬಾರಿಗೆ ಚುನಾವಣಾ ಕಣದಲ್ಲಿ ತಮ್ಮ ಅದೃಷ್ಟವನ್ನು ಪರೀಕ್ಷಿಸಲಿದ್ದಾರೆ. ಕಳೆದ ಬಾರಿಯ ಚುನಾವಣೆಯಲ್ಲಿ ಮೂರನೇ ಸ್ಥಾನ ಗಳಿಸಿದ್ದ ಮಹೇಶ್ ಆನಂತರದ ಉಪ ಚುನಾವಣೆಯಲ್ಲಿ ಮಾಜಿ ಐಪಿಎಸ್ ಅಧಿಕಾರಿ ಸುಭಾಷ್ ಭರಣಿ ಅವರಿಗೆ ಅವಕಾಶ ನೀಡಿದ್ದರು. ಆದರೆ ಚುನಾವಣೆಯಲ್ಲಿ ಸೋತ ಭರಣಿ ಪಕ್ಷಾಂತರ ಮಾಡಿ ಬಿಜೆಪಿ ಸೇರಿದ್ದರು.

ಜೆಡಿಎಸ್ ಹಾಗು ಬಿಎಸ್‌ಆರ್ ಪಕ್ಷಗಳಿಂದ ಇಲ್ಲಿ ಯಾರೇ ಸ್ಪರ್ಧಿಸಿದರೂ ಠೇವಣಿ ಉಳಿಸಿಕೊಳ್ಳುವುದು ಕಷ್ಟವಾಗುತ್ತದೆ. ಇಲ್ಲಿ ಒಟ್ಟು 1.88 ಲಕ್ಷ ಮತದಾರರಿದ್ದು, ದೇವಾಂಗ ಮತ್ತು ಲಿಂಗಾಯತ ಸಮುದಾಯಗಳು ನಿರ್ಣಾಯಕ ಪಾತ್ರವಹಿಸಲಿವೆ.

ಹನೂರು

ಮಾಜಿ ಸಚಿವ ದಿವಂಗತ ಜಿ.ರಾಜೂಗೌಡರ ಪುತ್ರ ಮತ್ತು ಹಾಲಿ ಶಾಸಕ ಆರ್. ನರೇಂದ್ರ ಈ ಬಾರಿಯೂ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದಾರೆ. ಇವರಿಗೆ ನೇರ ಸ್ಪರ್ಧೆ ನೀಡಲು ತುದಿಗಾಲಲ್ಲಿ ನಿಂತಿರುವವರು ಬೇರಾರು ಅಲ್ಲ, ಪಕ್ಷಾಂತರಿ ಪರಿಮಳಾ ನಾಗಪ್ಪ. ಕಳೆದ 10 ವರ್ಷಗಳ ರಾಜಕೀಯದಲ್ಲಿ ಪರಿಮಳಾ ಅವರು ಜೆಡಿಎಸ್, ಬಿಎಸ್‌ಪಿ, ಬಿಜೆಪಿ, ಕೆಜೆಪಿ ಪಕ್ಷಗಳಿಗೆ ಒಂದು ಸುತ್ತು ಹಾಕಿ ಬಂದಿದ್ದಾರೆ. ಈಗ ಹಳೇ ಗಂಡನ ಪಾದವೇ ಗತಿ ಎಂಬಂತೆ ಜೆಡಿಎಸ್ ಪಕ್ಷದಿಂದ ಸ್ಪರ್ಧಿಸಲಿದ್ದಾರೆ.

ಕೊನೆ ಕ್ಷಣದವರೆಗೂ ಪರಿಮಳಾ ಅವರಿಗೆ ಮೀಸಲಿಟ್ಟಿದ್ದ ಕೆಜೆಪಿ ಟಿಕೆಟ್ ವಿ. ಸೋಮಣ್ಣ ಅಥವಾ ಅವರ ಅಣ್ಣನ ಮಗ ಸಿಟಿಓ ಅಧಿಕಾರಿ ಬೆಂಗಳೂರಿನ ರಾಜೇಂದ್ರನಿಗೆ ಯಡಿಯೂರಪ್ಪ ನೀಡಲಿದ್ದಾರೆ. ಇಲ್ಲಿಂದ ಕೆಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸುವ ನಿಟ್ಟಿನಲ್ಲೇ ಸೋಮಣ್ಣ ಹಲವಾರು ಗಿಮ್ಮಿಕ್ಕುಗಳನ್ನು ಮಾಡುತ್ತಾ ಬಂದಿದ್ದಾರೆ.

ಬಿಜೆಪಿ ಸರ್ಕಾರದಲ್ಲಿ ಜಿಲ್ಲೆಯ ಉಸ್ತುವಾರಿಯನ್ನು ವಹಿಸಿಕೊಂಡಿದ್ದ ಸೋಮಣ್ಣ ಹನೂರು ಕ್ಷೇತ್ರವನ್ನು ತಾಲೂಕು ಕೇಂದ್ರವನ್ನಾಗಿ ಘೋಷಿಸಿದರು; ಮಹದೇಶ್ವರ ಬೆಟ್ಟದ ಅಭಿವೃದ್ಧಿಗೆ ಪ್ರಾಧಿಕಾರವನ್ನು ರಚಿಸಿದರು; ಬೆಟ್ಟಕ್ಕೆ ಕಾವೇರಿ ನೀರು ಯೋಜನೆಯನ್ನು ಘೋಷಿಸಿದರು; ಜಿಲ್ಲೆಗೆ ನೂರು ಕೋಟಿ ವಿಶೇಷ ಪ್ಯಾಕೇಜ್‌ಅನ್ನು ಪ್ರಕಟಿಸಿದರು. ಇಲ್ಲಿರುವ ಎಲ್ಲಾ ಮಠಗಳಿಗೆ ಹಣದ ಹೊಳೆಯನ್ನೇ ಹರಿಸಿದರು. ಇದೆಲ್ಲದರ ಜೊತೆ ಜಿಲ್ಲಾ ಕೇಂದ್ರಕ್ಕೆ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಅವರನ್ನು ಕರೆತಂದರು: ಇದನ್ನೆಲ್ಲ ತಮ್ಮ ಸಾಧನೆ ಎಂದು ಸೋಮಣ್ಣ ಈಗ ಬೀಗುತ್ತಿದ್ದಾರೆ.


ಇಲ್ಲಿನ ಒಟ್ಟು 1.77 ಲಕ್ಷ ಮತದಾರರು ಈ ಹಿಂದಿನಂತೆ ನಾಗಪ್ಪ ಹಾಗೂ ರಾಜೂಗೌಡರ ಕುಟುಂಬ ರಾಜಕಾರಣವನ್ನು ಬೆಂಬಲಿಸುವವರೋ ಅಥವಾ ಗಿಮಿಕ್ ರಾಜ ಸೋಮಣ್ಣನ ತಂತ್ರಕ್ಕೆ ಮಾರುಹೋಗುವವರೋ ಎಂಬುದನ್ನು ಕಾದು ನೋಡಬೇಕು.

ಈ ಹಿಂದೆ ಕಾಂಗ್ರೆಸ್ ಭದ್ರಕೋಟೆ ಎನಿಸಿಕೊಂಡಿದ್ದ ಚಾಮರಾಜನಗರ ಜಿಲ್ಲೆಯ ನಾಲ್ಕು ವಿಧಾನಸಭಾ ಕ್ಷೇತ್ರಗಳಲ್ಲಿ ಕೆಜೆಪಿಯ ಕುರುಡು ಕಾಂಚಾಣ ಕಾಂಗ್ರೆಸ್‌ಗೆ ದೊಡ್ಡ ಸವಾಲು ಒಡ್ಡಿದೆ.

● ವರದಿಗಾರ




ಸೋಮಣ್ಣ · ರಾಜೇಂದ್ರ · ಜಯಣ್ಣ · ಮಹೇಶ್ · ಮಹದೇವ ಪ್ರಸಾದ್ · ಪುಟ್ಟರಂಗಶೆಟ್ಟಿ



ಮಲ್ಲಿಕಾರ್ಜುನಪ್ಪ · ಬಾಲರಾಜ್ · ನಿರಂಜನ್ · ನರೇಂದ್ರ · ನಂಜುಂಡಸ್ವಾಮಿ · ಪರಿಮಳಾ ನಾಗಪ್ಪ


ಎಆರ್‌ಕೆ ತಟಸ್ಥ



[illegible] ವಿ. ರಾಚಯ್ಯ ಅವರ ಪುತ್ರ ಮತ್ತು ರಾಜ [illegible]

ವಿ. ಸೋಮಣ್ಣ ಕೆಜೆಪಿ ಸೇರಿದರ [illegible] ಅಭ್ಯರ್ಥಿಯಾಗಿ ಸ್ಪರ್ಧಿಸುವ ಯೋಚನೆ ಕಪಮೂರ್ತಿ ಅವರದು. [illegible] ಅವರ ಹಿಂಬಾಲಕರು ಇವತ್ತು ಅತಂತ್ರ ಸ್ಥಿತಿಯಲ್ಲಿದ್ದಾರೆ.

ಈ ಚುನಾವಣೆಯೂ ಬಗೆಹರಿಸಲಾಗದ ಪ್ರಜಾತಂತ್ರದ ವೈರುಧ್ಯ



ಮೇ 5, 2013ರಂದು ನಡೆಯಲಿರುವ ಕರ್ನಾಟಕ ವಿಧಾನಸಭಾ ಚುನಾವಣೆಯ ಫಲಿತಾಂಶವು ಯಾವ ದಿಕ್ಕಿನಲ್ಲೇ ಇರಲಿ, ಅದು ಈ ನಾಡಿನ ಜನತೆಯ ಆಶಯವನ್ನು ಬಿಂಬಿಸುತ್ತದೆ ಎಂದು ಭಾವಿಸಲಾಗುತ್ತದೆ. 'ಪ್ರಬುದ್ಧ ಮತದಾರರು' ಮಾಡಿದ ಆಯ್ಕೆಯಾದ್ದರಿಂದ ಅದನ್ನು ಎಲ್ಲರೂ ಗೌರವಿಸಬೇಕೆಂದು ಹೇಳಲಾಗುತ್ತದೆ; ಸೋತವರೂ ಸಹ ತಾವು 'ಜನಾದೇಶ'ಕ್ಕೆ ಬದ್ಧರಾಗಿರುತ್ತೇವೆಂದು ಘೋಷಿಸುತ್ತಾರೆ. ಪ್ರಜಾಪ್ರಭುತ್ವದಲ್ಲಿ ಬಹುಸಂಖ್ಯಾತ (ಮೆಜಾರಿಟಿ)ರ ಅಭಿಪ್ರಾಯಗಳನ್ನು ತೆಗೆದುಕೊಳ್ಳಲೆಂದೇ ರೂಪಿತವಾದ ಚುನಾವಣೆಯೆಂಬ ವಿದ್ಯಮಾನವನ್ನು ಪ್ರಜಾತಂತ್ರದ ಹಬ್ಬ ಇತ್ಯಾದಿ ಹೆಸರಿನಲ್ಲಿ ವಿಜೃಂಭಿಸಲಾಗುತ್ತದೆ. ಇತ್ತೀಚಿನಿಂದಲೇ ಚುನಾವಣಾ ಭ್ರಷ್ಟಾಚಾರವೇ ಹೆಚ್ಚುತ್ತಿರುವ ದಿನಗಳಲ್ಲಿ, ಮತದಾರರನ್ನು ಜಾಗೃತಗೊಳಿಸಲು ಸ್ವೀಪ್ ಮತ್ತು ಸ್ವೀಪ್ ಥರದ ಕಾರ್ಯಕ್ರಮಗಳನ್ನು ಚುನಾವಣಾ ಆಯೋಗವು ಆಯೋಜಿಸಿದೆ.

ಚುನಾವಣೆಗಳಲ್ಲಿ ಹಣದ ಆಮಿಷ, ಜಾತಿ, ಧರ್ಮ, ಮತಾಂತರ ಇತ್ಯಾದಿಗಳ ಪಾತ್ರದ ಕುರಿತು ಸಾಕಷ್ಟು ಚರ್ಚೆ ನಡೆದಿದೆ. ಅವೆಲ್ಲವನ್ನೂ ಸರಿಪಡಿಸಬೇಕೆಂದು ಚುನಾವಣಾ ಆಯೋಗವು 'ಕಟ್ಟುನಿಟ್ಟಿನ' ಕ್ರಮಗಳಿಗೆ ಮುಂದಾಗುತ್ತಿರುವುದು ಕಳೆದ 20 ವರ್ಷಗಳಿಂದಲೂ ನಡೆಯುತ್ತಾ ಇದೆ. ಇವೆಲ್ಲಾ ಕ್ರಮಗಳ ಹೊರತಾಗಿ ವಿವಿಧ ಸ್ವರೂಪಗಳಲ್ಲಿ ಅವೆಲ್ಲವೂ ಹೆಚ್ಚಾಗುತ್ತಲೇ ಇದೆ.


ಇಂದು ನಡೆಯುತ್ತಿರುವ ಅತೀ ಎನ್ನಿಸುವಷ್ಟು ಪ್ರಮಾಣದ ಓಟಿನ ಮಾರಾಟವನ್ನು ಹೊರತುಪಡಿಸಿಯೇ ನೋಡೋಣ. ಆಗಲೂ ಹಾಲಿ ನಮ್ಮ ದೇಶದಲ್ಲಿ ಅಸ್ತಿತ್ವದಲ್ಲಿರುವ ಚುನಾವಣಾ ಪದ್ಧತಿಯು ಎಷ್ಟರಮಟ್ಟಿಗೆ ಜನರ ಆಶೋತ್ತರಗಳನ್ನು ಪ್ರತಿಬಿಂಬಿಸುತ್ತದೆ?' ಚುನಾವಣಾ ಫಲಿತಾಂಶವು ನಿಜವಾಗಲೂ ಈ ನಾಡಿನ 'ಜನಾದೇಶ'ವಾಗಿರುತ್ತದೆಯೇ? ಈಗ ಅಸ್ತಿತ್ವದಲ್ಲಿರುವ ಪ್ರಜಾಪ್ರಭುತ್ವದ ಒಳತಿರುಳಿಗೂ, ಹೊರತೋರಿಕೆಗೂ ಪರಸ್ಪರ ವಿರುದ್ಧ ಎನ್ನಬಹುದಾದ ಪ್ರಮಾಣದ ವಿಲೋಮ ಸಂಬಂಧವಿದೆ. ಚುನಾವಣೆಗಳೂ ಅಂತಹ ತೋರಿಕೆಯ ಭಾಗವಾಗಿಯಷ್ಟೇ ಜಾರಿಯಲ್ಲಿರುವ ಆಣಕಗಳು ಎನ್ನಬಹುದಾದಷ್ಟು ಮಟ್ಟಿಗೆ ಈ ವೈರುಧ್ಯ ಎದ್ದು ಕಾಣುತ್ತದೆ. ಇನ್ನೊಂದು ವಿಧಾನಸಭಾ ಚುನಾವಣೆಗೆ ರಾಜ್ಯ ಸಿದ್ಧವಾಗುತ್ತಿರುವ ಹೊತ್ತಿನಲ್ಲಿ ಅದರ ಒಂದು ಸಂಕ್ಷಿಪ್ತ ವಿಶ್ಲೇಷಣೆ ಅತ್ಯಗತ್ಯವೆಂದು ಭಾವಿಸಿದ್ದರಿಂದ ಈ ಕೆಳಗಿನ ವಿಚಾರಗಳನ್ನು ಮುಂದಿಡಲಾಗಿದೆ.

ಪ್ರಜಾತಂತ್ರವೆಂದರೇ ನಾಡಿನ ಒಟ್ಟಾರೆ ಆಗುಹೋಗುಗಳಲ್ಲಿ ಸಾಧ್ಯವಾದಷ್ಟೂ ಹೆಚ್ಚು ಜನರ ಪಾಲ್ಗೊಳ್ಳುವಿಕೆಯನ್ನು ಹೊಂದಿರುವ ಒಂದು ಆಡಳಿತ ವ್ಯವಸ್ಥೆಯಾಗಿರಬೇಕು. ಅದೇ ಪ್ರಜಾತಂತ್ರದ ಮೂಲ ಆಶಯ. ಆದರೆ ಚುನಾವಣೆಯನ್ನು ಹೊರತುಪಡಿಸಿದರೆ ಉಳಿದೆಲ್ಲಾ ಸಂದರ್ಭದಲ್ಲಿ ಈ ರೀತಿ 'ಜನರ ಅಭಿಪ್ರಾಯಗಳನ್ನು ಸಂಗ್ರಹಿಸುವ' ವಿಧಾನಗಳು ನಮ್ಮಲ್ಲಿ ನಾಮಕಾವಸ್ತೆಗಷ್ಟೇ ಇವೆ. ಗ್ರಾಮಸಭೆಗಳು, ವಿವಿಧ ಯೋಜನೆಗಳ ಸಂದರ್ಭದಲ್ಲಿ ನಡೆಯುವ ಸಾರ್ವಜನಿಕ ವಿಚಾರಣೆಗಳು (ಪಬ್ಲಿಕ್ ಹಿಯರಿಂಗ್), ಸಾರ್ವಜನಿಕ ಪ್ರಕಟಣೆಯ ಮೂಲಕ ಆಕ್ಷೇಪಣೆಗಳನ್ನು ಆಹ್ವಾನಿಸುವುದು ಇವೆಲ್ಲವೂ ತೋರಿಕೆಗೆ ಮಾತ್ರ ನಡೆಯುತ್ತವೆ ಎನ್ನುವುದಕ್ಕೆ ಯಾವ ಉದಾಹರಣೆಗಳನ್ನೂ ನೀಡುವ ಅಗತ್ಯವಿಲ್ಲ. ಅದು ದೇಶದ ಜನರ ಕಾಮನ್‌ಸೆನ್ಸ್‌ನ ಭಾಗವಾಗುವ ಮಟ್ಟಿಗೆ ಅಂತಹ ಕ್ರಮಗಳೆಲ್ಲವೂ ನಡೆಯುತ್ತಿವೆ.

ಆದರೆ ಚುನಾವಣೆಗೆ ಮಾತ್ರ ಸಾಕಷ್ಟು ಮಹತ್ವವಿದೆ. ಏಕೆಂದರೆ, ಅದು ಅಧಿಕಾರವನ್ನು ಯಾರು ಚಲಾಯಿಸಬೇಕೆನ್ನುವುದನ್ನು ನಿರ್ಧರಿಸುತ್ತದೆ. ಈ ರೀತಿ ಆಯ್ಕೆಗೊಂಡವರು, ಕೇವಲ ಅಧಿಕಾರ ಚಲಾಯಿಸುವುದು ಮಾತ್ರವಲ್ಲ, ಶಾಸನ ಸಭೆಗಳಲ್ಲಿ ಸಾಕಷ್ಟು ಚರ್ಚೆಯ ನಂತರ ಶಾಸನಗಳನ್ನು ರೂಪಿಸುತ್ತಾರೆ, ನಿಯಮಾವಳಿಗಳನ್ನು ರಚಿಸುತ್ತಾರೆ, ಜನತೆಯ ಪರವಾಗಿ ಕಾರ್ಯಾಂಗದ ಮೇಲೂ ಅಧಿಕಾರ ಚಲಾಯಿಸಿ ಪ್ರಜಾತಂತ್ರವನ್ನು ಎರಡು ಚುನಾವಣೆಗಳ ನಡುವೆ ಜಾರಿಯಲ್ಲಿಡುತ್ತಾರೆ ಎಂದು ಭಾವಿಸಲಾಗಿದೆ. ಸ್ವತಂತ್ರ ನ್ಯಾಯಾಂಗ ಮತ್ತು ನಿಯಮಗಳಿಗನುಸಾರವಾಗಿಯೇ ನಡೆಯಬೇಕಾದ ಕಾರ್ಯಾಂಗವಿರುತ್ತದಾದರೂ (ಈ ನ್ಯಾಯಾಂಗ ಮತ್ತು ಕಾರ್ಯಾಂಗಗಳು ಎಲ್ಲಾ ಸಂದರ್ಭಗಳಲ್ಲೂ - ಯಾರೇ ಅಧಿಕಾರದಲ್ಲಿದ್ದರೂ - ನಿರ್ದಿಷ್ಟ ವರ್ಗಗಳ ಹಿತಾಸಕ್ತಿಗಳನ್ನೇ ಕಾಯುತ್ತವೆ ಎಂಬ ಅಭಿಪ್ರಾಯಗಳೇನೇ ಇದ್ದರೂ) ಅವುಗಳ ಮೇಲೂ ಪರಮಾಧಿಕಾರವು ಸಂಸತ್ತಿಗೆ ಇರುತ್ತದೆ. ಜನರಿಗೆ ಅವಕಾಶಗಳನ್ನು ಸೃಷ್ಟಿಸುವ ಅಥವಾ ಜನರನ್ನು ವಿವಿಧ ರೀತಿಯಲ್ಲಿ ನಿರ್ಬಂಧಿಸುವ ಎಲ್ಲಾ ಅವಕಾಶಗಳು ಈ ಅಧಿಕಾರ ಚಲಾಯಿಸುವ ಸಂದರ್ಭದಲ್ಲಿ ಇರುತ್ತವೆ. ಅಧಿಕಾರಕ್ಕೇರಿದವರು ಏನು ಮಾಡಿದರೂ, ಅವರು ಜನರಿಂದ ಆಯ್ಕೆಯಾಗಿರುತ್ತಾರಾದ್ದರಿಂದ ಅದು ಇಡೀ ಜನರೇ ಸೇರಿ ಮಾಡಿದ ಹಾಗೆ ಅಂತ ಅರ್ಥಮಾಡಿಕೊಳ್ಳಬೇಕು.

ಪ್ರಜಾಭಿಪ್ರಾಯವೆನ್ನುವುದು ವ್ಯಕ್ತವಾಗಲು ಇರುವ ಏಕೈಕ ಅವಕಾಶವೆಂದರೆ ಅದು ಚುನಾವಣೆಗಳ ಮೂಲಕ ಮಾತ್ರವಾಗಿದೆ. ಹಾಗಿದ್ದ ಮೇಲೆ, ಈ ಚುನಾವಣೆಗಳನ್ನು ವಿಶ್ಲೇಷಣೆಗೊಳಪಡಿಸುವುದು ಎಂದರೆ ಅದು ಪ್ರಜಾತಂತ್ರದ ವಿಶ್ಲೇಷಣೆ ಮಾಡಿದಂತೆಯೇ ಆಗಿದೆ. ಮೊದಲನೆಯದಾಗಿ, ಚುನಾವಣಾ ಫಲಿತಾಂಶವು ಬಹುಸಂಖ್ಯಾತ ಜನತೆಯ ಆಶಯಗಳನ್ನು ಪ್ರತಿಫಲಿಸುತ್ತದೆ ಎಂಬುದೇ ಸುಳ್ಳಾಗಿದೆ. 1952ರಿಂದ ಇಲ್ಲಿಯವರೆಗೆ, ಒಂದು ಸಾರಿ ಹೊರತುಪಡಿಸಿದರೆ, ಕೇಂದ್ರದಲ್ಲಿ ರಾಜ್ಯವಾಳಿದ ಯಾವ ಪಕ್ಷವೂ ಶೇ.50ಕ್ಕಿಂತ ಹೆಚ್ಚಿನ ಮತವನ್ನು ಪಡೆದುಕೊಂಡೇ ಇಲ್ಲ. ಒಟ್ಟು ಮತಗಳ ಲೆಕ್ಕವಲ್ಲ, ಚಲಾವಣೆಯಾದ ಮತಗಳಲ್ಲೇ ಶೇ.50ನ್ನು ಪಡೆದುಕೊಂಡಿಲ್ಲ, ಅದರರ್ಥ ಅಧಿಕಾರ ನಡೆಸುವ ಪಕ್ಷದ ವಿರುದ್ಧ ಶೇ.50ಕ್ಕಿಂತ ಹೆಚ್ಚು ಜನರು ಓಟು ಹಾಕಿರುತ್ತಾರೆ. ಈ ಸಾರಿಯ ಚುನಾವಣೆಯಲ್ಲಿ 6 ಪಕ್ಷಗಳು ರಾಜ್ಯಾದ್ಯಂತ ತಮ್ಮ ಅಭ್ಯರ್ಥಿಗಳನ್ನು ನಿಲ್ಲಿಸುವುದರಿಂದ, ಅಧಿಕಾರ ಹಿಡಿಯುವ ಪಕ್ಷ ಅಥವಾ ಮೈತ್ರಿಕೂಟದ ಶೇಕಡಾವಾರು ಗಳಿಕೆ ಹಿಂದಿಗಿಂತ ಕಡಿಮೆ ಇರುತ್ತದೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಅಧಿಕಾರ ಪಡೆದ ಬಿಜೆಪಿ ಪಕ್ಷಕ್ಕಿಂತ, ಎರಡನೆಯ ಸ್ಥಾನಕ್ಕಿಳಿದಿದ್ದ ಕಾಂಗ್ರೆಸ್ ಪಕ್ಷ ಹೆಚ್ಚಿನ ಓಟುಗಳನ್ನು ಪಡೆದುಕೊಂಡಿತ್ತು!

ಅಂದರೆ ಚುನಾವಣೆಗಳು ಬಹುಸಂಖ್ಯಾತ ಜನರ ಅಭಿಪ್ರಾಯವನ್ನು ಸೀಟುಗಳನ್ನಾಗಿ ಪರಿವರ್ತಿಸಿ ಪಕ್ಷವನ್ನು ಆಯ್ಕೆ ಮಾಡುವುದಿಲ್ಲ, ಇನ್ನು ಚುನಾವಣೆಗಳಾಚೆ, ಇಡೀ ಐದು ವರ್ಷ ಅತ್ಯಂತ ಅಲ್ಪಸಂಖ್ಯಾತ (ಬಹುಶಃ ಶೇ.5ಕ್ಕಿಂತ ಕಡಿಮೆ ಇರುವ) ಕಾರ್ಪೊರೇಟ್ ಉದ್ದಿಮೆಪತಿಗಳ ಪರವಾಗಿ ಆಡಳಿತ ನಡೆಯುತ್ತದೆ. ಈ ಆಡಳಿತದ ಅತ್ಯಂತ ದೊಡ್ಡ ಫಲಾನುಭವಿ ವರ್ಗ ಅದೇ ಆಗಿರುತ್ತದೆ. ಉಳಿದಂತೆ ಇನ್ನೊಂದು ಶೇ.20ರಷ್ಟು ಇರುವ ಮೇಲ್ವರ್ಗ ಅಥವಾ ಮೇಲ್ಮಧ್ಯಮ ವರ್ಗಗಳು ಎರಡನೇ ಫಲಾನುಭವಿ ವರ್ಗವಾಗಿರುತ್ತದೆ. ಈ ಶೇ.25ರಷ್ಟು ಜನರು ಚುನಾವಣೆಯಲ್ಲಿ ಅತ್ಯಂತ ಕಡಿಮೆ ಪ್ರಮಾಣದಲ್ಲಿ ಮತ ಚಲಾಯಿಸಿರುತ್ತಾರೆ! ಹೊರ ತೋರಿಕೆಗೆ ಬಹುಸಂಖ್ಯಾತರ ಆಶೋತ್ತರದ ಪ್ರಜಾಪ್ರಭುತ್ವ, ಒಳ ತಿರುಳಿನಲ್ಲಿ ಅಲ್ಪಸಂಖ್ಯಾತರ ಪರವಾದ ಅಧಿಕಾರ ಚಲಾವಣೆ!!



ವರ್ಗ, ಜಾತಿ (ಎಸ್.ಸಿ., ಎಸ್.ಟಿ ಕ್ಷೇತ್ರಗಳ ಮೀಸಲು ಹೊರತುಪಡಿಸಿ), ಲಿಂಗ, ಧರ್ಮ, ಭಾಷೆಗಳನ್ನು ಮೀರಿದ ಓಟು ಮತ್ತು ಚುನಾವಣೆಯು ಆಳುವವರನ್ನು ಆಯ್ಕೆ ಮಾಡುವ ವ್ಯವಸ್ಥೆಯೆಂಬಂತೆ ಇದನ್ನು ತೋರಿಸಲಾಗುತ್ತಿದೆ. ಆದರೆ ಇದು ಅತ್ಯಂತ ದಮನಿತ ವರ್ಗ, ಜಾತಿ, ಲಿಂಗ, ಧರ್ಮದ ಜನರು ಆಯ್ಕೆಯಾಗದಂತೆ ತಡೆಯುವ ವಿದ್ಯಮಾನವಾಗಿದೆ. ಮೀಸಲು ಕ್ಷೇತ್ರಗಳ ವಿಚಾರದಲ್ಲೂ ಇದು ನಿಜವಾಗಿದೆ. ಏಕೆಂದರೆ ಮೀಸಲು ಕ್ಷೇತ್ರದಲ್ಲಿ ಆಯ್ಕೆಯಾಗುವ ಅಭ್ಯರ್ಥಿಯು, ತನ್ನ ಜಾತಿಯನ್ನು ಬಿಟ್ಟು ಉಳಿದವರ ಮತಗಳನ್ನು ಗಳಿಸುವುದನ್ನೇ ಪ್ರಧಾನ ಆದ್ಯತೆ ಮಾಡಿಕೊಂಡಿರಬೇಕಾಗುತ್ತದೆ. ಎಲ್ಲರೂ ಮೀಸಲಾತಿ ಪಡೆದುಕೊಂಡ ಸಮುದಾಯದವರೇ ಸ್ಪರ್ಧಿಸಿರುತ್ತಾರಾದ್ದರಿಂದ, ಇದು ಸಹಜ. ಅಂದರೆ ದಲಿತ ಮೀಸಲು ಕ್ಷೇತ್ರದಲ್ಲಿ ಯಾರು ಹೆಚ್ಚು ದಲಿತೇತರರ ವಿಶ್ವಾಸ ಗಳಿಸಿರುತ್ತಾರೋ, ಅವರೇ ಆಯ್ಕೆಯಾಗಲು ಸಾಧ್ಯ. ಇದನ್ನೇ 'ದಲಿತರಿಗೆ ಪ್ರತ್ಯೇಕ ಮತಕ್ಷೇತ್ರಗಳು ಬೇಕು, ಇಲ್ಲವಾದರೆ ಮೀಸಲು ಕ್ಷೇತ್ರಗಳು ದಲಿತ ಪರ ಹಿತಾಸಕ್ತಿ ಇರುವ ವ್ಯಕ್ತಿಗಳನ್ನು ಚುನಾಯಿಸಲಾರವು' ಎಂಬ ಅಂಬೇಡ್ಕರ್ ಅವರ ಪ್ರತಿಪಾದನೆಯಲ್ಲಿ ನೋಡಬಹುದಾಗಿದೆ.

ದಲಿತೇತರರ ವಿರೋಧವನ್ನು ಈ ಕ್ಷೇತ್ರಗಳ ಅಭ್ಯರ್ಥಿಗಳು ಎಂದಿಗೂ ಕಟ್ಟಿಕೊಳ್ಳಲು ಸಾಧ್ಯವಿಲ್ಲ' ಎಂಬುದರ ಹೊರತಾಗಿಯೂ ಮತ್ತೊಂದು ಸಂಗತಿಯನ್ನು ಗಮನಿಸಬೇಕು. 40 ವರ್ಷಗಳಿಂದ ಮೀಸಲು ಕ್ಷೇತ್ರದಿಂದ ಗೆದ್ದು ಬರುವ ಒಬ್ಬ ದಲಿತ ನಾಯಕರು, ಒಂದು ವೇಳೆ ಆ ಕ್ಷೇತ್ರದ ಮೀಸಲು ರದ್ದಾದರೆ ಕೂಡಲೇ ಕ್ಷೇತ್ರ ಬದಲಿಸುತ್ತಾರೆಂದರೆ, ಇದುವರೆಗೆ ಆ ಕ್ಷೇತ್ರದ ಸಾಮಾಜಿಕ ಸಮೀಕರಣ ಹೇಗಿತ್ತು ಎಂಬುದನ್ನು ಅರ್ಥೈಸಿಕೊಳ್ಳಬಹುದು. ಗುರುಮಿಟಕಲ್ ಕ್ಷೇತ್ರದ ಮೀಸಲು ರದ್ದಾದಾಗ, 'ಮುಖ್ಯಮಂತ್ರಿ ಕ್ಯಾಂಡಿಡೇಟ್' ಆಗಿದ್ದ ಖರ್ಗೆಯವರು ಪಕ್ಕದ ಮೀಸಲು ಕ್ಷೇತ್ರ ಚಿತ್ತಾಪುರಕ್ಕೆ ಬದಲಿಸಿಕೊಂಡರು. ಇವತ್ತಿನ ಕೆಪಿಸಿಸಿ ಅಧ್ಯಕ್ಷ ಡಾ.ಜಿ.ಪರಮೇಶ್ವರ್ (ಪ್ರಭಾವಿ, ಶ್ರೀಮಂತ ಕುಟುಂಬದ ಮತ್ತು ಆ ಕ್ಷೇತ್ರದಲ್ಲಿ ಪಾರಂಪರಿಕವಾಗಿ ಗೆದ್ದು ಬಂದ ಹಿನ್ನೆಲೆ ಹೊಂದಿದ್ದರೂ) ಮಧುಗಿರಿ ಕ್ಷೇತ್ರದಿಂದ ಕೊರಟಗೆರೆಗೆ ಬದಲಾಗಿದ್ದೂ ಹಾಗೆಯೇ.

ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದ ಮೀಸಲು ರದ್ದಾದ ಕೂಡಲೇ, ಆ ಕ್ಷೇತ್ರದಲ್ಲಿ ಮತ್ತೆ ಒಂದು ಪಕ್ಷವೂ ಪ್ರಭಾವಿ ಒಕ್ಕಲಿಗ ಜಾತಿಗೆ ಸೇರದವರಿಗೆ ಟಿಕೆಟ್ ಕೊಡಲಿಲ್ಲ. ಕಳೆದ ಉತ್ತರ ಪ್ರದೇಶದ ವಿಧಾನಸಭಾ ಚುನಾವಣೆಯಲ್ಲಿ ಬಿಎಸ್‌ಪಿಯಂತಹ 'ಬಹುಜನ' ಪಕ್ಷವು, ಆ ರಾಜ್ಯದ ಮೀಸಲು ಕ್ಷೇತ್ರಗಳಿಗಿಂತ ಕೇವಲ ಒಂದು ಕ್ಷೇತ್ರದಲ್ಲಿ ಮಾತ್ರ ದಲಿತರಿಗೆ ಹೆಚ್ಚು ಟಿಕೆಟ್‌ಗಳನ್ನು ನೀಡಿತ್ತು ಎಂಬ ಸುದ್ದಿ ಪತ್ರಿಕೆಗಳಲ್ಲಿ ಬಂದಿತ್ತು. ಒಟ್ಟಿನಲ್ಲಿ ಮೀಸಲು ಕ್ಷೇತ್ರಗಳೂ ಸೇರಿದಂತೆ ಯಾವುವೂ, ಆಯಾ ಸಮುದಾಯಗಳ ಹಿತಾಸಕ್ತಿಗಳನ್ನು ಎತ್ತಿಹಿಡಿಯುವ ವ್ಯಕ್ತಿಗಳನ್ನು ಆಯ್ಕೆ ಮಾಡುವಂತೆ ನಮ್ಮ ಚುನಾವಣಾ ವ್ಯವಸ್ಥೆ ಇಲ್ಲ.

ಯಾರೇ ಅಧಿಕಾರಕ್ಕೆ ಬಂದರೂ, ಅಲ್ಪಸಂಖ್ಯಾತರಲ್ಲಿ ಅಲ್ಪಸಂಖ್ಯಾತರಾದ ಕಾರ್ಪೊರೇಟ್ ಉದ್ದಿಮೆಪತಿಗಳ ಪರವಾದ ನೀತಿಗಳನ್ನೇ ಜಾರಿಗೆ ತರುತ್ತಾರೆ. ಅದು ಕಳೆದ 23 ವರ್ಷಗಳಲ್ಲಿ ಮತ್ತಷ್ಟು ನಿಚ್ಚಳವಾಗಿದೆ. ಕೇವಲ ಅವರ ಪರವಾದ ನೀತಿಗಳು ಮಾತ್ರವಲ್ಲ, ಕಾನೂನನ್ನು ಅವರಿಗಾಗಿ ಬದಲಾಯಿಸಲಾಗುತ್ತಿದೆ; ಕೋರ್ಟ್ ತೀರ್ಪುಗಳು ಅವರ ಪರವಾಗುತ್ತಿವೆ; ಅರೆ ಮಿಲಿಟರಿ ಪಡೆಗಳು ಮತ್ತು ಸೈನ್ಯವನ್ನು ಅವರ ಪರವಾಗಿ ನಿಯೋಜಿಸಲಾಗುತ್ತಿದೆ (ಕೂಡಂಕುಳಂ, ಪೋಸ್ಕೋ ಇತ್ಯಾದಿಗಳು ಕೆಲವು ಉದಾಹರಣೆಗಳಷ್ಟೇ). ಅಂದರೆ ರಾಜಪ್ರಭುತ್ವವಿದ್ದಾಗ ಜಾರಿಯಲ್ಲಿದ್ದ ಒಂದು ಕುಟುಂಬದ ವಂಶಪಾರಂಪರ್ಯ ಸರ್ವಾಧಿಕಾರೀ ಆಳ್ವಿಕೆಯ ಜಾಗದಲ್ಲಿ, ಕಾರ್ಪೊರೇಟ್ ಉದ್ದಿಮೆಪತಿಗಳ ಕಾನೂನುಬದ್ಧ ಸರ್ವಾಧಿಕಾರ ಜಾರಿಗೆ ಬಂದಿದೆ.


ಆದರೂ ಈ ಚುನಾವಣೆಗಳು ನಮ್ಮನ್ನು ಆಳುವವರನ್ನು ನಾವೇ ಚುನಾಯಿಸಿಕೊಳ್ಳುವ ಅದ್ಭುತ ಪ್ರಕ್ರಿಯೆಗಳೆಂದು ಹೇಳಲಾಗುತ್ತಿದೆ. ಬಹುಸಂಖ್ಯಾತರ ಅಭಿಪ್ರಾಯ ಪಡೆಯುವ ವಿಧಾನವೆಂದು ಅದನ್ನು ಬಿಂಬಿಸಲಾಗಿದೆ. ಹೊರ ತೋರಿಕೆಗೂ, ಒಳ ತಿರುಳಿಗೂ ಇಷ್ಟು ಪ್ರಮಾಣದ ವೈರುಧ್ಯ ಇರುವ ಮತ್ತೊಂದು ಉದಾಹರಣೆ ಇರಲಾರದೇನೋ? ಇಡೀ ಚುನಾವಣಾ ವ್ಯವಸ್ಥೆ ಆಮೂಲಾಗ್ರವಾಗಿ ಬದಲಾಗಬೇಕು; ನಿಜವಾದ ಅರ್ಥದಲ್ಲಿ ಜನಪ್ರತಿನಿಧಿಗಳನ್ನು ಆಯ್ಕೆ ಮಾಡುವ ರೀತಿಯಲ್ಲಿ ಪುನರ್‌ರೂಪಿಸಬೇಕು ಎಂದು ಹಲವರು ಹೇಳುತ್ತಿದ್ದಾರೆ. ಅದರ ಕುರಿತು ಬೇರೆ ಬೇರೆ ಆಯಾಮಗಳ ಚರ್ಚೆಗಳೂ ನಡೆಯುತ್ತಿವೆ. ಸ್ವತಃ ಚುನಾವಣಾ ಆಯೋಗವೇ ಕೆಲವು ಶಿಫಾರಸ್ಸುಗಳನ್ನೂ ಮಾಡಿದೆ.

ಆ ರೀತಿಯಲ್ಲಿ ಈ ದೇಶದ ಚುನಾವಣಾ ವ್ಯವಸ್ಥೆ ಬದಲಾಗಲು ಸಾಧ್ಯವೇ? ಯಾರೇ ಅಧಿಕಾರಕ್ಕೆ ಬಂದರೂ, ಇಡೀ ಸರ್ಕಾರೀ ಯಂತ್ರಾಂಗವೇ ತಮ್ಮ ಪರವಾಗಿ ದುಡಿಯುವಂತೆ ಮಾಡಿಕೊಂಡಿರುವ ಭಾರತದ ಮತ್ತು ಜಗತ್ತಿನ ಕಾರ್ಪೊರೇಟ್ ಶಕ್ತಿಗಳು ಅದಕ್ಕೆ ಅವಕಾಶ ಕೊಡುವರೇ? ಖಂಡಿತಾ ಇಲ್ಲ. ಅಂತಹ ಬದಲಾವಣೆ ಮತ್ತೊಂದು ಚುನಾವಣೆಯಿಂದ ಸಾಧ್ಯವಿಲ್ಲ. ಅಂತಹ ಚುನಾವಣಾ ವ್ಯವಸ್ಥೆಯು, ಸಮಗ್ರವಾಗಿ ಬದಲಾದ ರಾಜಕೀಯ, ಆರ್ಥಿಕ, ಸಾಮಾಜಿಕ ಸನ್ನಿವೇಶದಲ್ಲಿ ಸಾಧ್ಯ. ಅದು ಸಮಗ್ರವಾದ ಮುನ್ನೋಟವಿರುವ ಜನಾಂದೋಲನದಿಂದ ಸಾಧ್ಯವಾಗಬೇಕು. ಈ ಚುನಾವಣೆಯ ಸಂದರ್ಭದಲ್ಲೂ, ಅದರ ಕುರಿತ ಚರ್ಚೆ ಹಾಗೂ ಚಿಂತನೆಗಳು ನಡೆಯಬೇಕಲ್ಲವೇ? ○

ಹಳೇ ವೃತ್ತಿ



ಈ ಭಟ್ಟಂಗಿತನ ಅಥವಾ sycophancy ಎಷ್ಟು ವೈವಿಧ್ಯಮಯ ವಾದದ್ದು ಎಂದರೆ ನಿಮಗೆ ವಿನೋದಪ್ರಜ್ಞೆ ಇದ್ದರೆ ನಿತ್ಯವೂ ಇದರ ಹೊಸಹೊಸ ರೂಪ ಕಾಣುತ್ತವೆ. ಮನುಷ್ಯನ ಬಹುಮುಖ್ಯ ನೆಮ್ಮದಿ ಯಾವುದು ಎಂಬುದು ನಿಮಗೆ ಗೊತ್ತು; ನಿಮ್ಮ ಸಮುದಾಯದ, ಕುಟುಂಬದ ಮೆಚ್ಚಿಗೆ, ವಿಶ್ವಾಸ ನಿಮಗೆ ಬಹು ಮುಖ್ಯವಾದದ್ದು. ಆಟ, ವೃತ್ತಿ, ಸಾಹಸ, ಚಮತ್ಕಾರ ಎಲ್ಲದರಲ್ಲಿ ಮುಳುಗುವ ವ್ಯಕ್ತಿ ಎಲ್ಲದಕ್ಕೆ ಜನರ ತಾರೀಫ್ ಇಷ್ಟಪಡುತ್ತಾನೆ. ಇದು ಪ್ರಾಣಿಗಳಲ್ಲಿ ಅಷ್ಟಾಗಿ ಇಲ್ಲ ಎಂದು ಕಾಣುತ್ತದೆ. ನಾನು ಎಲ್ಲಂತೆ ನಾಯಿ ಇದನ್ನು ಸ್ವಲ್ಪಮಟ್ಟಿಗೆ ಇಷ್ಟಪಡುತ್ತದೆ. ಯಜಮಾನನನ್ನು ಮೆಚ್ಚಿಸಿ ಆತನ ಸೇವರಿಕೆಗಾಗಿ, ತಿನಿಸಿಗಾಗಿ ಕಾತರಿಸುತ್ತದೆ. ಒಬ್ಬ ವ್ಯಕ್ತಿ ಯಾವುದೇ ಪ್ರೀತಿ, ಮೆಚ್ಚುಗೆ, ಬೆಂಬಲ ಇಲ್ಲದೆ ಬೆಳೆದರೆ ಆತ ಮನುಷ್ಯನಂತೆಯೇ ಇರುವುದಿಲ್ಲ ಎಂದು ನನಗನ್ನಿಸುತ್ತದೆ. ಇದು ಮನುಷ್ಯನ ಆಗೂಢ ಆಸೆ; ಕಾದಂಬರಿಯಲ್ಲಿ ಕೂಡ ಇದು ಕಾಣುತ್ತದೆ. ಒಂದು ವಾಕ್ಯದಲ್ಲಿ ಬರುವ ಗಾದೆ, ಸತ್ಯ, ನಿಷ್ಠುರತೆ ಎಲ್ಲವೂ ಕೇಳುವವರಲ್ಲಿ ಅಲೆ ಹುಟ್ಟಿಸುತ್ತವೆ. ಆದ್ದರಿಂದಲೇ ಅನಾಮಿಕನಾದ ಸಾಮಾನ್ಯನ ಮುಂಜಿ, ಮದುವೆ, ಸೀಮಂತ ಇತ್ಯಾದಿ ಇರುತ್ತದೆ. ಈ ಮದುವೆಗಳು ನನಗೆ ಸದಾ ವಿಸ್ಮಯ ಹುಟ್ಟಿಸುತ್ತವೆ. ಇವು ಶ್ರೀಮಂತರ ಪ್ರದರ್ಶನ, ಬಡವರ ದುರಂತ, ಜಾತಿವಾದಿಗಳ ನೀಚತನ, ಕಂದಾಚಾರದ ಮುಂದುವರಿಕೆ- ಇವೆಲ್ಲ ಆಗಿರುವುದರ ಜೊತೆಗೆ ನಾನು ಹಳ್ಳಿಗಳಲ್ಲಿ ಸಹಜವಾಗಿ ಮಾಡುವ ಮದುವೆಗಳನ್ನು ಚಿಕ್ಕಂದಿನಲ್ಲಿ ನೋಡುತ್ತಿದ್ದೆ. ಆಗ ಹೆಣ್ಣುಮಕ್ಕಳು ಕಡಿಮೆ ಇದ್ದರೋ ಏನೋ- ಹುಡುಗನಿಗೆ ವರದಕ್ಷಿಣೆ ಕೊಡುವ ಬದಲು ಹೆಣ್ಣುಗಳ ತಂದೆತಾಯಿಗಳಿಗೆ ತೆರ ಕೊಟ್ಟು ಹೆಣ್ಣು ತರುತ್ತಿದ್ದರು. ಹಾಗೆಯೇ ಮದುವೆ ಅನಾಮಿಕರ ವ್ಯಕ್ತಿತ್ವಕ್ಕೆ ಒತ್ತುಕೊಟ್ಟಂತೆ, ಎಂದೂ ರಂಗದ ಮಧ್ಯೆ ಬಾರದಿರುವ ಎಳೆಯರಿಬ್ಬರಿಗೆ ಪ್ರಾಮುಖ್ಯ ಬಂದು ಅವರಿಗೆ ಹೊಸ ಚೈತನ್ಯ ಒದಗಿದಂತೆ ಅನ್ನಿಸುತ್ತಿತ್ತು.



ನಾನು ಹೇಳಬೇಕೆಂದಿರುವುದು ಭಟ್ಟಂಗಿಗಳ ಬಗ್ಗೆ. ಮೊನ್ನೆ ಒಬ್ಬ ಮೈಸೂರಿಗೆ ನನ್ನ ಕಾರಲ್ಲಿ ಬರುತ್ತೇನೆಂದು ಹೇಳಿದವನು ಕೊನೇ ಗಳಿಗೆಯಲ್ಲಿ 'ನೀವು ಹಿಂದಿನ ಸೀಟ್‌ನಲ್ಲಿ ಮಲಗಿದರೆ ನಿಮಗೆ ಆರಾಮಾಗಿರುತ್ತೆ, ನಾನು ಬಸ್ಸಿನಲ್ಲಿ ಬರುತ್ತೇನೆ. ನೀವು ಹೋಗಿ' ಅಂದ 'ನಾನು ಮಲಗಲೇಬೇಕು ಅಂತ ಇಲ್ಲ' ಅಂದೆ. ಆದರೆ ಅವನು ಕೇಳಲಿಲ್ಲ, 'ನಿಮಗೆ ಸುಖ ಪ್ರಯಾಣವಾಗುವುದು ಮುಖ್ಯ, ನಿಮ್ಮ ಆರೋಗ್ಯ ಮುಖ್ಯ' ಅಂದ. 'ನಾನು ಕೂತರೂ ನನ್ನ ಆರೋಗ್ಯ ಕೆಡುವುದಿಲ್ಲ' ಅಂದೆ. 'ಹಾಗಲ್ಲ ನನ್ನಿಂದಾಗಿ ನಿಮಗೆ ಕಿರಿಕಿರಿಯಾಗಬಾರದು' ಅಂದ. ಇದು ಸುಮಾರು ಅರ್ಧಗಂಟೆ ಹೀಗೇ ಚರ್ಚೆಯಾದ ಮೇಲೆ, 'ಅಲ್ಲಯ್ಯ ಮೂರ್ಖ, ನೀನು ಮುಂಚೆಯೇ ಹೇಳಿದ್ದರೆ ಬೇರೆಯವರು ಬರಲು ಸಿದ್ಧರಾಗಿದ್ದರು. ಅವರೀಗ ಬಸ್ಸಿನಲ್ಲಿ ಹೋಗಿಬಿಟ್ಟಿದ್ದಾರೆ. ನಿನ್ನ ಭಟ್ಟಂಗಿತನ ಅತಿಯಾಯಿತು' ಅಂದೆ. 'ಅಲ್ಲ ಸಾರ್, ನಾನು ನಿಮ್ಮನ್ನು ತುಂಬ ಇಷ್ಟಪಡುತ್ತೇನೆ. ಆದ್ದರಿಂದ ನೀವು ನೆಮ್ಮದಿಯಿಂದಿರಬೇಕು' ಅಂದ. 'ಅಲ್ಲೋ ಸೂಳೆಮಗನೆ, ನೀನು ಮೈಸೂರಿಗೆ ಬರುವುದೇ ಬೇಡ. ಇಲ್ಲಿಂದ ಹೊರಡು' ಅಂದೆ. ಆಗ ಆತನಿಗೆ ತನ್ನ ಭಟ್ಟಂಗಿತನ ಅರ್ಥವಾಯಿತು.

ಇದರಿಂದಲೇ ಜಿ.ಕೆ. ಚೆಸ್ಟರ್‌ಟನ್, "ಭಟ್ಟಂಗಿಗಳು ಸ್ನೇಹಿತರಂತೆ, ಪರಿಚಿತರಂತೆ ಇದ್ದರೆ ಗೊಂದಲವಾಗುತ್ತೆ. ಸಂಬಳಕ್ಕೆ ನೇಮಕವಾದ ಭಟ್ಟಂಗಿಗಳು ಉಪಯುಕ್ತ. ಏಕೆಂದರೆ ಅದು ಅವರ ವೃತ್ತಿ. ಸಂಬಳಕ್ಕೆ ತಕ್ಕಂತೆ ತಮ್ಮ ಕೆಲಸ ಮಾಡುತ್ತಾರೆ ಎನ್ನುವುದು ನಿಮಗೂ ಗೊತ್ತು" ಅಂದ. ಒಬ್ಬ ನಿಮ್ಮನ್ನು ಮೆಚ್ಚಿದ್ದು ಕೇವಲ ಮೆಚ್ಚುಗೆಯೋ, ಹೊಗಳಿಕೆಯೋ, ಮೋಸವೋ ಎನ್ನುವುದು ಅನಿಶ್ಚಿತವಾಗಿದ್ದರೆ.... ಭಯ ಶುರುವಾಗುತ್ತದೆ.

ಮದುವೆಯ ಗಂಡು ಬಾಸಿಂಗ ಸೂಡಿಕೊಂಡರೂ ತಾನೊಬ್ಬ ಅನಾಮಿಕ, ಸಾಮಾನ್ಯ ಎಂದು ಅರಿತಿರುತ್ತಾನೆ; ಕಿರೀಟ ಇಟ್ಟುಕೊಂಡ ಚಕ್ರವರ್ತಿ ತನ್ನ ಮದದಲ್ಲಿ ಭ್ರಮೆ ಅನುಭವಿಸಿ ನಾಶವಾಗುವುದು ಸಾಧ್ಯವಿದೆ. ಆದ್ದರಿಂದಲೇ ಅವನು ಭಟ್ಟಂಗಿಗಳನ್ನು ಹಣ ಕೊಟ್ಟು ನೇಮಿಸಿಕೊಂಡು ಸ್ವಲ್ಪ ಸ್ವಸ್ಥತೆ ಪಡೆದಿರುತ್ತಾನೆ.

● ಫೆಬ್ರುವರಿ 25, 1988

ದೇವರ ಹೆಡ್‌ಕ್ವಾರ್ಟರ್ಸ್ ರಾಸಲೀಲೆ

ರಘುಪತಿ ಭಟ್ಟರು ಗೊತ್ತಲ್ಲಾ ಅದೇ ಶಾಸಕರಾಗಿದ್ದಾರಲ್ಲ ಅವರು ಕಣ್ರೀ. ಯಾರೋ ತಿಳೀವಲ್ಲು ಅಂದ್ರಾ... ಅದೇ ಕಣ್ರೀ ಪದ್ಮಪ್ರಿಯಾ ಅಂತ.. ಓಹೋ ಪದ್ಮಪ್ರಿಯಾ ರಘುಪತಿ ಭಟ್ಟರಾ... ತಿಳೀತು ಹೇಳಿ. ಅವರ ಊರು ಉಡುಪಿ ತಾನೆ. ಶ್ರೀಕೃಷ್ಣ ಪರಮಾತ್ಮನ ಹೆಡ್‌ಕ್ವಾರ್ಟರ್ರೂ ಅದೇ ಅಂತೆ. ಅವನ ಮೇಲೆ ಭಟ್ಟರಿಗೆ ಭಾರೀ ನಿಷ್ಠೆಯಂತೆ. ಅದು ಯಾಪಾಟಿ ಇತ್ತು ಅಂದ್ರೆ ಕನಕದಾಸ ಅಂತ ಇದ್ನಂತಲ್ಲಾ, ಅವನದಕ್ಕಿಂತಲೂ ಪಸಿ ಮೇಲೇ ಅಂತೆ. ಆ ದಾಸ ಗುಡಿ ಹೊರಗೇ ನಿಂತುಕೊಂಡ ಅಲ್ಲವಾ. ಇವರು ದೇವತಾಪೂಜಾ ಯೂನಿಫಾರಂನಲ್ಲಿ ಗರ್ಭಗುಡೀಗೆ ಹೋಗ್ತಾರಂತೆ. ಅಲ್ಲಿ ಅವನ, ಅವನ ಭಕ್ತರ ಅನಂತಲೀಲೆಗಳನ್ನು ಕಣ್ತುಂಬಿಸಿಕೊಳ್ತಾರಂತೆ!


ಕೃಷ್ಣ ಅಂದರೆ ರಾಸಲೀಲೆಗೆ ಫೇಮಸ್ ಅಲ್ಲವಾ. ಭಕ್ತ ಭಟ್ಟರೂ ಅದರ ಒಂದಂಶವನ್ನು ಮೈಗೂಡಿಸಿಕೊಂಡಿದ್ದರಂತೆ. ಅವರ ಹೆಂಡತಿ ಪದ್ಮಪ್ರಿಯಾಳ ಕೊಲೆಯೋ, ಆತ್ಮಹತ್ಯೆಯೋ ಏನೋ ಒಂದು ಆಯಿತಲ್ಲಾ, ಪಾಪ ಭಟ್ಟರದ್ದು ಆಗ ಹೆಂಡತಿ ಸಾಯಬಾರದ ವಯಸ್ಸಂತೆ. ಜೊತೆಗೆ ರಾಸಲೀಲೆ ರುಚಿ ಬೇರೆ ಹತ್ತಿದ್ದೋರಲ್ವಾ. ಅವರನ್ನು ನೋಡಿದೋರೆಲ್ಲ ಉಪ್ಪು, ಹುಳಿ, ಖಾರ ತಿಂದ ದೇಹ ಶಾನೆ ಕಾಟ ಕೊಡ್ತಿರಬೇಕು ಪಾಪ ಈವಯ್ಯಂಗೆ ಅಂದುಕೋತಿದ್ದರಂತೆ. ಆದರೂ ಹೆಂಗೋ ಜೀವನ ನಿಭಾಯಿಸ್ತಾ ಇದ್ದರಂತೆ.

ರಾಸಲೀಲೆ ಆಡೋರಿಗೆ ಕೃಷ್ಣ ಕ್ಯಾಪ್ಟನ್ ಇದ್ದಂಗೆ. ಅವನ ಹೆಡ್‌ಕ್ವಾರ್ಟರ್ಸ್‌ನಲ್ಲೇ ಅದ ಮಾಡಬೇಕು ಅಂದುಕೊಂಡರೇನೋ ಭಟ್ಟರು. ಉಡುಪಿ ಸಮೀಪಾನೆ ರೇವುಪಾರ್ಟಿ ಮಾಡಿದರಂತೆ. ಅಲ್ಲಿಗೆ ಏನೇನು ಬೇಕೋ ಅದನ್ನೆಲ್ಲ ಬೇಜಾನಾಗಿ ಸಪ್ಲೈ ಮಾಡಿದ್ರಂತೆ. ಪಾರ್ಟಿಗೆ ಅಂತ ಬಂದಿದ್ದೋರೆಲ್ಲ ಫಾರಿನ್ನೋರಂತೆ. ಅವರೆಲ್ಲ ಕೃಷ್ಣ ಪರಮಾತ್ಮನ ಭಕ್ತರೇ ಇರಬೇಕು. ಅತುಲಾನಂದದಲ್ಲಿ ಬಹಿರಂಗ ಕಾಮಕೇಳಿಗಿಳಿದರಂತೆ. ಭಟ್ಟರು ಪಾರ್ಟಿಗೆ ಬಂದಿರೋರ ತುರ್ತು ಅಗತ್ಯಗಳನ್ನು ತಿಳಿದಿದ್ದರು ಅಂತ ಕಾಣುತ್ತೆ ಆ ಕೃಷ್ಣ ಪರಮಾತ್ಮನೂ ಹಿಂಗೇ ಮಾಡುತ್ತಿದ್ದನಲ್ಲವಾ ಅಂತ ಸಮಾಧಾನಪಟ್ಟುಕೊಂಡಿರಬೇಕು. ಆಹಾ ನಮಗೂ ಅಂತಹದ್ದೊಂದು ಚಾನ್ಸ್ ಸಿಕ್ಕಿದರೆ ಸಾಕು ಅಂತ ಸಾಯ್ತಿದ್ದವಲ್ಲ, ಅಷ್ಟೇ ಅವಕಾಶಾನೆ ಆಗಲಿಲ್ಲವಂತೆ. ಈ ಹೊಟ್ಟೆಕಿಚ್ಚಿಗೆ ಅವೇನು ಮಾಡಿದವಂತೆ, ರೇವು ಪಾರ್ಟೀಲಿ ಹಿಂಗೆಲ್ಲ ನಡೀತು, ಹಿಂದೂ ಸಂಸ್ಕೃತಿ ಹಾಳಾಯ್ತು ಅಂತ ಏನೋ ಅದ ಅವರೇ ಗುತ್ತಿಗೆ ಹಿಡಿದಿರೋರಂಗೆ ಹಾರಾಡಿದ್ರಂತೆ. ಏನಾದರಾಗಲಿ, ನಮ್ಮ ಜನ ಮೆಚ್ಚಕೋಬೇಕು ಕಣ್ರಿ. ಇದೆಲ್ಲ ಬಟಾಬಯಲಾಯ್ತಲ್ಲ, ಆವಾಗ ಏನಂದ್ರಂತೆ ಗೊತ್ತ? 'ಛೇ ವಿಧುರನಾದ ಈವಯ್ಯ ಕಣ್ಣೆದುರ್ಗೇ ಇಂತಾವೆಲ್ಲ ನಡೀತಿದ್ರೂ ಯಾವುದ್ಕೂ ಕೈಹಾಕಿಲ್ಲವಲ್ಲಾ. ಇದು ಇಂದ್ರಿಯನಿಗ್ರಹ ಅಂದ್ರೆ. ಇಂತಾವ್ನೆಲ್ಲ ಇವನಿಂದ ಕಲೀಬೇಕು' ಅಂದ್ರಂತೆ!

ಹಂಗೂಹಿಂಗೂ ಒಂದೆರಡು ವರ್ಷ ಕಳೀತು. ಈಗೇನಾಗದೆ 'ಇಂದ್ರಿಯ ನಿಗ್ರಹ ಪ್ರಣೀತ' ಭಟ್ಟರೇ 'ಕುಚ್‌ಕುಚ್' ಮಾಡುತ್ತಿದ್ದಾಗ ಸಿಗಾಕಿಕೊಂಡವ್ರೆ! ಈ ರಾಸಲೀಲೆ ಕ್ಯಾಸೆಟ್ಟೆ ಬಂದದಂತೆ. ಭಟ್ಟರೇನೋ 'ಅಲ್ಲಿರೋದು ನಾನಲ್ಲ' ಅಂದವ್ರೆ. ಅದರಲ್ಲಿರುವ ಯುವತಿಯೂ ಅವಳೇ ಅಲ್ಲವೇನೋ!

ಅಲ್ಲ ನಾನೆಂಬೋನು ನಾನಲ್ಲ, ಅವಳೆಂಬೋದು ಅವಳಲ್ಲ ಅಂತ ಅವರನ್ನೋದು. ಇಲ್ಲ ಇವರೇಯ ಅಂತ ಬ್ಯಾರೆಯೋರು ಅನ್ನೋದು ಈ ಎಲ್ಲ ಫಜೀತಿ ಯಾಕೆ ಅಂತೀನಿ. ಆ ಯುವತಿಯನ್ನೇ 'ಯಾರಮ್ಮ ನಿನ್ನ ಜೊತೆ ಡಿಂಗ್ ಡಾಂಗ್ ಮಾಡ್ತಿರೋದು' ಅಂತ ಕೇಳಿದ್ರೆ ಆಗಲ್ಲವಾ...

ಅದೆಲ್ಲ ಇರಲಿ. ಭಾಜಪ ರಾಜ್ಯಾಧ್ಯಕ್ಷರು 'ಭಟ್ಟರ ರಾಸಲೀಲೆ ಕ್ಯಾಸೆಟ್ಟಿನಿಂದ ಪಕ್ಷಕ್ಕೆ ಯಾವ ಹಾನಿಯೂ ಇಲ್ಲ' ಅನ್ನೋ ಫರ್ಮಾನು ಹೊರಡಿಸಿದ್ದಾರೆ. ಭೇಷಾಗಿ



ಹೇಳಿದ್ರಿ ಪ್ರಹ್ಲಾದ ಜೋಷಿಯವರೆ. ಹೊಸದಾಗಿದ್ದರೆ ಜನರಿಗೆ ಶಾಕ್ ಆಗ್ತಿತ್ತೇನೋ. ಇದು ಭಾಜಪ ಹುಟ್ಟು ಚಾಳಿ! ದಿನಾ ಸಾಯೋರ್‍ಗೆ ಯಾರು ಗೋಳಾಡ್ತಾರೆ ಅಲ್ವಾ ಜೋಷಿಯವರೆ...

ಬೈಗುಳ ಪರಂಪರೆ


ಯಾರನ್ನೂ ಬಯ್ಯದ ಮನುಷ್ಯ ಇಲ್ಲ,

ಯಾರಿಂದಲೂ ಬಯ್ಯಿಸಿಕೊಳ್ಳದ ಮನುಷ್ಯನೂ ಇಲ್ಲ,

ಬೈಗುಳ ಪರಿಣಾಮಕಾರಿಯಾಗಿರಬೇಕಾದರೆ ಅದು ಹೇಗಿರಬೇಕು?

ಮರ್ಮಾಘಾತ ಉಂಟುಮಾಡುವಂತಿರಬೇಕು!.


ಅಪ್ಪ ಮಕ್ಕಳ ಕತೆ ಅಂದ್ರೆ ಅದೇ ಅರ್ಜುನ-ಬಬ್ರುವಾಹನ ಕತೆ ನೋಡಿ. ಅರ್ಜುನ ಪರಾಕ್ರಮಿ ನಿಜ. ಆದರೆ ಅವನಿಗೊಂದು ದೌರ್ಬಲ್ಯ- 'ಶಿಖಂಡಿ' ದೌರ್ಬಲ್ಯ. ಆ ಹೆಸರು ಹೇಳಿದರೇ ಉರಿದು ಬೀಳೋನು. ಅದಕ್ಕೆ ಕಾರಣ ಇದೆ. ಪಾಂಡವರು ಅಜ್ಞಾತವಾಸ ಮಾಡಬೇಕಾಗಿತ್ತು, ಒಬ್ಬೊಬ್ಬರು ಒಂದೊಂದು ಗೆಟಪ್ಪಿನಲ್ಲಿ ವಿರಾಟ ರಾಯನ ಆಸ್ಥಾನ ಸೇರಿದರು. ಪಾಪ ಅರ್ಜುನ ನಪುಂಸಕ ವೇಷ ಧರಿಸಬೇಕಾಯಿತು. ಜಗದೇಕವೀರ, ಪುರುಷಸಿಂಹ ಅಂತೆಲ್ಲ ಶೌರ್ಯ ಮೆರೆದಾತ ಬೃಹನ್ನಳೆ ನಾಮಧೇಯದಿಂದ ಉತ್ತರೆಗೆ ಡ್ಯಾನ್ಸ್ ಮಾಸ್ತರಾಗಬೇಕಾಯಿತು! ಆ ನೋವು ಅವನನ್ನು ಕಾಡುತ್ತಲೇ ಇತ್ತು, ಆ ನಂತರ ಕುರುಕ್ಷೇತ್ರ ಯುದ್ಧ ನಡೆಯಿತು. ಭೀಷ್ಮ ಎದುರು ಪಾಳಯದಲ್ಲಿದ್ದ. ಅತ್ಯಂತ ಪರಾಕ್ರಮಿ. ಅವನನ್ನು ಸೋಲಿಸುವುದು ಸುಲಭದ ಮಾತಾಗಿರಲಿಲ್ಲ.



ಆದರೆ ಅವನು ಒಂದು ಪ್ರತಿಜ್ಞೆ ಮಾಡಿದ್ದ. ಶಿಖಂಡಿ ಎದುರು ಬಂದರೆ ಶಸ್ತ್ರತ್ಯಾಗ ಮಾಡಿ ಯುದ್ಧಭೂಮಿಯಿಂದ ನಿಷ್ಕ್ರಮಿಸುತ್ತೇನೆ ಎಂಬುದೇ ಆ ಪ್ರತಿಜ್ಞೆ. ಅರ್ಜುನ ಕುರುಕ್ಷೇತ್ರ ಯುದ್ಧದಲ್ಲಿ ಭೀಷ್ಮನನ್ನು ಮಣಿಸಲು ಶಿಖಂಡಿ ಮರೆ ಹೋಗಬೇಕಾಯಿತು. ತನ್ನ ಪುರುಷತ್ವಕ್ಕೇ ಸವಾಲಾದ ಈ 'ಶಿಖಂಡಿ' ಅವನನ್ನು ದಹಿಸುತ್ತಿತ್ತು, ಬಬ್ರುವಾಹನನಿಗೆ ಅರ್ಜುನನ ಈ ದೌರ್ಬಲ್ಯದ ಅರಿವು ಚೆನ್ನಾಗಿತ್ತು, ಅವನನ್ನು ಕೆರಳಿಸಲು 'ಶಿಖಂಡಿ', 'ಶಿಖಂಡಿ' ಎಂದು ಜರಿದ. ಕೋಪೋದ್ರಿಕ್ತನಾದ ಅರ್ಜುನ ತನ್ನ ಸ್ತಿಮಿತ ಕಳೆದುಕೊಂಡ. ಯುದ್ಧಕ್ಕೆ ನಿಂತ. ಪ್ರಾಣ ಕಳೆದುಕೊಂಡ.

ಭಾಜಪದವರು ಅಂದರೆ ಇಂತಹವನ್ನೆಲ್ಲ ಅರೆದು ಕುಡಿದಿರೋರು. ಬೈಗುಳ ಪರಂಪರೆಯನ್ನು ಮನಸ್ಸಿನಾಳಕ್ಕೆ ಇಳಿಸಿಕೊಂಡಿರುವವರು. ಕಾಲದಿಂದಲೂ ಯಡ್ಯೂರಪ್ಪನವರಿಗೆ ಒಂದು ಭ್ರಮೆ. ತನ್ನ ಹುಂಜ ಕೂಗದೆ ಇದ್ದರೆ ಬೆಳಕೇ ಹರಿಯುವುದಿಲ್ಲ ಅಂತಾವ ಅದ್ಯಾವುದೋ ಮುದುಕಿ ಆಡುತ್ತಿದ್ದಳಂತಲ್ಲಾ, ಅವಳ ಜಾಯಮಾನದೋರು. ತಾನು ಇಲ್ಲ ಅಂದರೆ ಭಾಜಪಾನೂ ಇಲ್ಲ ಎಂದೇ ಅವರ ಭಾವನೆ. (ಅವರು ಕರ್ನಾಟಕ ಜನತಾ ಪಕ್ಷ ಕಟ್ಟಿದ್ದೇ ಗೆದ್ದು ಆಡಳಿತ ನಡೆಸಬೇಕು ಅಂತ ಅಲ್ಲ, ಭಾಜಪ ಸೋಲಿಸಬೇಕು ಅಂತ ಅನ್ನೋ ಅನುಮಾನ ಇದ್ದೇ ಇದೆ) ಇದೇ ಹುಂಬತನದಲ್ಲಿ 'ಭಾಜಪ ಐವತ್ತು ಸೀಟು ಗೆದ್ದರೆ ರಾಜಕೀಯದಿಂದ

ಅಣಕ




• ಎಚ್.ಎಲ್.ಕೇಶವಮೂರ್ತಿ

ನಿವೃತ್ತನಾಗುತ್ತೇನೆ' ಎಂಬ ಪ್ರತಿಜ್ಞೆ ಮಾಡಿದರು. ಅವರೇನಾದರೂ ಸರ್ಕಾರಿ ಕೆಲಸದಲ್ಲಿದ್ದಿದ್ದರೆ ಈಗಾಗಲೇ ನಿವೃತ್ತಿಯಾಗಿ ಎಷ್ಟೋ ವರ್ಷಗಳಾಗುತ್ತಿತ್ತು, ಅವರ ಹೆಸರೂ ಮರೆತುಹೋಗುತ್ತಿತ್ತು, ರಾಜಕಾರಣಿಗಳಿಗೆ ನಿವೃತ್ತಿ ವಯಸ್ಸು ಅಂತಿಲ್ಲ. ಮನಮೋಹನ್‌ಸಿಂಗ್ ಅವರೇ ಸೋನಿಯಾ ಬಯಸಿದರೆ ಮತ್ತೊಮ್ಮೆ ಪ್ರಧಾನಿ ಆಗ್ತೀನಿ ಅಂತ ಕುಂತವ್ರೆ. ಅಂತಹದ್ದರಲ್ಲಿ ಇವರು ಆದಾಗ್ತಾರೆ ಅನ್ನೋ ಅನುಮಾನ ಯಾರಿಗೂ ಇಲ್ಲ, ಅದಲ್ಲ ವಿಷಯ. ಯಾವಾಗ ಅವರು ವೀರಾವೇಷದಿಂದ ಹಿಂಗೆಲ್ಲ ಹಾರಾಡಿದರೋ ಕೆ.ಎಸ್. ಈಶ್ವರಪ್ಪನವರಿಗೆ ಕ್ಯಾಣ ಹತ್ತಿತು. 'ಜೈಲಿಗೆ ಹೋಗಿ ಬಂದಿರೋರು, ಹೋಗೋರು ಬುದ್ಧಿಭ್ರಮಣೆಯಾಗಿ ಏನೇನೋ ಹೇಳ್ತಿರ್ತಾರೆ' ಅಂದುಬಿಟ್ಟರು. ಅವರು ಹಂಗಂದಿದ್ದೇ ತಡ, ಯಡ್ಯೂರಪ್ಪನವರಿಗೆ ಉಸಿರೇ ನಿಂತೋದಂಗಾಯ್ತು, ಜನತಾ ಜನಾರ್ದನನ ಮೇಲೆ ಭಾರ ಹಾಕಿ ಬಾಲ ಮುದುರಿಕೊಂಡರು. ಅವರ ಮೇಲೆ ಅಷ್ಟೊಂದು ನಂಬಿಕೆ ಅವರಿಗೆ. ತಾನು ಜೈಲಿಗೆ ಹೋಗಿಬಂದಿದ್ದರೂ ತನ್ನ ಮಾತ ನಡುಸ್ತಾರೆ ಅಂತ!

ಇದೊಂದು ಆಯಿತಾ. ನಾಟಕಗಳಲ್ಲಿ ವಿದೂಷಕನ ಪಾತ್ರ ಬರುತ್ತಲ್ಲಾ, ಯಾಕೆ ಹೇಳಿ. ಜನರು ನಕ್ಕು ನಲೀಲಿ ಅಂತ. ಹಂಗೇ ಭಾಜಪ ಮಂತ್ರಿಮಂಡಳದಲ್ಲಿ ರೇಣುಕಾಚಾರ್ಯ ಇದ್ದದ್ದು. ಅವರ ಮಾತು ವರ್ತನೆಗಳೆಲ್ಲ ಭಲೇ ಮಜ ಕೊಡುತ್ತೆ, ಇದು ಹಂಗಿರಲಿ. ಇವರೊಂದು ತರಹ ಹುಚ್ಚುನಾಯಿ ಇದ್ದಂಗೆ. ಎಲ್ರೂನೂ ಕಚ್ಚುತ್ತೆ. ಸದಾನಂದಗೌಡರಿಗೆ ಹಣದ ದರ್ದು ಬಾಳ ಇತ್ತಂತೆ. ಅವರು ರೇಣುಕಾ ಹತ್ತಿರ ಬಂದು ಹಿಂಗಾಗೋಗದೆ ನನ್ನ ಕತೆ ಅಂತ ಕಣ್ಣೀರು ಹಾಕಿದ್ರಂತೆ. ಇವರಿಗೆ ಜೀವ ಹಿಂಡಿದಂತೆ ಆಯ್ತಂತೆ. ದುಡ್ಡ ಕೊಟ್ರಂತೆ. ಗೌಡರು ಮುಖ್ಯಮಂತ್ರಿಯಾಗಿದ್ದಾಗಲೂ ಮೂರು ನಾಲ್ಕು ಸಲ ಹಿಂಗೇ ಕೊಟ್ಟಿದ್ರಂತೆ. ಅದ್ಕೆ ಅವರತ್ರ ಪುರಾವೇನೂ ಅದಂತ. ಅದು ಸರಿ. ದುಡ್ಡು ಕೊಟ್ಟೆ ಅಂತೀಯಲ್ಲ, ಆ ಹಣ ಎಲ್ಲಿಂದ ಬಂತು? ಹೇಗೆ ಬಂತು? ಅಂತ ಯಾರಾದರೂ ಜಾಡಿಸಿಯಾರು ಅನ್ನೋ ಯೋಚನೇನೆ ಮಾಡದೆ ಪೆದ್ದುಪೆದ್ದಾಗಿ ಆರೋಪ ಮಾಡವ್ರೆ. ಇರಲಿ. ಇದ್ಕೆ ಗೌಡರು ಏನು ಮಾಡಿದ್ರು 'ಹಣ ಕೊಟ್ಟಿದ್ದಕ್ಕೆ ಪುರಾವೆ ಎಲ್ಲಿದೆ? ಯಾವ ನರ್ಸ್ ಮನೇಲಿ ಇದೆ?' ಅಂದವ್ರೆ. 'ನರ್ಸ್' ಪದ ಕೇಳಿದ ತಕ್ಷಣ ರೇಣುಕಾಗೆ ಹುಸಹುಸಿಗೆ ಆಗಿರಬಹುದು. ಅದ ಮರೆತಂತೆ ಮಾಡಿ 'ನನ್ನ ತಾಯಿ ಮೇಲೆ ಆಣೆ ಮಾಡಿ ಹೇಳ್ತೀನಿ' ಅಂತ ಏನೇನೋ ಬಡಬಡಿಸ್ತಾ ಅವ್ರೆ! ○

ರಘುಪತಿ ಭಟ್ಟ ಮತ್ತು ಮದುವೆ ಆಟ

ಉಡುಪಿ ಶಾಸಕ ರಘುಪತಿ ಭಟ್ಟರ ಕಾಮಸೂತ್ರದ ಸಿಡಿ ಅಸಲಿಯೋ ನಕಲಿಯೋ, ಆದರೆ ಅದು ರೆಕಾರ್ಡ್ ಆಗಿದ್ದು ಫೆಬ್ರವರಿ 11 ರಂದು ಎಂದು ಸಾಬೀತಾಗಿದೆ. ಆದರೆ ಅದರ ಮುನ್ನಾ ದಿನ ಅಂದರೆ ಫೆಬ್ರವರಿ 9, 10 ರಂದು ಇದೇ ಭಟ್ಟರ ನೇತೃತ್ವದಲ್ಲಿ ಉಡುಪಿ ಮತ್ತು ಮಲ್ಪೆಯಲ್ಲಿ 'ದೇವರ ಮದುವೆ' ಅರ್ಥಾತ್ ಶ್ರೀನಿವಾಸ ಕಲ್ಯಾಣೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಗಿತ್ತು, ಇದರಲ್ಲಿ ಸಾವಿರಾರು ಮಹಿಳೆಯರು ಭಾಗವಹಿಸಿದ್ದರು. ಆ ಹೆಂಗಸರೆಲ್ಲಾ ಕಲ್ಯಾಣೋತ್ಸವ ಎಂದರೆ ಅದೊಂದು ತರಹದ ಪೂಜೆ ಎಂದು ತಿಳಿದಿದ್ದರೇ ಹೊರತು ಅದು ದೇವರ-ಮದುವೆಯ ಉತ್ಸವ ಎಂದು ಅವರಿಗೆ ಗೊತ್ತೇ ಇರಲಿಲ್ಲ.



ಹಿಂದೂ ವಿಧಿಗಳ ಮೂಲ ಅರ್ಥ ಗೊತ್ತಿಲ್ಲದೇ ಕುರುಡಾಗಿ ಜನ ಅನುಸರಿಸುತ್ತಾರೆ ಎಂಬುದಕ್ಕೆ ಇದು ಸಾಕ್ಷಿ ಅಷ್ಟೇ. ಆದರೆ ರಘುಪತಿ ಭಟ್ಟರಿಗೆ ಮಾತ್ರ ಕಲ್ಯಾಣೋತ್ಸವವೆಂದರೆ ದೇವರ ಮದುವೆ ಅದೂ ಶ್ರೀದೇವಿ-ಭೂದೇವಿ ಎಂಬ ಎರಡೆರಡು ದೇವಿಯರೊಂದಿಗೆ ಎಂದು ಸರಿಯಾಗಿ ಗೊತ್ತಿತ್ತು, ಆದರೂ ಈ ಕಲ್ಯಾಣೋತ್ಸವದ ಮರುದಿನವೇ ಭಟ್ಟರು ಆ ಪೂಜೆಯ ಪರಿಣಾಮ ಅಳೆಯುವ ಪ್ರಯೋಗವನ್ನು ಆಚರಣೆಗೆ ತಂದು ಅವರು ಸಿಕ್ಕಿ ಬೀಳಲು ಕಾರಣವೆಂಬುದು ಕಂದಾಚಾರಿಗಳ ಅಂಬೋಣ.

ನಮ್ಮ ಕರಾವಳಿಯಲ್ಲಿ (ತುಳುನಾಡಿನಲ್ಲಿ) ಈಗಾಗಲೇ ಇರುವ ನೂರಾರು ಧಾರ್ಮಿಕ ನಾಟಕಗಳು ಸಾಲದೆಂದು, ಹಣವಂತರು ತಲೆ-ಬುಡ ಅರಿಯದೇ ಹೊಸದೊಂದು ಧಾರ್ಮಿಕ - ಬೀದಿ - ನಾಟಕ ಶುರುಮಾಡಿದ್ದಾರೆ. ಅದುವೇ 'ದೇವರ ಮದುವೆ' ಅರ್ಥಾತ್ ಶ್ರೀನಿವಾಸ ಕಲ್ಯಾಣ. ಈ ದೇವರ ಮದುವೆಗೆ 15 ಲಕ್ಷದಷ್ಟು ಹಣ ಖರ್ಚಾಗುತ್ತದೆ. ಆದರೆ ಅದರಿಂದ ಸಮಾಜಕ್ಕೇನಾದರೂ ಲಾಭವಿದೆಯ? ನಿರಾಕಾರ- ನಿರ್ವಿಕಾರ-ನಿರ್ಗುಣ ದೇವರಿಗೆ ಕಾಮ-ಮೋಹ- ವಾಂಛೆ ಇದೆ, ಮದುವೆಯ ಅಗತ್ಯವಿದೆ ಎಂದು ಭಾವಿಸುವುದು ನಾವು ಸ್ವತಃ ದೇವರಿಗೇ ಅವಮಾನ ಮಾಡಿದಂತೆ.




ದೇವರ ಮದುವೆಯ ರಸಿಕ ಪುರಾಣಕಥೆಗಳನ್ನು ನಿಜವೆಂದು ನಂಬುವುದು ಮತ್ತು ಅದಕ್ಕಾಗಿ ಲಕ್ಷಾಂತರ ಹಣ ಪೋಲು ಮಾಡುವುದು ಶುದ್ಧ ಮೌಢ್ಯ. ಇದೇ 15-30 ಲಕ್ಷ ರೂಪಾಯಿಗಳಲ್ಲಿ ಬಡ ಹುಡುಗಿಯರ ಮದುವೆ ಮಾಡಿದ್ದರೆ ದೇವರ ಮದುವೆಗಿಂತ ಸಾವಿರ ಪಾಲು ಹೆಚ್ಚು ಪುಣ್ಯ ಸಿಗುತ್ತಿದ್ದುದು ಖಂಡಿತ ಎನ್ನುವುದು ಪ್ರಜ್ಞಾವಂತರ ಅಭಿಪ್ರಾಯ.

ತಿರುಪತಿ ದೇವಸ್ಥಾನದವರು ಈಗ 'ಮೊಬೈಲ್' ಶ್ರೀನಿವಾಸ ಕಲ್ಯಾಣೋತ್ಸವ ಎಂಬ ಹೊಸ ಸಂಚಾರಿ ನಾಟಕ ಮಂಡಳಿಯನ್ನು ಶುರು ಮಾಡಿದ್ದಾರೆ. ಅದು ಅಧಿಕೃತವೋ ಅಥವಾ ಅಲ್ಲಿಯ ಕೆಲವು ಪುರೋಹಿತರ ಖಾಸಗಿ ವೆಂಚರ್ರೋ ಸರಿಯಾಗಿ ಯಾರಿಗೂ ಗೊತ್ತಿಲ್ಲ, ಹಿಂದೆಲ್ಲ ತೊಗಲುಬೊಂಬೆಯಾಟದವರು ತಮ್ಮ ಟೆಂಟು ಮತ್ತು ಪ್ರದರ್ಶನದ ಸಾಮಗ್ರಿಗಳನ್ನು ಎರಡು-ಮೂರು ಎತ್ತಿನ ಬಂಡಿಯಲ್ಲಿ ಹೇರಿಕೊಂಡು ತೊಗಲು ಬೊಂಬೆಯಾಟದ ಪ್ರದರ್ಶನಕ್ಕೆ, ಊರಿಂದೂರಿಗೆ ಹೋಗುತ್ತಿದ್ದದ್ದನ್ನು ನಾವು ಚಿಕ್ಕಂದಿನಲ್ಲಿ ಬೆಳಗಾವಿಯಲ್ಲಿದ್ದಾಗ ನೋಡುತ್ತಿದ್ದೆವು. ಈಗ ಎತ್ತಿನ ಗಾಡಿಯ ಜಾಗವನ್ನು ಟೆಂಪೋ-ಬಸ್ಸುಗಳು ಪಡೆದುಕೊಂಡಿವೆ ಹಾಗೂ ತೊಗಲು ಬೊಂಬೆಯ ಜಾಗವನ್ನು ದೇವರ ಬೊಂಬೆಗಳು/ಲೋಹದ ಮೂರ್ತಿಗಳು ಆಕ್ರಮಿಸಿವೆ. ಉದ್ದೇಶ ಮಾತ್ರ ಒಂದೇ: ಅದು ಜನರಿಗೆ ಬೊಂಬೆಯಾಟ ಪ್ರದರ್ಶಿಸಿ ಹಣ ಗಳಿಸುವುದು. ತೊಗಲುಬೊಂಬೆಯಾಟದಲ್ಲಿ ವಿಶಿಷ್ಟ ಕಲೆಯಿತ್ತು, ಮನರಂಜನೆ ಯಿತ್ತು,



ಜಾನಪದ ಸಂಗೀತವಿತ್ತು, ವಿಶೇಷ ಪ್ರತಿಭೆಯಿತ್ತು. ಆದರೆ ದೇವರ ಮದುವೆಯಾಟದಲ್ಲಿ ಪ್ರತಿಭೆಯೇನೂ ಇಲ್ಲ, ಕೇವಲ ಮೌಢ್ಯ ಮಾತ್ರವಿದೆ.

ಸಣ್ಣ ಮಕ್ಕಳು 'ಬೊಂಬೆ ಮದುವೆ' ಎಂಬ ಆಟ ಆಡುವುದನ್ನು ನಾವೆಲ್ಲಾ ನೋಡಿದ್ದೇವೆ. ಸಣ್ಣ ಮಕ್ಕಳ ಬೊಂಬೆಯಾಟಕ್ಕೂ ಹಿರಿಯರ 'ದೇವರ ಮದುವೆ ಆಟ'ಕ್ಕೂ ವ್ಯತ್ಯಾಸವೇನಿದೆ? ವ್ಯತ್ಯಾಸವಿಷ್ಟೇ: ಮಕ್ಕಳ ಬೊಂಬೆ ಮದುವೆಯಾಟದಲ್ಲಿ ಮುಗ್ಧತೆಯಿದೆ, ಮನೋರಂಜನೆಯಿದೆ. ಆದರೆ ದೊಡ್ಡವರಾಡುವ ದೇವರ ಮದುವೆಯಾಟದಲ್ಲಿ ಕೇವಲ ಸ್ವಾರ್ಥವಿದೆ, ಲಂಚ ಕೊಟ್ಟು ದೇವರನ್ನು ಸಂಪ್ರೀತಿಗೊಳಿಸಿ ತಮ್ಮ ಮನೋಭಿಲಾಷೆಗಳನ್ನು ಪೂರೈಸಿ



ರಾಮುವಿನ ಬತ್ತಳಿಕೆ ಅಕ್ಷಯವೇ?

ರಾಮು ನಿರ್ಮಿಸಿರುವ, ಅವರ ಪತ್ನಿ ಮಾಲಾಶ್ರೀ ನಟಿಸಿರುವ 'ವೀರ' ಚಿತ್ರ 175 ಕೇಂದ್ರಗಳಲ್ಲಿ ಬಿಡುಗಡೆಯಾಗಿದೆ. ಎಂದಿನಂತೆ ಈ ಚಿತ್ರದಲ್ಲೂ ಮಾಲಾಶ್ರೀ ಕನ್ನಡದ ಯಾವ ನಾಯಕ ನಟನಿಗಿಂತಲೂ ತಾನು ಕಡಿಮೆ ಇಲ್ಲ ಎಂಬಂತೆ 'ಫೈಟ್' ಮಾಡಿದ್ದಾರೆ.

ಈ ಚಿತ್ರ ಬಾಕ್ಸ್ ಆಫೀಸ್‌ನಲ್ಲಿ ಗೆಲ್ಲುತ್ತದೋ ಅಥವಾ ನೆಲ ಕಚ್ಚುತ್ತದೋ ಗೊತ್ತಿಲ್ಲ. ಆದರೆ ಇದರ ಫಲಿತಾಂಶ ಹೊರಬೀಳುವ ಮುನ್ನವೇ ರಾಮು ಮೂರು ಹೊಸ ಚಿತ್ರಗಳನ್ನು ಅನೌನ್ಸ್ ಮಾಡುತ್ತಿದ್ದಾರೆ.

ದುನಿಯಾ ವಿಜಯ್ ನಟಿಸಲಿರುವ 'ಶಿವಾಜಿನಗರ', ಶಿವರಾಜ್‌ಕುಮಾರ್ ನಟಿಸಲಿರುವ 'ಮುಂಬೈ' ಮತ್ತು ಯಶ್ ಹಾಗೂ ಶಿವಮಣಿ ಜೋಡಿ ಇರುವ ಹೆಸರಿಡದ ಹೊಸ ಚಿತ್ರ... ಹೀಗೆ ಮೂರು ಹೊಸ ಚಿತ್ರಗಳನ್ನು ರಾಮು ಒಮ್ಮೆಲೆ ಶುರು ಮಾಡಲಿದ್ದಾರಂತೆ.

ಈ ಹಿಂದೆ ಪತ್ನಿ ಮಾಲಾಶ್ರೀಯವರ ಚಿತ್ರಗಳನ್ನು ಮಾಡುವುದರಲ್ಲಿಯೇ ರಾಮು ತೃಪ್ತಿ ಮತ್ತು ಆನಂದವನ್ನು ಪಡೆಯುತ್ತಿದ್ದರು. ಆದರೆ ಅವರು ನಿರ್ಮಿಸಿ, ಮಾಲಾಶ್ರೀ ನಟಿಸಿದ್ದ 'ಕಿರಣ್ ಬೇಡಿ', 'ದುರ್ಗಿ', 'ಚಾಮುಂಡಿ', 'ಶಕ್ತಿ' ಮೊದಲಾದ ಚಿತ್ರಗಳು ಅವರಿಗೆ ಹೆಚ್ಚು ಲಾಭವನ್ನೇನು ತಂದುಕೊಡಲಿಲ್ಲ.

ಅಷ್ಟೇ ಅಲ್ಲ, ರಾಮು ನಿರ್ಮಿಸಿ, ಕನ್ನಡದ ನಟರು ನಾಯಕರಾಗಿದ್ದ ಚಿತ್ರಗಳೂ ಅವರಿಗೆ ಯಶಸ್ಸನ್ನು ತಂದು ಕೊಡಲಿಲ್ಲ. ಉಪೇಂದ್ರರ 'ರಜನಿ', ಪ್ರಜ್ವಲ್ ದೇವರಾಜ್‌ನ 'ಸಾಗರ್', ಚಿರಂಜೀವಿ ಸರ್ಜಾನ 'ಗಂಡೆದೆ', ದುನಿಯಾ ವಿಜಯ 'ಕಂಠೀರವ' ಮತ್ತು ಶಿವರಾಜ್‌ಕುಮಾರ್ ನಟಿಸಿದ್ದ 'ತವರಿನ ಸಿರಿ' ಚಿತ್ರಗಳು ಕೂಡ ರಾಮುಗೆ ಭರ್ಜರಿ ಗೆಲುವನ್ನು ತಂದುಕೊಟ್ಟಿರಲಿಲ್ಲ.

ಹೀಗೆ ಸರಿಸುಮಾರು ಹತ್ತು ಚಿತ್ರಗಳು ಸಾಲುಸಾಲಾಗಿ ಸೋತಿದ್ದರಿಂದ ರಾಮು ಸದ್ಯದಲ್ಲೇ ಯಾವ ಸಿನಿಮಾ ನಿರ್ಮಾಣಕ್ಕೂ ಮುಂದಾಗಲಾರರು ಎಂದು ಗಾಂಧಿನಗರದ ಜನ ಲೆಕ್ಕ ಹಾಕಿದ್ದರು. ಆದರೀಗ ರಾಮು ಎಲ್ಲರೂ ಅಚ್ಚರಿಗೊಳ್ಳುವಂತೆ ಮೂರು ಹೊಸ ಯೋಜನೆಗಳಿಗೆ ಮುಂದಾಗಿದ್ದಾರೆ. ಅದರಲ್ಲೂ ವಿಜಯ್ ನಟಿಸಲಿರುವ ಮತ್ತು ಪಿ.ಎನ್.ಸತ್ಯ ನಿರ್ದೇಶಿಸಲಿರುವ 'ಶಿವಾಜಿನಗರ' ಚಿತ್ರ ಗೆದ್ದೇ ಗೆಲ್ಲುತ್ತದೆ ಎಂಬ ನಂಬಿಕೆ ರಾಮು ಅವರದ್ದು.


ತಮ್ಮ ಸಿನಿಮಾ ಗಲ್ಲಾಪೆಟ್ಟಿಗೆಯಲ್ಲಿ ಗೆದ್ದರೂ, ಸೋತರೂ ತಾವು ಹೊಸ ಸಿನಿಮಾ ಮಾಡಲು ಹಿಂಜರಿಯುವುದಿಲ್ಲ ಎಂದು ಕೋಟಿ ಖ್ಯಾತಿಯ ರಾಮು ಮತ್ತೆ ತೋರಿಸಿದ್ದಾರೆ.

● ಶೆಣೈ

ಬಿಗ್‌ಬಾಸ್ ಕರಾಮತ್ತು

ಕನ್ನಡ ಚಿತ್ರರಂಗದಲ್ಲಿ ಈಗ ಪ್ರಚಾರದ ಭರಾಟೆ ... ಶೈಲಿ ಬದಲಾಗುತ್ತಿದೆ. ಇದಕ್ಕೆ ಇತ್ತೀಚಿನ ಉದಾಹರಣೆ ಸುದೀಪ್ ನಾಯಕನಾಗಿ ನಟಿಸಿರುವ 'ಬಚ್ಚನ್' ಚಿತ್ರದ ಕ್ಯಾಸೆಟ್ ಬಿಡುಗಡೆ ಸಮಾರಂಭ.

ಸುದೀಪ್ ಈಗ 'ಈ ಟಿವಿ'ಯಲ್ಲಿ 'ಬಿಗ್ ಬಾಸ್' ... ಕಾರ್ಯಕ್ರಮವನ್ನು ನಿರೂಪಿಸುತ್ತಿದ್ದಾರೆ. ಮೊನ್ನೆ





ಈ ಕಾರ್ಯಕ್ರಮದಲ್ಲಿ 'ಬಚ್ಚನ್' ಚಿತ್ರದ ನಿರ್ದೇಶಕ ಶಶಾಂಕ್, ಸಂಗೀತ ನಿರ್ದೇಶಕ ಹರಿಕೃಷ್ಣ ಮತ್ತು 'ಪ್ಯಾರ್‌ಗೆ ಆಗ್ಬಿಟ್ಟೈತೆ' ಖ್ಯಾತಿಯ ಪರೋಲ್ ಯಾದವ್ ಅವರೊಂದಿಗೆ ಸುದೀಪ್ 'ಬಚ್ಚನ್' ಚಿತ್ರದ ಕ್ಯಾಸೆಟ್‌ಅನ್ನು ಬಿಡುಗಡೆ ಮಾಡಿದರು.

ಹೀಗೆ ಮಾಡುವ ಮೂಲಕ ತಮ್ಮ ಚಿತ್ರದ ಬಗ್ಗೆ ಲಕ್ಷಾಂತರ ವೀಕ್ಷಕರಿಗೆ ಸುದೀಪ್ ಟಿವಿ ಮೂಲಕ ತಿಳಿಸಿದರಲ್ಲದೆ, ಕ್ಯಾಸೆಟ್ ಬಿಡುಗಡೆ ಸಮಾರಂಭಕ್ಕಾಗಿ ವೆಚ್ಚವಾಗುತ್ತಿದ್ದ ಲಕ್ಷಾಂತರ ರೂಪಾಯಿಗಳನ್ನೂ ನಿರ್ಮಾಪಕರಿಗೆ ಉಳಿಸಿದರು. ಇದು ಜಾಣತನವಲ್ಲದೆ ಇನ್ನೇನು? ○

ವೀಣಾ ಮಲ್ಲಿಕ್ ಮದುವೆ!



ಪಾಕಿಸ್ತಾನದ ವಿವಾದಾತ್ಮಕ ನಟಿ ವೀಣಾ ಮಲ್ಲಿಕ್ ಮೊನ್ನೆ ನಮ್ಮ ಸಿನಿಮಾ ಪತ್ರಕರ್ತರನ್ನು ಚೆನ್ನಾಗಿ ಯಾಮಾರಿಸಿದರು.

ವಿಷಯ ಇಷ್ಟೇ: ಸದ್ಯ ಕನ್ನಡ ಚಿತ್ರ ಒಂದರಲ್ಲಿ ನಟಿಸುತ್ತಿರುವ ವೀಣಾ ಮಲ್ಲಿಕ್ "ನಾನು ಮದುವೆ ಆಗಿದ್ದೇನೆ" ಎಂದು ಟ್ವಿಟರ್‌ನಲ್ಲಿ ಬರೆದುಕೊಂಡಿದ್ದರು. ಅದನ್ನು ಓದಿದ ನಮ್ಮ ಸಿನಿಮಾ ಪತ್ರಕರ್ತರು ಅದರ ಸತ್ಯಾಸತ್ಯತೆಯನ್ನು ಪರಿಶೀಲಿಸಲು ಹೋಗದೆ ಅದನ್ನು ತಮ್ಮ ತಮ್ಮ ಪತ್ರಿಕೆಗಳಲ್ಲಿ ವರದಿ ಮಾಡಿಬಿಟ್ಟರು. ಅವರು ಅದನ್ನು ಮುದ್ರಿಸಿದ ನಂತರವೇ ಅವರೆಲ್ಲರಿಗೆ ಗೊತ್ತಾಗಿದ್ದು: ಆಕೆ ಎಲ್ಲರನ್ನೂ ಏಪ್ರಿಲ್ ಫೂಲ್ ಮಾಡಿದ್ದರು ಎಂದು.

ಬಿಸಿಬಿಸಿ ಸುದ್ದಿಯನ್ನು ಪ್ರಕಟಿಸುವ ಪೈಪೋಟಿಯಲ್ಲಿ ಅದರ ಸತ್ಯಾಸತ್ಯತೆಯನ್ನು ಪರಿಶೀಲಿಸುವ ಗೋಜಿಗೂ ಹೋಗದ ಪತ್ರಕರ್ತರು ಪಾಕಿಸ್ತಾನದ ನಟಿಯಿಂದಾಗಿ ಫೂಲ್‌ಗಳಾಗಿದ್ದು ಮಜವಾಗಿದೆ. ○

...ಳ್ಳಬಹುದೆಂಬ ಮೂರ್ಖತನವಿದೆ. 'ಮುಗ್ಧತೆ' ಮತ್ತು 'ಮೂರ್ಖತೆ' ಇವೇ ಮಕ್ಕಳ ಮತ್ತು ಹಿರಿಯರ ನಡುವಿನ ...ಧಾನ ವ್ಯತ್ಯಾಸ!

ಮಕ್ಕಳು ಇತರರಿಗೆ ಉಪಕಾರ ಮಾಡಲು, ಲೋಕ ಕಲ್ಯಾಣಕ್ಕಾಗಿ ತಾವು ಬೊಂಬೆ ಮದುವೆ ಆಟ ಆಡುವುದೆಂದು ...ಸಿ ಬಿಡುವುದಿಲ್ಲ, ಆದರೆ ದೊಡ್ಡವರು ಯಾವುದೇ ...ವರ ಆಟ ಆಡಲಿ ಅದು ಲೋಕಕಲ್ಯಾಣಕ್ಕಾಗಿ, ಜನ ಕಲ್ಯಾಣಕ್ಕಾಗಿ ಎಂದು ಬೂಸಿ ಬಿಡುತ್ತಾರೆ ಮತ್ತು ಆ ಮೂಲಕ ತಮ್ಮ ಸ್ವಾರ್ಥ ಮುಚ್ಚಿಡುತ್ತಾರೆ.

ತಿರುಪತಿಯವರ ಮೊಬೈಲ್ ಕಲ್ಯಾಣೋತ್ಸವವನ್ನು ...ಮಂತ ಶೂದ್ರರಲ್ಲಿ ಪ್ರಚಾರ ಮಾಡಲು ಕೆಲವು ಸ್ಥಳೀಯ



...ಭಾವಿ ವೈದಿಕರನ್ನು ಮತ್ತು ಜ್ಯೋತಿಷಿಗಳನ್ನು ...ಬ್ರೋಕರ್‌ಗಳಾಗಿ ನೇಮಿಸಲಾಗಿದೆ. ಒಟ್ಟಾರೆ ದೇವರ ಮದುವೆಗೂ ಮ್ಯಾಚ್ ಮೇಕರ್/ಬ್ರೋಕರ್ ಬೇಕು!

- ಪ್ರವೀಣ್ ಎಸ್. ಶೆಟ್ಟಿ, ಮಂಗಳೂರು

ಪತ್ರಿಕೆಯ ಏಪ್ರಿಲ್ 3, 2013ರ ಸಂಚಿಕೆಯಲ್ಲಿ ...'ಚಂದ್ರು' ವಿವಾದ ಮಾಡುತ್ತಾನಾ?' ಎಂಬ ಶೀರ್ಷಿಕೆಯ ...ಬರಹದಲ್ಲಿ 'ಚಂದ್ರು' ಎನ್ನುವ ಸಿನಿಮಾ ಹಂಚಿಕೆಯ ವಿವರವನ್ನು ಪ್ರಕಟಿಸಿರುವಿರಿ. ತಮ್ಮ ಗಮನಕ್ಕೆ ತರಬೇಕಿರುವ ವಿಷಯವೆಂದರೆ ರೂಪಾ ಅಯ್ಯರ್ ನಿರ್ದೇಶಿಸಿರುವ ಸಿನಿಮಾದ ಶೀರ್ಷಿಕೆ 'ಚಂದ್ರ' ಎಂದು. ಆದರೆ ನೀವು 'ಚಂದ್ರು' ಎಂದು ಮುದ್ರಿಸಿದ್ದೀರಿ. ಹಾಗೆಯೇ 'ಬಚ್ಚನ್' ಚಿತ್ರಕ್ಕೆ 'ಬಚನ್' ಎಂದು ಮುದ್ರಣಗೊಂಡಿದೆ. 'ಲೂಜ್‌ಗಳು' ಚಿತ್ರದ ಹೆಸರನ್ನು 'ಲೂಸುಗಳು' ಎಂದು ಮುದ್ರಿಸಿದ್ದೀರಿ.



ಯಾವಾಗಲೂ ನಿಮ್ಮ ಪತ್ರಿಕೆಯಲ್ಲಿ ಸಿನಿಮಾಗಳ ಹೆಸರುಗಳು, ತಂತ್ರಜ್ಞರ ಹೆಸರುಗಳು ತಪ್ಪಾಗಿ ಪ್ರಕಟಣೆಗೊಂಡಿರುತ್ತದೆ. ಹೆಸರುಗಳಲ್ಲೇ ಇಷ್ಟೊಂದು ತಪ್ಪುಗಳಾದರೆ ಸುದ್ದಿಗಳು ಎಷ್ಟರಮಟ್ಟಿಗೆ ನಿಜವಾಗಿರಲು ಸಾಧ್ಯ? ತಿಳಿಸಿ.

- ವಿಜಯಲಕ್ಷ್ಮಿ, ಈ ಮೇಲ್ ಮೂಲಕ

ರಾಸಲೀಲಾ ಪ್ರವೀಣ, ರೇವ್ ಪಾರ್ಟಿ ಧುರೀಣ ರಘುಪತಿ ಭಟ್ಟನ ಕಾಮಪಿಪಾಸುತನದ ಬಗ್ಗೆ ಪತ್ರಿಕೆ ಹೇಳುತ್ತಿದ್ದದ್ದು ನಿಜವಾಗಿದೆ. ಅಂದಹಾಗೆ ಆರೆಸ್ಸೆಸ್ಸಿನ ಕಿಲಾಡಿಗಳು ಈಗ ಎಲ್ಲಿದ್ದಾರೆ? ಪ್ರತಾಪ ಸಿಮ್ಹ ಈಗ ಏನು ಬರೆಯಬಹುದು ಈ ರಾಸಲೀಲಾ ಸೀಡಿಯ ಕುರಿತು?

ಗುಜರಾತಿನದ್ದು ಅಭಿವೃದ್ಧಿ ಎನ್ನುವುದಾದರೆ ಕೇರಳ, ಹರಿಯಾಣದಂತಹ ರಾಜ್ಯಗಳೂ ಆರ್ಥಿಕ ರಂಗದಲ್ಲಿ ಸಾಧಿಸಿದ ಅಭಿವೃದ್ಧಿ ಕಡಿಮೆ ಏನಲ್ಲ. ಆದರೆ ಆ ರಾಜ್ಯಗಳ ನಾಯಕರು ಮೋದಿಯಂತೆ ರಕ್ತದಲ್ಲಿ ಸ್ನಾನ ಮಾಡಿ ಬಂದಿಲ್ಲ. ಬಂಡವಾಳಿಗರ ಪರವಾದ ಮಾಧ್ಯಮಗಳಿಗೆ ಅಮೆರಿಕಾ ಅಂದರೆ ಬಹಳ ಪ್ರೀತಿ. ಆ ದೇಶ ಕೂಡ ಸಾವಿನ ವ್ಯಾಪಾರ ಅಲ್ಲವೇ? ಅಂದಮೇಲೆ 'ಇಂಡಿಯನ್ ಮರ್ಚೆಂಟ್ ಆಫ್ ಡೆತ್' ಮೋದಿ ಅವರಿಗೆ ಇಷ್ಟವಾಗಬೇಕಲ್ಲ.

- ರವಿಕುಮಾರ್, ಹಾಸನ

ಏಪ್ರಿಲ್ 10, 2013ರ ಸಂಚಿಕೆಯ ಸಂಪಾದಕೀಯ 'ಸಿನಿಮಾ ನಟರು ದೇಶಕ್ಕಿಂತ ದೊಡ್ಡವರಲ್ಲ' ತುಂಬಾ ಅರ್ಥಪೂರ್ಣವಾಗಿತ್ತು. ಭೌತಿಕ ಸಂಪತ್ತಿನ ಯಾವ ಋಣಾನುಬಂಧನಕ್ಕೂ ಒಳಗಾಗದ ನಾಯಿಗಳಿಗೆ ದೇಶದ ಸಂವಿಧಾನ, ಪ್ರಜಾಪ್ರಭುತ್ವ ಅರಿಯಲಿಕ್ಕೆ ಸಾಧ್ಯವೇ ಇಲ್ಲ. ಆದರೆ ಇವೆಲ್ಲವುಗಳನ್ನು ಅರಿಯಲೇಬೇಕಾದ ಮನುಷ್ಯನ ಕೆಲಸವನ್ನು ಜಂಜೀರ್ ತರಹದ ನಾಯಿ ನಿರ್ವಹಿಸಿ ಮನುಷ್ಯ ಯಾವ ಕೀಳುಮಟ್ಟಕ್ಕೆ ಇಳಿದಿದ್ದಾನೆ ಎಂಬುದನ್ನು ತೋರಿಸಿದೆ.

ಪ್ರಜಾಪ್ರಭುತ್ವ, ಸಂವಿಧಾನ ಪಡೆದುಕೊಂಡು ಬದುಕುತ್ತಿರುವ ಮನುಷ್ಯರಿಗಿಂತ ಯಾವುದನ್ನೂ ಅರಿಯದ ನಾಯಿಗಳು ವಿಶ್ವಾಸಕ್ಕೆ ಒಳಗಾಗಿವೆ. ಮನುಷ್ಯತ್ವ ಗೊತ್ತಿಲ್ಲದ ಮನುಷ್ಯರಿಗೆ ಕಾಲಲ್ಲಿಯ ಚಪ್ಪಲಿ ತೆಗೆದು ಹೊಡೆದಂತಾಗಿದೆ.


ನಿಮ್ಮ ವಿಚಾರ ಹಾಗು ನಿಲುವಿಗೆ ಮತ್ತೊಮ್ಮೆ ಧನ್ಯವಾದಗಳು.

- ಡಾ. ಕೆ.ಎನ್.ದೊಡ್ಡಮನಿ, ಬೆಳಗಾವಿ

ಪತ್ರಿಕೆಯಲ್ಲಿ ಸಂಜಯ್ ದತ್ ಬಗ್ಗೆ ಗೌರಿ ಬರೆದದ್ದು, ರಾಜಕೀಯ ಮಾಲೀಕರ ಬಗ್ಗೆ ಪಾರ್ವತೀಶ ಬರೆದದ್ದು ಮತ್ತು ಸುಂದರ ಬೆಂಗ್ರೆ ಬಗ್ಗೆ ಫಣಿರಾಜ್ ಬರೆದದ್ದನ್ನು ಓದಿದೆ.

ಆದರೆ ಉಡುಪಿಯ ಬಿಜೆಪಿ ಶಾಸಕ ರಘುಪತಿ ಭಟ್ಟನ ಬಗ್ಗೆ ಓದಿ ಯಾಕೋ ಬೇಜಾರಾಯಿತು. ಆತನನ್ನು 'ಹಲ್ಕಾ' ಎಂದು ಕರೆದದ್ದು ಸರಿಯೇ? ಆತ ಯಾರೊಂದಿಗೋ ಲೈಂಗಿಕ ಕ್ರಿಯೆಯಲ್ಲಿ ತೊಡಗಿದ್ದು ಆತನ ವೈಯಕ್ತಿಕ ವಿಚಾರ. ಆತ ಯಾರನ್ನೋ ರೇಪ್ ಮಾಡಲಿಲ್ಲವಲ್ಲ? ಆತ ಯಾರದ್ದೋ ಕುತಂತ್ರಕ್ಕೆ ಬಲಿಯಾಗಿದ್ದಾರೆ.

ಗೌರಿ ಅವರು ಹೇಗೆ ತಮ್ಮ ಲೇಖನದಲ್ಲಿ ಕಾನೂನಿನ ಪ್ರಕಾರ ನಟ ಸಂಜಯನಿಗೆ ಶಿಕ್ಷೆಯಾಗಬೇಕೆಂದು ಹೇಳುತ್ತಾರೋ ಹಾಗೆಯೇ ನಾನು ಹೇಳುತ್ತೇನೆ "ರಘುಪತಿ



ಕಾನೂನುಬಾಹಿರವಾದದ್ದನ್ನು ಮಾಡಿದ್ದರೆ ಆತನಿಗೆ ಶಿಕ್ಷೆ ಆಗಲಿ. ಇಲ್ಲದಿದ್ದರೆ ಇಲ್ಲ" ಎಂದು.

ನೋಡಿ, ದನದ ಮಾಂಸ ತಿಂದವರ ಮೇಲೆ ದಾಳಿ, ಚರ್ಚ್‌ಗಳ ಮೇಲೆ ದಾಳಿ, ಹುಡುಗರೊಂದಿಗಿದ್ದರೆ ಹುಡುಗಿಯರಿಗೆ ಏಟು. ಇದಕ್ಕೆಲ್ಲ ಚೆಡ್ಡಿಗಳು ಕಾರಣ. ಚೆಡ್ಡಿಗಳು ಮಾಡುವುದು ತಪ್ಪೇ.. ಅದರಲ್ಲಿ ಎರಡು ಮಾತಿಲ್ಲ. ಆದರೆ ಅವರನ್ನು 'ಹಲ್ಕಾಗಳು' ಎಂದು ಕರೆದಾಕ್ಷಣ ಬದಲಾಗುವ ಜಾತಿಯಲ್ಲ ಅದು.

- ಅಭಿನಂದನ ಬಳ್ಳಾರಿ, ಈ ಮೇಲ್ ಮೂಲಕ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಮಿಂಚಂಚೆ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕವಾಗಿ ಕಳುಹಿಸಬಹುದು.

Registered No.KA/RNP/BGS/2036/2011-13 Posted at : GPO, Bangalore-01. Friday R B P LANKESH, Kannada Weekly

ದುರಂತ ನಾಯಕಿ 'ರಗಳೆ' ರಿಷಿಕಾ



'ರಿಷಿಕಾ ವಿತ್ ರಗಳೆ' ಎಂಬ ಕಾರ್ಯಕ್ರಮ ಜೀ ಟಿವಿಯಲ್ಲಿ ಇತ್ತೀಚೆಗೆ ಪ್ರಸಾರವಾಗುತ್ತಿರುವುದು ನಿಮಗೆಲ್ಲ ಗೊತ್ತೆ ಇದೆ. ಕನ್ನಡದ ಖ್ಯಾತ ನಿರ್ದೇಶಕ ರಾಜೇಂದ್ರ ಸಿಂಗ್ ಬಾಬು ಅವರ ಕೊನೆ ಪುತ್ರಿ ರಿಷಿಕಾ ಸಿಂಗ್ ಈ ಕಾರ್ಯಕ್ರಮವನ್ನು ನಡೆಸಿಕೊಡುತ್ತಿದ್ದಾರೆ.

ಈ ಕಾರ್ಯಕ್ರಮದಲ್ಲಿ ರಿಷಿಕಾ ತಾರೆಯರ ಖಾಸಗಿ ಜೀವನದ ಕೆಲವು ಅಧ್ಯಾಯಗಳನ್ನು, ಗಾಸಿಪ್‌ಗಳನ್ನು, ಪ್ರೇಮಪುರಾಣಗಳನ್ನು ಬಿಚ್ಚಿಡುತ್ತಿದ್ದರು. ಕನ್ನಡ ಚಿತ್ರರಂಗದ ಯುವ ಜೋಡಿ ದಿಗಂತ್ ಮತ್ತು ಐಂದ್ರಿತಾ ರೈ "ನಾವಿಬ್ಬರು ಪರಸ್ಪರ ಪ್ರೀತಿಸುತ್ತಿರುವುದು ನಿಜ" ಎಂದು ಮೊದಲ ಬಾರಿಗೆ ಬಹಿರಂಗಪಡಿಸಿದ್ದು ಇದೇ ಕಾರ್ಯಕ್ರಮದಲ್ಲಿ, ಅದಾದನಂತರ ರಾಗಿಣಿ ಮತ್ತು ಯೋಗೇಶ್ ನಡುವಿನ ಸಂಬಂಧವನ್ನೂ ಕೆದಕುವ ಒಂದು ಕಾರ್ಯಕ್ರಮ ಮೂಡಿಬಂದಿತ್ತು.

ಇಂತಹ ರಿಷಿಕಾ ಸಿಂಗ್ ಸ್ವತಃ ಈಗ ಒಂದು ದೊಡ್ಡ ರಗಳೆಯಲ್ಲಿ ಸಿಲುಕಿಕೊಂಡಿರುವುದು ದುರಂತವೇ ಸರಿ.

ರಿಷಿಕಾ ವಿತ್ ರಗಳೆ' ಕಾರ್ಯಕ್ರಮವನ್ನು ನಡೆಸಿಕೊಡುತ್ತಿದ್ದ ಸಂದರ್ಭದಲ್ಲೇ ಕೇರಳ ಮೂಲದ ಯುವಕ ಸಂದೀಪ್ ಮತ್ತು ರಿಷಿಕಾ ನಡುವೆ ಪ್ರೇಮಾಂಕುರವಾಗಿತ್ತು, ಮನೆಯವರ ವಿರೋಧದ ನಡುವೆಯೂ ಅವರಿಬ್ಬರ ಪ್ರಣಯದಾಟ ಮುಂದುವರೆದಾಗ ವಿಧಿ ಇಲ್ಲದೆ ಅವರಿಬ್ಬರ ಮನೆಯವರು ಅವರ ಮದುವೆಗೆ ಸಮ್ಮತಿಸಿದ್ದರು. ಉದ್ಯಮದ ಕೆಲವೇ ಕೆಲವರ ಸಮ್ಮುಖದಲ್ಲಿ ಎಂಗೇಜ್‌ಮೆಂಟ್ ಕಾರ್ಯಕ್ರಮ ಕೂಡ ನಡೆದುಹೋಗಿತ್ತು.

ಇನ್ನೇನು ಕೆಲವೇ ವಾರಗಳಲ್ಲಿ ಇವರ ಮದುವೆ ಕಾರ್ಯಕ್ರಮ ನಡೆಯಬೇಕು ಅನ್ನುವಷ್ಟರಲ್ಲಿ ಒಂದು ದುರದೃಷ್ಟಕರ ಬೆಳವಣಿಗೆ ನಡೆಯಿತು. ಅದೇನೆಂದರೆ ಸಂದೀಪ್ ರಿಷಿಕಾಳಿಗೆ ಕೈಕೊಟ್ಟಿದ್ದು, ಇದರಿಂದ ಮನನೊಂದ ರಿಷಿಕಾ ಆತ್ಮಹತ್ಯೆಗೆ ಯತ್ನಿಸಿದಳು. ಆಕೆಯ ಸಹೋದರ ಆದಿತ್ಯ ಇದನ್ನು ಅರಿತು ಆಕೆಯನ್ನು ಸೂಕ್ತ ಸಮಯದಲ್ಲಿ ಆಸ್ಪತ್ರೆಗೆ ಸೇರಿಸಿ ಚಿಕಿತ್ಸೆ ಕೊಡಿಸಿದ್ದರಿಂದ ಆಕೆಯ ಪ್ರಾಣಕ್ಕೆ ಅಪಾಯ ತಪ್ಪಿತು. ರಿಷಿಕಾ ಈಗ ಮಾನಸಿಕ ಖಿನ್ನತೆಗೆ ಒಳಗಾಗಿದ್ದು ಅದರಿಂದ ಹೊರಬರಲು ಆಕೆಗೆ ಸ್ವಲ್ಪ ಸಮಯ ಬೇಕಾಗುತ್ತದೆ ಎಂದು ಹೇಳಲಾಗುತ್ತಿದೆ.



ಕನ್ನಡ ಚಿತ್ರರಂಗದ ಬಾಲ್ಯಾವಸ್ಥೆಯಿಂದಲೂ ಸಿಂಗ್ ಕುಟುಂಬದ ಸದಸ್ಯರು ಈ ಕ್ಷೇತ್ರದಲ್ಲಿ ಸಕ್ರಿಯರಾಗಿದ್ದಾರೆ. ರಾಜೇಂದ್ರ ಸಿಂಗ್ ಬಾಬು ಅವರ ತಂದೆ ಆ ಕಾಲದಲ್ಲಿ ದೊಡ್ಡ ನಿರ್ಮಾಪಕರಾಗಿದ್ದರೆ ಅವರ ತಾಯಿ ಕನ್ನಡ ಚಿತ್ರರಂಗದ ಹಿರಿಯ ನಟಿಯರಲ್ಲಿ ಒಬ್ಬರು, ಸ್ವತಃ ಸಿಂಗ್ ಬಾಬು ನಿರ್ದೇಶಕರಾಗಿ ದೊಡ್ಡ ಹೆಸರು ಮಾಡಿದವರು. ಅವರ ಸಹೋದರಿ ವಿಜಯಲಕ್ಷ್ಮಿ ಸಿಂಗ್ ಕೂಡ ನಟಿ ಮತ್ತು ನಿರ್ದೇಶಕಿ. ವಿಜಯಲಕ್ಷ್ಮಿ ಅವರ ಪತಿ ಜೈಜಗದೀಶ್ ಕೂಡ ನಟ ಮತ್ತು ನಿರ್ಮಾಪಕ. ಸಿಂಗ್ ಅವರ ಪುತ್ರ ಆದಿತ್ಯ ಕೂಡ ಚಿತ್ರರಂಗದಲ್ಲಿರುವವರೇ.

ಇಂತಹ ಕುಟುಂಬದ ಪುತ್ರಿ ರಿಷಿಕಾ ಸ್ವಂತ ಆಸಕ್ತಿಯಿಂದ ಸಿನಿಮಾಕ್ಕೆ ಬಂದವ[ಳು] ತಂದೆಯ ವಿರೋಧವನ್ನು ಲೆಕ್ಕಿಸದೆ 'ಕಂಠೀರವ' ಚಿತ್ರದಲ್ಲಿ ದುನಿಯಾ ವಿಜಯ್ ಜೊ[ತೆ] ನಾಯಕಿಯಾಗಿ ನಟಿಸಿದವಳು. ಅದಾದನಂತರ ಈಕೆ ಒಂದೆರಡು ಸಿನಿಮಾಗಳ[ಲ್ಲಿ] ಕಾಣಿಸಿಕೊಂಡಿದ್ದಳು. ಆಕೆಯ ದುರದೃಷ್ಟಕ್ಕೆ ಆಕೆ ಎಷ್ಟೇ ಪ್ರಯತ್ನಿಸಿದರೂ ಆಕೆ ದೊ[ಡ್ಡ] ನಾಯಕಿ ಆಗಲಿಲ್ಲ, ಇಂತಹ ಸಂದರ್ಭದಲ್ಲೇ ಆಕೆ ಟಿವಿ ಕಾರ್ಯಕ್ರಮ ನಡೆಸಿಕೊಡ[ಲು] ಮುಂದಾಗಿದ್ದು.

ಕಷ್ಟಗಳನ್ನು ಮತ್ತು ಸವಾಲುಗಳನ್ನು ಧೈರ್ಯವಾಗಿ ಎದುರಿಸುವ ಛಲವನ್ನು ತೋರಿ[ದ] ರಿಷಿಕಾ ಕಡೆಯಿಂದ ಇಂತಹ ಬೇಸರದ ಸುದ್ದಿಯನ್ನು ಯಾರೂ ನಿರೀಕ್ಷಿಸಿರಲಿಲ್ಲ.

ಈಗ ಸೋಲು ಮತ್ತು ಸಾಲದ ಭಾರದಡಿ ಕುಸಿದಿರುವ ರಾಜೇಂದ್ರ ಸಿಂಗ್ ಬಾ[ಬು] ಮತ್ತು ಅವರ ಕುಟುಂಬಕ್ಕೆ ರಿಷಿಕಾಳ ನೋವನ್ನು ನಿವಾರಿಸುವ ಶಕ್ತಿ ಸಿಗಲಿ ಎಂದ[ು] ನಾವು ಹಾರೈಸಬಹುದು.

• ಶ್ರೆ...



ಅಂದರ್ ಬಾಹರ್

ಪಾರ್ವತಿ ಮೆನನ್

ಯಾವುದೂ ಶಾಶ್ವತವಲ್ಲ....

ಜಗ್ಗೇಶ್ ಅವರ ಸಹೋದರ ಕೋಮಲ್ 'ವೀರ್ ಸಾಧಕ್' ಎಂಬ ಹೊಸ ಚಿತ್ರದಲ್ಲಿ ನಟಿಸುತ್ತಿದ್ದಾರೆ. ಇದರ ಮುಹೂರ್ತ ಮೊನ್ನೆ ಸದ್ದುಗದ್ದಲವಿಲ್ಲದೆ ಸರಳವಾಗಿ ನಡೆದಿದೆ. ಈ ಚಿತ್ರವನ್ನು ಕಿಂಗ್ ರವಿಕುಮಾರ್ ನಿರ್ಮಿಸುತ್ತಿರುವುದು ಅಚ್ಚರಿ ಮೂಡಿಸಿದೆ. ಯಾಕೆಂದರೆ ಕೋಮಲ್ ನಟಿಸಿರುವ 'ರಾಧಿಕಾಳ ಗಂಡ' ಎಂಬ ಚಿತ್ರವನ್ನು ಇದೇ ರವಿಕುಮಾರ್ ನಿರ್ಮಿಸಿದ್ದು ಇವರಿಬ್ಬರ ನಡುವೆ ಸಣ್ಣಮಟ್ಟ ವೈಮನಸ್ಸಿಗೆ ಕಾರಣವಾಗಿತ್ತು.

ಚಿತ್ರರಂಗದಲ್ಲಿ ಯಾರೂ ಶಾಶ್ವತ ಶತ್ರುಗಳೂ ಅಲ್ಲ, ಶಾಶ್ವತ ಮಿತ್ರರೂ ಅಲ್ಲ ಎಂಬ ಹಳೆಯ ಮಾತನ್ನು



ಕೋಮಲ್ ಮತ್ತು ರವಿಕುಮಾರ್ ಮತ್ತೊಮ್ಮೆ ಸಾಬೀತುಪಡಿಸಿದ್ದಾರೆ.

ಅಂದಹಾಗೆ ಈ ಚಿತ್ರವನ್ನು ನಾಯಕ ನಟ ಸುದೀಪ್ ಅವರ ಹತ್ತಿರದ ಸಂಬಂಧಿ ಸುರೇಶ್ ರಾಜ್ ನಿರ್ದೇಶಿಸುತ್ತಿದ್ದಾರೆ. ಚಿತ್ರದ ಹೆಸರು 'ಮೀರ್ ಸಾಧಕ್', 'ವೀರ್ ಸಾಧಕ್' ಅಲ್ಲ ಎಂಬುದನ್ನು ಓದುಗರು ಗಮನಿಸಬೇಕು.

ಆದರೆ ಈ ಚಿತ್ರ ಮುಗಿಯುವ ಹೊತ್ತಿಗೆ ಯಾರು ಯಾರ ಪಾಲಿಗೆ 'ವೀರ್ ಸಾಧಕ್' ಆದರೆ ಅದಕ್ಕೆ ನಾವು ಜವಾಬ್ದಾರರಲ್ಲ.

ಅವಸರದ ಅಡುಗೆ



ಅಮೋಘ ಏಳನೇ ಬಾರಿ ರಾಷ್ಟ್ರ ಪ್ರಶಸ್ತಿ ಪಡೆದಿರುವ ನಿರ್ದೇಶಕ ಪಿ.ಶೇಷಾದ್ರಿಯವರ 'ಭಾರತ್ ಸ್ಟೋರ್ಸ್' ಸಿನಿಮಾದ ಬಗ್ಗೆ ಒಂದೆರಡು ಅನಿಸಿಕೆಗಳು.

ಕೇಂದ್ರ ಸರ್ಕಾರ ಇತ್ತೀಚೆಗೆ ಚಿಲ್ಲರೆ ವ್ಯಾಪಾರ ಕ್ಷೇತ್ರದಲ್ಲಿ ನೇರ ವಿದೇಶಿ ಬಂಡವಾಳ ಹೂಡಿಕೆಗೆ ಅನುವು ಮಾಡಿಕೊಟ್ಟ ಸಮಯದಲ್ಲೇ ಶೇಷಾದ್ರಿ ಈ ಚಿತ್ರವನ್ನು ಮಾಡಲು ಹೊರಟರು. ಹೀಗಾಗಿ ಇದು ಸಮಕಾಲೀನ ರಾಜಕೀಯ ಮತ್ತು ಸಾಮಾಜಿಕ ಕಥಾವಸ್ತುವನ್ನು ಹೊಂದಿರುವ ಚಿತ್ರ ಎನ್ನಬಹುದು.

ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ಬಂಡವಾಳ ಹೂಡಿಕೆಯಿಂದ ಭಾರತದಂತಹ ಬಡ ರಾಷ್ಟ್ರದಲ್ಲಿ ಚಿಲ್ಲರೆ ವ್ಯಾಪಾರದಲ್ಲಿ ತೊಡಗಿರುವ ಒಂದು ವರ್ಗವೇ ಸಂಪೂರ್ಣವಾಗಿ ಮಾಯವಾಗುತ್ತದೆ ಮತ್ತು ಆ ಮೂಲಕ ನಮ್ಮ ಸಂಸ್ಕೃತಿಯ ಮೇಲೂ ವಿದೇಶಿ ಸಂಸ್ಕೃತಿ ದಾಳಿ ಮಾಡುತ್ತದೆ ಎಂಬುದು 'ಭಾರತ್ ಸ್ಟೋರ್ಸ್' ಚಿತ್ರದ ಕಥೆ. ಈ ಚಿತ್ರದಲ್ಲಿ ಚಿಲ್ಲರೆ ವ್ಯಾಪಾರ ಮಾಡುವ ಶೆಟ್ಟಿಯೊಬ್ಬನ ಸುತ್ತ ಶೇಷಾದ್ರಿ ಕಥೆಯನ್ನು ಹೆಣೆದು ಅದಕ್ಕೆ ಒಂದಿಷ್ಟು ಸೆಂಟಿಮೆಂಟ್ಸ್ ಮತ್ತು ಫ್ಯಾಮಿಲಿ ಮೆಲೋಡ್ರಾಮಾದ ಲೇಪ ಹಚ್ಚಿದ್ದಾರೆ.

ಒಂದು ಅತ್ಯುತ್ತಮ ಕಥೆಯನ್ನು ಮನಮುಟ್ಟುವಂತೆ ನಿರೂಪಿಸುವ ಅವಕಾಶವನ್ನು ಶೇಷಾದ್ರಿ ಸರಿಯಾಗಿ ಉಪಯೋಗಿಸಿಕೊಂಡಿಲ್ಲ ಎಂದೇ ಹೇಳಬಹುದು. ಚಿತ್ರಕಥೆಯನ್ನು ಇನ್ನಷ್ಟು ಚುರುಕಾಗಿಸಿ, ನಮ್ಮ ಸಂಸ್ಕೃತಿ ಹಾಗೂ ಜೀವನಶೈಲಿಯ ಹಲವಾರು ಆಯಾಮಗಳನ್ನು ಅನಾವರಣಗೊಳಿಸುತ್ತ ಕಥೆಯನ್ನು ಇನ್ನಷ್ಟು ಕುತೂಹಲಕಾರಿಯಾಗಿ ನಿರೂಪಿಸಬಹುದಿತ್ತು.



ಶೇಷಾದ್ರಿ ಅವರ ಹಳೆಯ ಸಿನಿಮಾಗಳಿಗೆ ಹೋಲಿಸಿದರೆ ಇದನ್ನು ಅವರು ಅವಸರದಲ್ಲಿ ಮಾಡಿ ಮುಗಿಸಿದಂತಿದೆ. ಎಂದಿನಂತೆ ಪ್ರಮುಖ ಪಾತ್ರದಲ್ಲಿ ದತ್ತಣ್ಣ ಸಹಜವಾಗಿ ನಟಿಸಿ ಪಾತ್ರಕ್ಕೆ ಜೀವ ತುಂಬಿದ್ದಾರೆ. ಮಹೇಂದ್ರ ಸಿಂಹ ಅವರು ತಮ್ಮ ಚೊಚ್ಚಲ ಛಾಯಾಗ್ರಹಣದಲ್ಲಿ ಗಮನಸೆಳೆದಿದ್ದಾರೆ. ತಾಂತ್ರಿಕವಾಗಿ ಈ ಚಿತ್ರದ ಬಗ್ಗೆ ವಿಶೇಷವಾಗಿ ಹೇಳುವಂತಹದ್ದು ಏನೂ ಇಲ್ಲ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com